...ಲ್ಯಾಣ ಕಿರಣ

ಎಪ್ರಿಲ್ [redacted]

1990

ಬೆಲೆ ರೂ. ೩



ಕಲ್ಯಾಣ ಕಿರಣ

ಮಾಸ ಪತ್ರಿಕೆ ಏಪ್ರಿಲ್ 1990, ಬಿಡಿ ಸಂಚಿಕೆ 3 ರೂ.

ಬಸವ ಜಯಂತಿ ಸಂಚಿಕೆ ಸಂಪುಟ : 18 ಸಂಚಿಕೆ : 12

ವಾರ್ಷಿಕ ಚಂದಾ : 30 ರೂ. ಅಜೀವ ಸದಸ್ಯತ್ವ : 300 ರೂ

ಕಿರಣಗನ್ನಡಿ

ಮುಖ ಪುಟ : ಜಯಪುರದಲ್ಲಿರುವ ಬಿರ್ಲಾಮಂದಿರದ ಆವರಣದಲ್ಲಿರುವ ಯೋಗಿರಾಜ ಶಿವನ ಅಮೃತ ಶಿಲಾಮೂರ್ತಿ.

ಹೊದ್ದಿಕೆಯ 4 ನೇ ಪುಟ : ಜಯಪುರದಲ್ಲಿರುವ ಬಿರ್ಲಾ ನಿರ್ಮಾಣದ ಅಮೃತ ಶಿಲಾ ಮಂದಿರ.

ಛಾಯಾಗ್ರಾಹಕರು : ಪೂಜ್ಯ ಮಾತಾಜಿ.

ತಿದ್ದುಪಡಿ : ಪುಟ 58ರಲ್ಲಿ 200 ಎಂದು ತಪ್ಪಾಗಿ ಪ್ರಿಂಟಾಗಿದೆ, 300 ಎಂದು ಓದಿಕೊಳ್ಳಿರಿ.

…ನ ಮಧ್ಯದಿಂದಲೇ ನೀರಿನ ನೆರವಿನಿಂದಲೇ ಮುತ್ತು ತಯಾರಾದರೂ ಅದು ಜಲದ ವ್ಯಾಮೋಹವನ್ನು ಹೇಗೆ ಅಳಿದುಕೊಂಡು, ನಿರ್ಲಿಪ್ತ ಮುತ್ತು ಆಗಿರುತ್ತದೋ, ಹಾಗೆ ಬಸವಣ್ಣನವರ ಬದುಕು. ಅವರು ವಿವಾಹಿತರಾಗಿದ್ದರು, ಆದರೆ ಕೇವಲ ಮಡದಿ ಮಕ್ಕಳು ಬಂದುಬಾಂಧವರ ಮೋಹಪಂಜರದ ಅರಗಿಣಿಯಾಗಲಿಲ್ಲ. ಅವರಿಗಾಗಿ ಆಸ್ತಿಪಾಸ್ತಿ ಮಾಡುವ ಕೆಲಸದಲ್ಲೇ ನಿರತವಾಗಲಿಲ್ಲ. ಹೆಂಡತಿ ಮಕ್ಕಳು ಮೊಮ್ಮಕ್ಕಳು ಬಂಧುಬಾಂಧವರಿಗಾಗಿ ಎಷ್ಟೇ ಆಸ್ತಿ ಮಾಡುವ ಸಾಮರ್ಥ್ಯ ಇದ್ದರೂ, ಒಂದು ಎಲ್ಲೆಯಲ್ಲೇ ಆ ಗಳಿಕೆಯನ್ನು ಇರಿಸಿ, ತನ್ನ ಜೀವಿತದ ಸಮಯವನ್ನು, ಹಣವನ್ನು, ಚಿಂತನೆಯನ್ನು ಹೇಗೆ ಸಮಷ್ಟಿಯ ಉದ್ಧಾರಕ್ಕೆ ಮೀಸಲಿಡಬೇಕು ಎಂಬ ಬಗ್ಗೆ ಆಲೋಚಿಸಬೇಕು. ಆಗ ಗೃಹಸ್ಥ ಜೀವನ ಬಂಧನವಾಗದೆ ಬಂಧನದ ಬಿಡುಗಡೆಗೆ ಸಾಧನವಾಗುವುದು.

ಬಸವಣ್ಣನವರ ಕಾಯಕ ಜೀವನವಾದರೂ ಅಷ್ಟೆ. ಅವರ ಆಧ್ಯಾತ್ಮಿಕ ಪರಿಶುದ್ಧಿಗೆ ದೊಡ್ಡ ಸವಾಲು. ಬಹುದೊಡ್ಡ ಹುದ್ದೆಯಲ್ಲಿರುವವನಿಗೆ ಆಸೆ ತೋರುವವರು, ಆಮಿಷ ಒಡ್ಡುವವರು, ಅದಕ್ಕೆ ಬಲಿಯಾಗದಿದ್ದಾಗ ಒತ್ತಡ ತರುವವರು ಬಹಳ. ಇದರಿಂದ ಕಲಂಕಿತವಾಗದೆ ಇರುವುದು ದೊಡ್ಡ ಸಾಧನೆಯೇ ಸರಿ. ಒಮ್ಮೆ ಹಣ, ಕೀರ್ತಿ, ಜನಪ್ರಿಯತೆ ಬರತೊಡಗುತ್ತಿದ್ದಂತೆಯೇ ಅವುಗಳ ದಾಹ ಜಾಸ್ತಿಯಾಗಿ ವಿಪರೀತ ಲೌಕಿಕವಾಗುವವರೂ ಬಹಳ. ಆದರೆ ಬಸವಣ್ಣನವರು ಇದಕ್ಕೆ ಹೊರತು. ಈ ಭಾವನೆಯನ್ನೇ ವಚನವೊಂದರಲ್ಲಿ ದೃಢಪಡಿಸುವರು.

ನಾನು ಆರಂಭವ * ಮಾಡುವೆನಯ್ಯಾ ಗುರುಪೂಜೆಗೆಂದು
ನಾನು ಬೆಹಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯ ಜಂಗಮದಾಸೋಹಕ್ಕೆಂದು
ನಾನಾವ ಕರ್ಮಂಗಳ ಮಾಡಿದಡೆಯು
ಆ ಕರ್ಮಫಲ ಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರೀಯ ಮಾಡೆನು
ನಿಮ್ಮ ಸೊಮ್ಮಿಂಗೆ ಸವೆಸುವೆನು, ನಿಮ್ಮಾಣೆ, ಕೂಡಲಸಂಗಮದೇವಾ.

ಒಕ್ಕಲುತನ, ವ್ಯಾಪಾರ, ಇನ್ನೊಬ್ಬರ ಕೈಕೆಳಗಿನ ನೌಕರಿ ಇವು ಯಾವೇ ಉಪಜೀವನದ ಮಾರ್ಗಗಳಿರಲಿ. ಇವುಗಳ ಗಳಿಕೆಯನ್ನು ನಾನು ಗುರು-ಲಿಂಗ-ಜಂಗಮರ ಪೂಜೆ-ಸೇವೆಗೆ ಬಳಸುತ್ತೇನೆ. ಕಾಯಕ ಪ್ರತಿಫಲವನ್ನು ನನ್ನ ಉಪಜೀವನಕ್ಕೆ ಬಳಸಿ, ಉಳಿದುದನ್ನು ಸಮಾಜಕ್ಕೆ ವಿನಿಯೋಗಿಸುವೆ." ಎಂಬ ಮಾತು ಕಾಯಕ ಜೀವಿಗಳಿಗೆ ಬಲು ದೊಡ್ಡ ಮಾರ್ಗದರ್ಶಿಯಾಗಿದೆ.

---

* ಒಕ್ಕಲುತನ.

ಇಂತಹ ನಿರ್ಲಿಪ್ತ ಶರಣ ಬಾಳನ್ನು ಬಾಳಿದ ಬಸವಣ್ಣನವರು ಒದಿ... ಬದುಕನ್ನು, ಪರಿಸರವನ್ನು ಅವಕಾಶವನ್ನು ಶಿವನ ಪ್ರಸಾದವೆಂದು ಭಾವಿಸಿ ಸ್ವೀಕರಿಸಲು ಬೋಧಿಸುವರು.

ಕಲಿತನ ತನಗುಳ್ಳಡೆ ಸೂಜಿ ಬಾಳು ಮೊದಲಾಗಿ ಕಾದಲೇಬೇಕು
ಶರಣ ಪಥ ತನಗುಳ್ಳಡೆ ಶಿವಭಕ್ತರ ಮನೆಯ ಶಿವರಸವ
ಪಂಚಾಮೃತವ ಮಾಡಿಕೊಳ್ಳಲೇಬೇಕು.
ಭ್ರಾಂತು ವಿಡಿದು ಲಿಂಗಕ್ಕೋಗರವನರಸುವ
ಪಾತಕರ ಮೆಚ್ಚ ಕೂಡಲ ಸಂಗಮ ದೇವ.

ಒಬ್ಬ ಶೂರ ಇರುತ್ತಾನೆ. ಅವನು ಯಾವ ಸಿದ್ಧತೆಯೂ ಇಲ್ಲದೆ ಇರುವಾಗ ಕಳ್ಳರ ದಂಡು ಅಥವಾ ದರೋಡೆಗಾರರ ಗುಂಪು ಯಾರ ಮೇಲಾದರೂ ದಾಳಿ ಮಾಡುತ್ತದೆ. ಆಗ ಈತ 'ನನ್ನ ಬಳಿ ಅದಿದ್ದರೆ ಹಾಗೆ ಮಾಡುತ್ತಿದ್ದೆ ಇದಿದ್ದರೆ ಹೀಗೆ ಮಾಡುತ್ತಿದ್ದೆ' ಎಂದು ಕೊಚ್ಚಿಕೊಳ್ಳುವುದಕ್ಕಿಂತಲೂ: ಸಂಕಷ್ಟದ ಸಮಯದಲ್ಲಿ ಸೂಜಿ, ದೊಣ್ಣೆ ಏನಿದೆಯೋ ಅದರಿಂದಲೇ ದುಷ್ಟರನ್ನು ಎದುರಿಸಬೇಕು. ಅದೇ ರೀತಿ ಊಟದ ವಿಷಯದಲ್ಲೂ, ಶ್ರೀಮಂತರ ಮನೆಯಲ್ಲಿ ಅಡಿಗೆ ಹೆಚ್ಚು ಸುಸಂಸ್ಕೃತವಾಗಿಯೂ. ರುಚಿಯಾಗಿಯೂ ಇರುವುದು. ಅವರು ಯಾರೂ ಬಂದು ಈ ಶರಣನನ್ನು ಊಟಕ್ಕೆ ಕರೆದಿಲ್ಲ. ಆದರೆ ಒಬ್ಬ ಬಡಭಕ್ತ ಬಂದು ಪ್ರೀತಿ ಅಭಿಮಾನಗಳಿಂದ, ಭಯಭಕ್ತಿಯಿಂದ ಮನೆಗೆ ಬಂದು ಪ್ರಸಾದ ಆರೋಗಿಸಲು ಗೋಗರೆಯುತ್ತಾನೆ. ಆಗ ನಿಜ ಶರಣ, ನಿಜ ಮಹಾತ್ಮ ಏನನ್ನು ನೋಡಬೇಕು ಅಡಿಗೆಯ ರುಚಿಯನ್ನೋ ಅಥವಾ ಭಕ್ತಿಯ ಸವಿಯನ್ನೋ ? ನಿಜವಾದ ಆತ್ಮೀಯತೆ ಇರುವ ಶಿವಭಕ್ತರ ಮನೆಯ ಓಗರವನ್ನೇ ಕಡೆಗೆ ಶಿವರಸ ಅಂದರೆ ಅಂಬಲಿಯನ್ನೇ ಪಂಚಾಮೃತ ಎಂದು ಭಾವಿಸಬೇಕು. ಉತ್ಕಟ ಭಕ್ತಿಯ ಬಡಭಕ್ತನ ಅಳಲನ್ನು ಕಡೆಗಣಿಸಿ, ನಾಲಿಗೆ ರುಚಿಗೆ ಈಡಾಗಿ ಶ್ರೀಮಂತರ ಮನೆ ಬಾಗಿಲಿಗೆ ಅವರಿಂದ ಆಮಂತ್ರಣವಿಲ್ಲದೆ ಅಲೆಯುವುದು ಶರಣನ ಲಕ್ಷಣವಲ್ಲ. ಒದಗಿ ಬಂದುದು ಶಿವನ ಪ್ರಸಾದ ಎಂಬ ಭಾವ-ನಿರ್ಲಿಪ್ತತೆ ಬೆಳೆಯಬೇಕು.

ಅಲ್ಲಮ ಪ್ರಭುಗಳು ಈ ವಚನದಲ್ಲಿ ಕಡೆಯಲ್ಲಿ ಹೇಳಿದ ಮಾತು ನನ್ನನ್ನು ಮಂತ್ರ ಮುಗ್ಧಳನ್ನಾಗಿಸಿವೆ. **"ಗುಹೇಶ್ವರ ಲಿಂಗದ ಆಣತಿವಿಡಿದು, ತನುಗುಣ ಮತ್ತರಾಗಿದ್ದ ಐಶ್ವರ್ಯಂಧಕರ ಮತವ ಏನ ಮಾಡಬಂದೆಯಯ್ಯಾ ಸಂಗನ ಬಸವಣ್ಣ !"**

ಜಗತ್ತಿನಲ್ಲಿ ಶ್ರೀಮಂತರಾದವರೆಲ್ಲ ಕೆಟ್ಟವರಲ್ಲ. ಆದರೆ ಐಶ್ವರ್ಯದ ಮದವನ್ನು ತುಂಬಿಕೊಂಡು, ಅಹಂಕಾರದ ಕುರುಡಿನಿಂದ ಕಣ್ಣು ಕಾಣದಾಗಿ, ತನುಗುಣದಿಂದ ಉನ್ಮತ್ತರಾಗಿ ವರ್ತಿಸುವ ಜನರ ಸಹವಾಸ ಬಲು ಅಸಹನೀಯ. ಅವರಿಗೆ ತಮ್ಮ ಶ್ರೀಮಂತಿಕೆ ಹೇಗೆ ಬಂತು ? ಏಕೆ ಬಂದಿದೆ ? ಅದರ ವಿನಿಯೋಗ ಹೇಗೆ ಎಂಬ ಬಗ್ಗೆ

...ಲುವಳಿಕೆಯೇ ಇರದು. ಸುಖದ ಸುಪ್ಪತ್ತಿಗೆ ಭ್ರಾಂತಲೋಕದಲ್ಲಿ ತೇಲಾಡುತ್ತಾರೆ. ಅವರ ದೃಷ್ಟಿಯಲ್ಲಿ ಮಹಾತ್ಮರು, ಜ್ಞಾನಿಗಳು, ತ್ಯಾಗಿಗಳು ಭಿಕ್ಷುಕರಂತೆ. ದೇವರಂತೂ ಕೊಂಡುಕೊಳ್ಳುವ ವಸ್ತು. ಹಣದ ಬಲದಿಂದ ಗುಡಿಯೊಳಗೆ ಬೇಗನೆ ಪ್ರವೇಶ; ಮಿನಿಸ್ಟರುಗಳು ರಾಜಕೀಯದ ಜನ ಕೈಗೊಂಬೆಗಳು. ಸ್ವಾಮಿಗಳಂತೂ ಅವರ ಮನೆ ಬಾಗಿಲಿಗೆ ತಾವಾಗಿ ಬಂದು ಆಶೀರ್ವದಿಸುವರು.

ಇದನ್ನೆಲ್ಲ ಬಸವಣ್ಣನವರು ನಿರಾಕರಿಸಿದರು. ಪರಮಾತ್ಮನಿಂದ ಆಣತಿ ವಿಡಿದು ಅಂದರೆ ಆಜ್ಞಾ ಪತ್ರ ತಂದವರಂತೆ ಅಧಿಕಾರ ವಾಣಿಯಿಂದ ಎಲ್ಲರನ್ನೂ ಪರಿವರ್ತಿಸಲು ಯತ್ನಿಸಿದರು. ಐಶ್ವರ್ಯದ ಬಲದಿಂದ ಧರ್ಮ–ದೇವರನ್ನೂ ಕೊಳ್ಳಬಹುದು ಎಂದು ಬೀಗುತ್ತಿದ್ದವರ ತಪ್ಪುಕಲ್ಪನೆ ಕಳೆದರು. ಅವರು ಬಡವರೇ ಇದ್ದರೂ ತ್ಯಾಗಿಗಳು, ಸಜ್ಜನರು, ಶರಣರಿಗೆ ಮಾನ್ಯತೆ ನೀಡಿದರು. ದೇವರು ಸಾಧನೆಯಿಂದ ದೊರೆಯುವನೇ ವಿನಾ ಹಣದ ಬಲದಿಂದಲ್ಲ ಎಂದರು.

ನಿಜಶರಣರು, ಅವರನ್ನು ತಿರಸ್ಕಾರದಿಂದ ನೋಡುವ ಸಿರಿವಂತರು, ರಾಜ ಮಹಾರಾಜರ ಮನೆ ಬಾಗಿಲು ಕಾಯದೆ 'ದೂಷಕನವನೊಬ್ಬ ದೇಶವ ಕೊಟ್ಟಡೆ ಆಸೆ ಮಾಡಿ ಅವನ ಹೊರೆಯಲ್ಲಿರಬಾರದು. ಮಾದಾರ ಶಿವಭಕ್ತನಾದಡೆ ಆತನ ಹೊರೆಯಲ್ಲಿ, ನೆರೆಯಲ್ಲಿ, ಸಹವಾಸದಲ್ಲಿ ಇರುವುದು ಲೇಸು' ಎಂದರಿತು ನಡಯಬೇಕು. ಹೀಗೆ ಶ್ರೀ ಸಾಮಾನ್ಯನ ಧರ್ಮವನ್ನು ಪ್ರತಿಪಾದಿಸಿ, ಅಳವಡಿಸಿಕೊಂಡು ಬೋಧಿಸಿದ ಮಹಾಪ್ರವಾದಿ ಬಸವಣ್ಣನವರು.

ಬಸವ [ಲಿಂಗಾಯತ] ಧರ್ಮದ
ಆರು ಸೂತ್ರಗಳು

1. ಧರ್ಮ ಗುರು – ವಿಶ್ವಗುರು ಬಸವಣ್ಣನವರು
2. ಧರ್ಮ ಸಂಹಿತೆ – ವಚನ ಸಾಹಿತ್ಯ
3. ಧರ್ಮ ಲಾಂಛನ – ಇಷ್ಟಲಿಂಗ
4. ಧರ್ಮ ಕ್ಷೇತ್ರ – ಕೂಡಲ ಸಂಗಮ
5. ಧರ್ಮ ಧ್ವಜ – ಷಟಸ್ಥಲ ಧ್ವಜ.
6. ಧರ್ಮದ ಧ್ಯೇಯ – ಜಾತಿ ವರ್ಣ ವರ್ಗರಹಿತ ಕಲ್ಯಾಣ ರಾಜ್ಯ ನಿರ್ಮಾಣ.

ವಿಶ್ವಗುರು ಬಸವಣ್ಣನವರ ಆಯುಷ್ಯವೆಷ್ಟು

–ಮಾತಾಜಿ

ವಿಶ್ವಗುರು ಬಸವಣ್ಣನವರ ಆಯುಷ್ಯ ಕೇವಲ 36ವರ್ಷಗಳೆಂದು, ಅವರು ಕಲ್ಯಾಣದಲ್ಲಿ ಇದ್ದುದು ಕೇವಲ 12 ವರ್ಷಕಾಲವೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಮತ್ತು ಕೆಲವರು 1105 ಹುಟ್ಟಿದ ವರ್ಷ ಎಂದರೆ, ಮತ್ತೆ ಕೆಲವರು 1114, 1115 ಎಂದೆಲ್ಲ ಅಭಿಪ್ರಾಯ ಪಡುತ್ತಾರೆ. ಗುರು ಬಸವಣ್ಣನವರ ಆಯುಷ್ಯ ಎಷ್ಟಿದ್ದರೇನು ಅವರು ಮಾಡಿದ ಕಾರ್ಯಸಾಧನೆ ಬಹುಮುಖ್ಯ ಎಂದು ಈವರೆಗೂ ನಾವು ಯಾವುದೇ ನಿರ್ದಿಷ್ಟ ವಿಚಾರ ಹೇಳದೆ ಹಾಗೇ ಇದ್ದೆವು. ಆಯುಷ್ಯ ನಿರ್ಣಯವೂ ಬಹಳ ಮಹತ್ವ ಎಂದು ಅನ್ನಿಸಿದ ಕಾರಣ ನಮ್ಮ ಅಭಿಪ್ರಾಯವನ್ನು ನಿಮ್ಮ ಮುಂದಿಡಲು ನಿರ್ಧರಿಸಿದೆ.

1. 36 ವರ್ಷ ಗುರು ಬಸವಣ್ಣನವರ ಆಯುಷ್ಯವಲ್ಲ; ಅವರು ಕಲ್ಯಾಣದಲ್ಲಿ ವಾಸಮಾಡಿದ ಕಾಲಾವಧಿ ಎಂಬ ದೃಢ ನಿರ್ಧಾರಕ್ಕೆ ಬಂದಿದ್ದೇವೆ.

> ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ ಮೂವತ್ತಾರು ವರ್ಷ
> ಅಯ್ಯಾ, ಅನುಭವಕ್ಕೆ ಶಿವ ಸದನವಾದುದು ಇಪ್ಪತ್ತೇಳು ವರ್ಷ.
> ಅಯ್ಯಾ, ಹಿಂದಿನಂತೆ ಅನುಭವ ಭಕ್ತಿ ಇಲ್ಲ-ಮೂರು ಮಾಸದೊಳಗಾಗಿ,
>
> ಬ. ಷ. ವ. 1166

ಈ ವಚನದ ಪ್ರಕಾರ ಶ್ರೀ ಗುರುವು ಕಲ್ಯಾಣ ಪಟ್ಟಣದಲ್ಲಿ ಇದ್ದುದು 36 ವರ್ಷ; ಆಗ ಅದು ಭಕ್ತಿಗೆ ಬೀಡಾಯಿತು. ಧರ್ಮ ಪ್ರಚಾರ, ಧರ್ಮಸಂಸ್ಕಾರ ಕೊಡುತ್ತ, ಶರಣರನ್ನು ಒಂದು ವೇದಿಕೆಗೆ ತರಲೋಸಗ, ಅನುಭವ ಮಂಟಪ ರಚನೆಯಾಯಿತು; ಶ್ರೀ ಗುರುವು ಕಲ್ಯಾಣಕ್ಕೆ ಬಂದು, ಧರ್ಮ ಪ್ರಚಾರ ಆರಂಭಿಸಿದ 9 ವರ್ಷಗಳ ಬಳಿಕ ಅನುಭವ ಮಂಟಪದ ಕಾರ್ಯಕಲಾಪ ವ್ಯವಸ್ಥಿತವಾಗಿ ಆರಂಭವಾಯಿತು. ಮುಂದೆ ಕಲ್ಯಾಣ ಕ್ರಾಂತಿಯಾಗಿ 36 ವರ್ಷಗಳ ಬಳಿಕ ಶರಣರು ಚೆಲ್ಲಾಪಿಲ್ಲಿಯಾಗಿ ಚದುರಿದರು.

ಕಾಲಜ್ಞಾನದ ಪ್ರಕಾರ ಬಸವಣ್ಣನವರು ಕಲ್ಯಾಣಕ್ಕೆ ಬಂದುದು ಕಲಿವರ್ಷ ನಾಲ್ಕು ಸಾವಿರದ ಒಂದು ನೂರಾ ತೊಂಭತ್ತೆರಡರಲ್ಲಿ (ಪದ್ಯ 3, ಪುಟ 240) ಶ್ರೀ ಚನ್ನಣ್ಣ ಎನ್ನುವವರ ಕಾಲಜ್ಞಾನದ ಪ್ರಕಾರ (ಪುಟ 300) ವಿಕ್ರಮ ನಾಮ ಸಂವತ್ಸರದ ಶ್ರಾವಣ ಮಾಸದ ಶುದ್ಧ ಪಂಚಮಿ ಸೋಮವಾರದ ದಿವಸ ಅರುಣೋದಯದ ಕಾಲದಲ್ಲಿ ಕಂಥೆಗಳ ಧರಿಸಿಕೊಂಡು ಭೂಲೋಕಕ್ಕೆ ಇಳಿದರು ಎಂಬುದಾಗಿ ಬರುತ್ತದೆ. ಬಹುಶಃ ಅದು ಭೂಲೋಕಕ್ಕೆ ಇಳಿದ ದಿನವಾಗದೆ, ಮಂಗಳವೇಢೆ ಬಿಟ್ಟು ಕಲ್ಯಾಣಕ್ಕೆ ಬಂದ ದಿವಸ ಆಗುತ್ತದೆ. ಪ್ರಾಯಶಃ ಇಂಥ

೨. ಪುಸ್ತನ್ನೆ ಆಧಾರವಾಗಿ ಇಟ್ಟುಕೊಂಡೇ ಕೆಲವರು ವಿಕ್ರಮ ನಾಮ ಸಂವತ್ಸರದಲ್ಲಿ ಹುಟ್ಟಿ, ರಾಕ್ಷಸ ನಾಮ ಸಂವತ್ಸರದಲ್ಲಿ ಬಯಲಾದವರು ಎಂದು ನಿರ್ಧರಿಸಿ ಆಯುಷ್ಯವನ್ನು 36 ವರ್ಷ ಎಂದಿರುವುದು. ಈ ಲೇಖನದ ಹಿಂದೆಯೇ ಸಂವತ್ಸರಗಳ ಯಾದಿ ಕೊಡಲಾಗಿದೆ. ಅದನ್ನು ಲೆಕ್ಕ ಹಾಕಿ ಗಮನಿಸಿರಿ.

ಬಸವಣ್ಣನವರ ಅವತರಣ ರೋಹಿಣಿ ನಕ್ಷತ್ರದಲ್ಲಿ

ನಮಗೆ ಜಾತಕ-ನಕ್ಷತ್ರ ಮುಂತಾಗಿ ಆಸಕ್ತಿ ಇಲ್ಲದುದರಿಂದ ನಾವು ಬಹಳ ಅಸ್ಪಷ್ಟವಾಗಿ ವೈಶಾಖಮಾಸ, ಅಕ್ಷಯ ತೃತೀಯ, ರೋಹಿಣಿ ನಕ್ಷತ್ರದಲ್ಲಿ ಎಂದು ಈವರೆಗೂ ಬಳಸಿದ್ದೆವು. ಹುಬ್ಬಳ್ಳಿಯ ಬಸವರಾಜ ಪಂಚಾಂಗದ (ವಿದ್ಯಾಸಾಗರ ಪಂಚಾಂಗವೆಂದೂ ಹೆಸರು) ಕರ್ತೃ ವೇ. ಮೂ. ಶ್ರೀ ಚನ್ನವೀರ ಶಾಸ್ತ್ರಿಗಳು, ಸಾಲೀಮಠ ಅವರನ್ನು ಮಾರ್ಚ್ ತಿಂಗಳಲ್ಲಿ ಭೇಟಿಯಾದೆವು. ಬಹಳ ವರ್ಷಗಳಿಂದಲೂ ಅವರು ಬಿಡದೆ ಪತ್ರ ಬರೆದು, ತಮ್ಮದೊಂದು ವಿಚಾರ ತಿಳಿಸಬೇಕಾಗಿದೆ ಎನ್ನುತ್ತಿದ್ದರು. ವೃದ್ಧಾಪ್ಯದ ಕಾರಣ ಬೆಂಗಳೂರಿಗೆ ಬರಲಾಗುತ್ತಿಲ್ಲವೆಂದಿದ್ದರು. ಸರಿ, ಕಳೆದ ತಿಂಗಳು ಶರಣೆ ಶೋಭಾ ಕಲ್ಯಾಣಪ್ಪ ಪರಮಾದಿಯವರ ಮನೆಗೆ ಶಾಸ್ತ್ರಿಗಳನ್ನು ಕರೆಸಿದೆವು. ಅವರು ಸಂಸ್ಕೃತ ಬಸವ ಪುರಾಣದ ಆಧಾರದ ಮೇಲೆ ಬಸವಣ್ಣನವರ ಜನ್ಮಕುಂಡಲಿ ಹಾಕಿ, ಶಾಸ್ತ್ರೀಯವಾಗಿ ಸಿದ್ಧಪಡಿಸಿದ್ದಾರೆ. ಬಸವಣ್ಣನವರು ಹುಟ್ಟಿದ್ದು ಅಕ್ಷಯ ತೃತೀಯ ಅಲ್ಲ, ರೋಹಿಣಿ ನಕ್ಷತ್ರ ಎಂದು ಅವರು ಪ್ರತಿಪಾದಿಸುವ ಜನ್ಮಕುಂಡಲಿಯ ಚಿತ್ರ, ಶ್ಲೋಕ ನನ್ನ ಬಳಿ ಇವೆಯಾದರೂ, ಅದು ನನ್ನ ಸಂಶೋಧನೆ ಅಲ್ಲವಾದ ಕಾರಣ ಅದನ್ನಿಲ್ಲಿ ಕೊಡುತ್ತಿಲ್ಲ, ಅವರಿಗೇ, 'ಒಂದು ಲೇಖನ ಬರೆದುಕೊಡಿರಿ; ನಿಮ್ಮ ಸಂಶೋಧನೆ ನಿಮ್ಮ ಹೆಸರಲ್ಲೇ ಬೆಳಕಿಗೆ ಬರಲಿ' ಎಂದು ಹೇಳಿದ್ದೇನೆ,

'ರೋಹಿಣಿ' ನಕ್ಷತ್ರದ ವಿಷಯ ತಿಳಿಸುತ್ತಲೇ ನನಗೆ ಕೊಂಚ ಗಾಬರಿಯಾಯಿತು. ಏಕೆಂದರೆ ಸರ್ಕಾರ ಸಾರ್ವಜನಿಕ ರಜಾದಿನ ಘೋಷಿಸಿದೆ. ಎಲ್ಲಿ ಎರಡಕ್ಕೂ ವ್ಯತ್ಯಾಸ ಉಂಟಾಗುತ್ತದೋ ಎಂದು ; ಸುದೈವದಿಂದ ಶ್ರೀ ಚನ್ನವೀರ ಶಾಸ್ತ್ರಿಗಳೇ ಸರ್ಕಾರಿ ಕ್ಯಾಲೆಂಡರ್, ಬೆಂಗಳೂರು ಪ್ರೆಸ್ ಕ್ಯಾಲೆಂಡರ್ ಸಿದ್ಧಪಡಿಸುವರಾದ್ದರಿಂದ ಅವರು ಸರ್ಕಾರಕ್ಕೆ ಶ್ರೀ ಗುಂಡೂರಾಯರ ಕಾಲದಲ್ಲೇ ಇದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ, ಹೀಗಾಗಿ ಸರ್ಕಾರದ ರಜಾ ದಿನ ಅಕ್ಷಯ ತೃತೀಯಾಕ್ಕೆ ಬರದೆ, ರೋಹಿಣಿ ನಕ್ಷತ್ರದಲ್ಲಿ ಒದಗುತ್ತದಂತೆ. ವಿಷಯ ತಿಳಿದು ಸಮಾಧಾನವಾಯಿತು. ಶ್ರೀ ಚನ್ನವೀರ ಶಾಸ್ತ್ರಿಗಳ ಜೊತೆ ಮಾತನಾಡಿದ ಮೇಲೆ ; ಕಾಲಜ್ಞಾನ ವಚನ ಪುಸ್ತಕ ನೋಡಿದರೆ ಏನಾಶ್ಚರ್ಯ, ಅದರಲ್ಲಿ ರೋಹಿಣಿ ನಕ್ಷತ್ರ ಎಂದೇ ಇದೆ. ಶ್ರೀ ಚನ್ನಣ್ಣನವರ ಕಾಲಜ್ಞಾನ, ಪದ್ಯ ೧, ಪುಟ ೨೪೦ "ಕಲಿಯುಗದೊಳಗೆ ಮುಂಡಿಗೆಯ ಮಾದರಸನ ಪತ್ನಿಯಾದ ಮಾದಲಾಂಬಿಕೆಯ ಗರ್ಭದೊಳಗೆ ರೋಹಿಣಿ ನಕ್ಷತ್ರದಲ್ಲಿ ಜನಿಸಿ ಬಂದ ಬಸವಣ್ಣ".

ಕಾಲಜ್ಞಾನದಲ್ಲಿ ಸಂವತ್ಸರದ ಹೆಸರನ್ನು ಕಾಣಿಸಿಲ್ಲ. ... ಈಶ್ವರನ್ ಅವರ ಅಭಿಪ್ರಾಯವೂ ಬಸವಣ್ಣನವರ ಆಯುಷ್ಯ ಸುಮಾರು 63 ... ಅವರು ಜೀವಿಸಿದುದು 1105 ರಿಂದ 1168 ರ ವರೆಗೆ ಎಂದು ಅಭಿಪ್ರಾಯ ಪಡುತ್ತಾರೆ. ನಮಗೂ ಅದು ಸೂಕ್ತವೆನಿಸುತ್ತದೆ. ಆಗ ಹುಟ್ಟು ಆನಂದ ನಾಮ ಸಂವತ್ಸರದ ವೈಶಾಖಮಾಸದ ರೋಹಿಣಿನಕ್ಷತ್ರದಲ್ಲಿ ಎಂದಾಗುತ್ತದೆ. ಇದನ್ನು ಮುಖ್ಯವಾಗಿಟ್ಟುಕೊಂಡು ಕೆಲವು ಸಂಗತಿಗಳನ್ನು ಹೀಗೆ ಪ್ರಸ್ತಾಪಿಸಬಹುದು.

1. ಹುಟ್ಟು– ಆನಂದ ನಾಮ ಸಂವತ್ಸರ, ವೈಶಾಖ ಮಾಸ, ರೋಹಿಣಿ ನಕ್ಷತ್ರ, ತಾಯಿ ಮಾದಲಾಂಬಿಕೆ, ತಂದೆ ಮಾದರಸ. ಕ್ರಿ.ಶ. 1106, ಒಂದು ಸಂವತ್ಸರದಲ್ಲಿ 1105 ಮತ್ತು 1106 ಎರಡೂ ಅರ್ಧರ್ಧಬರುತ್ತದೆ.
2. ಮನೆಯಿಂದ ನಿರ್ಗಮನ ಸುಮಾರು 8-9 ವಯಸ್ಸಿನಲ್ಲಿ ದುದುಂಭಿನಾಮ ಸಂವತ್ಸರ 1113-14.
3. ಗುರುಕುಲವಾಸ 21 ವಯಸ್ಸಿನವರೆಗೆ [ಹರಿಹರ–ಮೂರೇಳು ವಯಸ್ಸಿಗೆ 3×7] ಅಂದರೆ ಶ್ರೀಮುಖ ಸಂವತ್ಸರದವರೆಗೆ–1126.
4. ಗುರುಕುಲದಿಂದ ಹೊರಟು ಮಂಗಳವೇಡೆಗೆ. ಮಂಗಳವೇಡೆಯಲ್ಲಿ ಸುಮಾರು 7 ವರ್ಷ –ಶ್ರೀ ಮುಖ ಸಂವತ್ಸರದಿಂದ ವಿಕ್ರಮನಾಮ ಸಂವತ್ಸರದವರೆಗೆ 1126–1132.
5. ಕಲ್ಯಾಣಕ್ಕೆ ಆಗಮನ. ವಿಕ್ರಮನಾಮ ಸಂವತ್ಸರ ಶ್ರಾವಣ ಮಾಸದ ಶುದ್ಧ ಪಂಚಮಿ ಸೋಮವಾರ, ಬೆಳಗಿನ ಹೊತ್ತಿಗೆ ಕಲ್ಯಾಣವನ್ನು ಪ್ರವೇಶಿಸಿದರು. ಆಗ ಅವರ ವಯಸ್ಸು 27 ವರ್ಷ. ವಿವಾಹವು ಮಂಗಳವೇಢೆಯಲ್ಲೇ ಮುಗಿದಿತ್ತು. ಕಲ್ಯಾಣದಲ್ಲಿ ಬಂದು ನೆಲೆಯೂರಿದ ಮೇಲೆ ಧರ್ಮ ಪ್ರಚಾರ ಕಾರ್ಯ ಆರಂಭ–1132.
6. 9 ವರ್ಷಗಳ ನಂತರ ಅಂದರೆ ವಿರೋಧಿ ನಾಮ ಸಂವತ್ಸರದಲ್ಲಿ ಅನುಭವ ಮಂಟಪ ಸ್ಥಾಪನೆ 1141.
7. ನಂದನ ನಾಮ ಸಂವತ್ಸರ 1144 ರಲ್ಲಿ, ಅನುಭವ ಮಂಟಪ ಪ್ರಾರಂಭವಾದ ನಂತರ 3 ವರ್ಷಕ್ಕೆ ಚನ್ನಬಸವಣ್ಣನ ಜನನ, ನಂದನ ನಾಮ ಸಂವತ್ಸರ, ಜನನ, ನಂದನ ನಾಮ ಸಂವತ್ಸರ, ವೈಶಾಖ ಶುದ್ಧ ಪಾಡ್ಯ ಮಂಗಳವಾರ ಕೃತ್ತಿಕಾ ನಕ್ಷತ್ರದಲ್ಲಿ ಜನಿಸಿದರು.
8. ಚನ್ನಬಸವಣ್ಣನವರು ಸುಮಾರು 11–12 ವರ್ಷದವರಿರುವಾಗ ಪ್ರಭು–ಸಿದ್ಧರಾಮರ ಆಗಮನ, ಕ್ರೋಧಿನಾಮ ಸಂವತ್ಸರ–1156.

9. ಪ್ರಭುದೇವರ ಶೂನ್ಯಪೀಠಾರೋಹಣ ಚೈತ್ರ ಶುದ್ಧ ಪಾಡ್ಯ ಸೋಮವಾರ ರೇವತಿ ನಕ್ಷತ್ರದಲ್ಲಿ. [ಪದ್ಯ 72 ಪುಟ 250] ಕಾಲಜ್ಞಾನದಲ್ಲಿ ಪೀಠಾರೋಹಣವು ಕ್ಷಯನಾಮ ಸಂವತ್ಸರದ ಬಳಿಕ ಪ್ರಭುನಾಮ ಸಂವತ್ಸರ ಎಂದಿದ್ದಾರೆ. ಇದು ಸಾಧ್ಯವಿಲ್ಲ. ಏಕೆಂದರೆ ಆ ಸಂವತ್ಸರ ಬರಲಿಕ್ಕೆ 1179 ಬೇಕು. ಸಂವತ್ಸರದ ಹೆಸರು ತಪ್ಪಾಗಿರಬಹುದು. ಬಹುಶಃ ಕಲ್ಯಾಣಕ್ಕೆ ಪ್ರಭುದೇವರು ಬಂದ ವರ್ಷವೇ ಪೀಠಾರೋಹಣವಾಗಿರಬಹುದು.
10. ಶ್ರೀ ಗುರು ಬಸವಣ್ಣನವರು ರಾಕ್ಷಸ ನಾಮ ಸಂವತ್ಸರದ ಫಾಲ್ಗುಣ ಶುದ್ಧ ದ್ವಾದಶಿ (1168) ಚಂದ್ರವಾರದಂದು ಕಲ್ಯಾಣದಿಂದ ನಿರ್ಗಮಿಸಿದರು. ಆಗ ಅವರಿಗೆ 62 ವರ್ಷಗಳು.
11. ನಂತರ ಕಲ್ಯಾಣದಲ್ಲಿ ಹರಳಯ್ಯ–ಮಧುವರಸರ ಎಳೆಹೂಟೆ. ಇದೇ ರಾಕ್ಷಸ ನಾಮ ಸಂವತ್ಸರ ಆಷಾಢ ಶುದ್ಧ ಪಾಡ್ಯ ಸೋಮವಾರ ಆಯಿತು. [1168 ಜುಲೈ] ಅಂದೇ ಅಲ್ಲಮ ಪ್ರಭುಗಳು ಸಹ ಕದಳಿಯಲ್ಲಿ ಬಯಲಾದರು ಎಂದು ಕಾಲಜ್ಞಾನದಲ್ಲಿದೆ. ಬಸವಣ್ಣನವರು ರಾಕ್ಷಸನಾಮ ಸಂವತ್ಸರದಲ್ಲಿ ಫಾಲ್ಗುಣ ಮಾಸದಲ್ಲಿ ಹೊರಟರು ಎಂದ ಬಳಿಕ, ಎಳೆ ಹೂಟೆಯು ನಳನಾಮ ಸಂವತ್ಸರದಲ್ಲಿ ಮಾತ್ರ ಸಾಧ್ಯವಷ್ಟೆ? ಬಸವಣ್ಣನವರು ಹೊರಡುವ ಪೂರ್ವದಲ್ಲಿ ಆಗಿಯೇ ಇಲ್ಲ. ಫಾಲ್ಗುಣಮಾಸದ ಉತ್ತರಾರ್ಧದಲ್ಲಿ ಎಳೆಹೂಟೆ ಆಗಿರಬಹುದು. ಇಲ್ಲವೇ ಚೈತ್ರ ಮಾಸದಲ್ಲಿ (ಯುಗಾದಿಯ ಹಿಂದೆ ಮುಂದೆ) ಆಗಿರಬಹುದು. ಶರಣರ ವಧೆ ಆದ ಮೇಲೆಯೇ ಚನ್ನಬಸವಣ್ಣನವರು ಕಲ್ಯಾಣದಿಂದ ಸಾಹಿತ್ಯ ಹೊತ್ತು ಹೊರಟುದು. ಅವರು ಉಳವಿ ತಲ್ಪಿದ್ದು ವೈಶಾಖ ಬಹುಳ ಬಿದಿಗೆ, ನಳನಾಮ ಸಂವತ್ಸರ; ಅಂದರೆ ಮೇ ತಿಂಗಳ ಎರಡನೆವಾರ.
12. ಮುಂದೆ ಇದೇ ನಳನಾಮ ಸಂವತ್ಸರದಲ್ಲಿ ಬಸವಣ್ಣನವರು ಶ್ರಾವಣ ಶುದ್ಧ ಪಂಚಮಿ, ಮಂಗಳವಾರ ಸೂರ್ಯೋದಯವಾದ ಮೂವತ್ತು ಗಳಿಗೆಗೆ ಲಿಂಗೈಕ್ಯರಾದರು. (1168 ಆಗಸ್ಟ್) ಕಾಲಜ್ಞಾನದಲ್ಲಿ ಶ್ರಾವಣಶುದ್ಧ ಪಾಡ್ಯ ಎಂದಿದೆ. ಆದರೆ ಲಿಂಗೈಕ್ಯರಾದುದು ಮಂಗಳವಾರ ಎಂಬ ಬಗ್ಗೆ ಖಚಿತವಾಗಿ ಅದೇ ಕಾಲಜ್ಞಾನದಲ್ಲಿ ವಿವಿಧ ಶರಣರ ಮೂಲಕ ಬಂದಿರುವುದರಿಂದ, ಮಂಗಳವಾರದಂದು ಪಾಡ್ಯ ಇರದೆ, ಪಂಚಮಿ ಇರುವುದರಿಂದ. ಡಾ॥ ಬಾಡಾಲ ರಾಮಯ್ಯನವರು ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣಶುದ್ಧ ಪಂಚಮಿಯಂದು ಎಂದು ಖಚಿತಪಡಿಸಿದ್ದಾರೆ.
13. ಉಳವಿಯನ್ನು ಚನ್ನಬಸವಣ್ಣನವರು ತಲ್ಪಿದ್ದು, ನಳನಾಮ ಸಂವತ್ಸರ ವೈಶಾಖ ಬಹುಳ ಬಿದಿಗೆ ಬುಧವಾರ ರೋಹಿಣಿ ನಕ್ಷತ್ರದಲ್ಲಿ. [1168 ಏಪ್ರಿಲ್-ಮೇ]

14. ಆಳಿಯ ಬಿಜ್ಜಳನ ಸೈನ್ಯದೊಡನೆ ಕಾದಾಡಿ, ಗೆದ್ದು ಬಂದ ಮಡಿವಾಳ ಮಾಚಿದೇವರು, ಮೊಲ್ಲ ಬೊಮ್ಮ ಜಗದೇವರು ಉಳವಿಯನ್ನು ಮುಟ್ಟಿದ್ದು ಕಾರ್ತೀಕ ಶುದ್ಧ ಪೌರ್ಣಿಮೆ ದಿನದಂದು. [1168 ನವೆಂಬರ್]

ಹರಳಯ್ಯ-ಮಧುವರಸರ ಎಳೆಹೂಟೆ ರಾಕ್ಷಸನಾಮ ಸಂವತ್ಸರ ಫಾಲ್ಗುಣ ಮಾಸ (ಬಸವಣ್ಣನವರು ಬಿಟ್ಟುದು) ಮತ್ತು ನಳನಾಮ ಸಂವತ್ಸರದ ವೈಶಾಖ ಬಹುಳ ಬಿದಿಗೆ – ಈ ಮಧ್ಯೆ ಆಗಿರಲು ಸಾಕು, ಆಷಾಡದಲ್ಲಲ್ಲ, ಆಷಾಢದಲ್ಲಿ ಎಂದರೆ ಹರಳಯ್ಯ–ಮಧುವಯ್ಯ ಶರಣರನ್ನು ಅಲ್ಲೇ ಇಟ್ಟು ಚನ್ನಬಸವಣ್ಣ ಹೊರಟರು ಎಂದಾಗುತ್ತದೆ. ಜೊತೆಗೆ ಹರಳಯ್ಯನ ಧರ್ಮಪತ್ನಿ ಅಕ್ಕನಾಗಲಾಂಬಿಕೆಯು ಜೊತೆ ಇದ್ದು, ನಂತರ ಲಿಂಗೈಕ್ಯಳಾದಳು. ಆಕೆಯ ಸಮಾಧಿ ಬೈಲಹೊಂಗಲದ ಬಳಿಯ ತಿಗಡಿ ಗ್ರಾಮದಲ್ಲಿದೆ. ಪತಿಯು ಜೀವಂತವಿದ್ದಿದ್ದರೆ ಆಕೆ ಏಕೆ ಬಿಟ್ಟುಬರುತ್ತಿದ್ದಳು?

ಉಳವಿಯಲ್ಲಿ ಹರಳಯ್ಯನ ಚಿಲುಮೆ (ಬುಗ್ಗೆ) ಎಂಬುದು ಅರಣ್ಯ ಮಧ್ಯೆ ಇದೆ. ಹರಳಯ್ಯ ಇಲ್ಲಿಗೆ ಬಂದು ಚಿಲುಮೆ ಸೇರಿದ್ದರು ಎಂದು ಹೇಳುವ ಬುದ್ಧಿವಂತರೂ ಉಳವಿಯಲ್ಲಿದ್ದಾರೆ. ಶರಣರಿಗೆ ಅತ್ಯಂತ ಪ್ರೀತಿಪಾತ್ರನಾದ ಶರಣ ಹರಳಯ್ಯ ನೆನಪಾಗಿ ಕಾಡುತ್ತಿದ್ದ, ಆತ ನಿಜವಾದ ಹುತಾತ್ಮ. ಅದಕ್ಕಾಗಿ ಆತನ ಹೆಸರನ್ನು ಚನ್ನಬಸವಣ್ಣನವರು ತಮಗೆಲ್ಲ ನೀರನ್ನು ಒದಗಿಸುತ್ತಿದ್ದ ಚಿಲುಮೆಗೆ ಇಟ್ಟಿರಲೂ ಸಾಕು.

ಶ್ರೀ ಗುರು ಬಸವಣ್ಣನವರ ಆಯುಷ್ಯ ಸುಮಾರು 62–63 ವರ್ಷ. ಅವರು ಕಲ್ಯಾಣದಲ್ಲಿ ವಾಸವಾಗಿದ್ದುದು 36 ವರ್ಷ. ಅನುಭವ ಮಂಟಪ ಕೆಲಸ ಮಾಡಿದುದು 27 ವರ್ಷ. ಅವರು ಹುಟ್ಟಿದುದು (ಪ್ರಮಾಧೀಚ ಸಂವತ್ಸರ 1105 ರಲ್ಲಿಯಾಗಲೀ ಅಥವಾ) ಆನಂದ ನಾಮ ಸಂವತ್ಸರ 1106 ರಲ್ಲಿ ಇರಲಿಕ್ಕೇ ಬೇಕು. ಶ್ರೀ ಗುರುವು ಮಾಡಿದ ಜನಪರಿವರ್ತನೆ, ಕಾರ್ಯದ ವಿಸ್ತಾರ ನೋಡಿದರೆ ಅದು ಕೇವಲ 36 ವರ್ಷಗಳ ಜೀವಿತಾವಧಿಯಲ್ಲಿ ಆಗಲಾರದ್ದು. ಮತ್ತು ಅವರು ಸಾಕಷ್ಟು ವ್ಯಾಪಕವಾದ ಪ್ರವಾಸವನ್ನೂ ಬನವಾಸಿ ಮುಂತಾದ ಕಡೆಗೇ ಅಲ್ಲದೆ ಚೋಳಮಂಡಲ, ಕಾಶ್ಮೀರ ಹೀಗೆಲ್ಲ ಕೈಗೊಂಡುದೂ ಕಾಣುತ್ತದೆ. ಚನ್ನಬಸವಣ್ಣನವರ ಜೀವಿತಾವಧಿ ಮಾತ್ರ 24 ಎಂಬುದು ಖಚಿತಗೊಂಡಿದೆ. ನಂದನ ನಾಮ ಸಂವತ್ಸರದಲ್ಲಿ ಹುಟ್ಟಿ ನಳನಾಮ ಸಂವತ್ಸರದಲ್ಲಿ ಅವರು ಬಯಲಾದರು.

ಈಗ ಮುಖ್ಯವಾಗಿ ವ್ಯವಹಾರಗಳೆಲ್ಲ ಇಂಗ್ಲೀಷ್ ತೇದಿಯ ಪ್ರಕಾರ ಸಾಗುವುದರಿಂದ ಹಿಂದೂ ಕಾಲಮಾನದಿಂದ ಇಂಗ್ಲೀಷ್ ತೇದಿಗೆ ಪರಿವರ್ತಿಸಿದ ದಿನಾಂಕ ಕೊಟ್ಟರೆ ಸೂಕ್ತವಾದೀತು.

ಆಳವಾಗಿ ಚಿಂತಿಸಲಾಗಿ, ಈ ಕೆಳಗಿನ ವಿಷಯಗಳನ್ನು ಮತ್ತು ವರ್ಷಗಳನ್ನು ಹೀಗೆ ನಿರ್ಣಯಿಸಬಹುದು.

1. ಆನಂದ ನಾಮ ಸಂವತ್ಸರ ವೈಶಾಖ ಮಾಸ ರೋಹಿಣಿ ನಕ್ಷತ್ರದಲ್ಲಿ ಪೂಜ್ಯ ಗುರು ಬಸವಣ್ಣನವರ ಜನನ, ತಾಯಿ-ತಂದೆ ಇಂಗುಳೇಶ್ವರ ಬಾಗೇವಾಡಿಯ ಮಾದಲಾಂಬಿಕೆ - ಮಾದರಸರು ಕ್ರಿ. ಶ. 1106 ಇಂಗ್ಲೀಷ್ ಲೆಕ್ಕಾಚಾರ. ಬಸವ ಶಕೆಯನ್ನು ಇಲ್ಲಿಂದ ಆರಂಭಿಸಬಹುದು.
2. ದುಂದುಭಿನಾಮ ಸಂವತ್ಸರ 1113-14 ರಲ್ಲಿ ಮನೆಯಿಂದ ನಿರ್ಗಮನ, ಗುರು ಕುಲಕ್ಕೆ ಆಗಮನ.
3. ದುಂದುಭಿನಾಮ ಸಂವತ್ಸರದಿಂದ ಶ್ರೀ ಮುಖ ಸಂವತ್ಸರದವರೆಗೆ (1114–ರಿಂದ 1126) ಗುರುಕುಲವಾಸ.

   [ಜ್ಯೋತಿಷಿಗಳು ಅಧ್ಯಯನ ಮಾಡಿ ಕಪಿಲಾಷಷ್ಠಿ ಮುಹೂರ್ತವೇನಾದರೂ ಶ್ರೀಮುಖ ಸಂವತ್ಸರ ಅಥವಾ ಅದರ ಹಿಂದೆಮುಂದಿನ ವರ್ಷಗಳಲ್ಲಿ ಒದಗಿತ್ತೋ ಎಂಬುದನ್ನು ನಿರ್ಧರಿಸಿದರೆ ಬಹಳ ದೊಡ್ಡ ಸಂಶೋಧನೆಯನ್ನು ಮಾಡಿದಂತಾಗುತ್ತದೆ.]
4. 1126 ಗುರುಕುಲದಿಂದ ಹೊರಟು ಮಂಗಳವೇಢೆಗೆ ಬರುವುದು.
5. 1126 ರಿಂದ 1132 ಮಂಗಳ ವೇಢೆ ವಾಸ.
6. ವಿಕ್ರಮನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಸೋಮವಾರ (1132) ದಂದು ಕಲ್ಯಾಣಕ್ಕೆ ಆಗಮನ.
7. ಅನುಭವ ಮಂಟಪ ಕಟ್ಟಡ ರಚನೆ 1141.
8. ಚನ್ನಬಸವಣ್ಣನವರ ಜನನ. 1144, ನಂದನ ನಾಮ ಸಂವತ್ಸರ, ವೈಶಾಖ ಶುದ್ಧ ಪಾಡ್ಯ [ಅಂದರೆ ಬಸವಣ್ಣನವರಿಗಿಂತ 38 ವರ್ಷಕ್ಕೆ ಕಿರಿಯನು.]
9. ಪ್ರಭುದೇವರ ಆಗಮನ 1156.
10. ಕಲ್ಯಾಣದಿಂದ ಶ್ರೀ ಗುರು ಬಸವಣ್ಣನವರ ನಿರ್ಗಮನ ಸೋಮವಾರ ರಾಕ್ಷಸ ನಾಮ ಸಂವತ್ಸರ ಫಾಲ್ಗುಣ ಶುದ್ಧ ದ್ವಾದಶಿ. (1168)
11. ಹರಳಯ್ಯ-ಮಧುವರಸರ ಎಳೆ ಹೂಟೆ, ಆಷಾಢ ಶುದ್ಧ ಪಾಡ್ಯ, ಸೋಮವಾರ (1168) ನಳನಾಮ ಸಂವತ್ಸರ.
12. ಶ್ರೀ ಗುರು ಬಸವಣ್ಣನವರ ಲಿಂಗೈಕ್ಯದಿನ ನಳನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ, (ಆಗಸ್ಟ್ 1168)

ಹೀಗೆ 1106–1168, 62 ವರ್ಷ ಪೂರ್ತಿ ತುಂಬಿ, ಮೇಲೆ 3 ತಿಂಗಳು 2 ದಿವಸಗಳ ಕಾಲ ಅಂದರೆ ಸುಮಾರು ಅರವತ್ತು ಮೂರು ವರ್ಷ ಜೀವಿಸಿದ್ದರು. ಈ ಲೆಕ್ಕದಲ್ಲಿ 1990 ಬಸವ ಜಯಂತಿಗೆ ಬಸವ ಶಕೆ 885 ನೇ ವರ್ಷ ಆರಂಭವಾಗುತ್ತದೆ.

[ಈ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶವಿದೆ. **–ಮಾತಾಜಿ.**]

60 ಸಂವತ್ಸರಗಳು :

60 ಸಂವತ್ಸರಗಳನ್ನು ಭಾರತೀಯ ತತ್ತ್ವವೇತ್ತರು ಗುರುತಿಸಿದ್ದು ಅವುಗಳ ಹೆಸರು ಹೀಗಿವೆ :

1.	ಪ್ರಭವ	21.	ಸರ್ವಜಿತ್	41.	ಪ್ಲವಂಗ
2.	ವಿಭವ	22.	ಸರ್ವಧಾರಿ	42.	ಕೀಲಕ
3.	ಶುಕ್ಲ	23.	ವಿರೋಧಿ	43.	ಸೌಮ್ಯ
4.	ಪ್ರಮೋದೂತ	24.	ವಿಕೃತಿ	44.	ಸಾಧಾರಣ
5.	ಪ್ರಜೋತ್ಪತ್ತಿ	25.	ಖರ	45.	ವಿರೋಧಿಕೃತ್
6.	ಅಂಗೀರಸ	26.	ನಂದನ	46.	ಪರಿಧಾವಿ
7.	ಶ್ರೀಮುಖ	27.	ವಿಜಯ	47.	ಪ್ರಮಾದೀಚ
8.	ಭಾವ	28.	ಜಯ	48.	ಆನಂದ
9.	ಯುವ	29.	ಮನ್ಮಥ	49.	ರಾಕ್ಷಸ
10.	ಧಾತು	30.	ದುರ್ಮುಖಿ	50.	ನಳ
11.	ಈಶ್ವರ	31.	ಹೇವಿಳಂಬಿ	51.	ಪಿಂಗಳ
12.	ಬಹುಧಾನ್ಯ	32.	ವಿಳಂಬಿ	52.	ಕಾಳಯುಕ್ತಿ
13.	ಪ್ರಮಾಥಿ	33.	ವಿಕಾರಿ	53.	ಸಿದ್ಧಾರ್ಥಿ
14.	ವಿಕ್ರಮ	34.	ಶಾರ್ವರಿ	54.	ರೌದ್ರ
15.	ವಿಷು	35.	ಪ್ಲವ	55.	ದುರ್ಮತಿ
16.	ಚಿತ್ರಭಾನು	36.	ಶುಭಕೃತ್	56.	ದುಂದುಭಿ
17.	ಸ್ವಭಾನು	37.	ಶೋಭನಕೃತ್	57.	ರುಧಿರೋದ್ಗಾರಿ
18.	ತಾರಣ	38.	ಕ್ರೋಧಿ	58.	ರಕ್ತಾಕ್ಷಿ
19.	ಪಾರ್ಥಿವ	39.	ವಿಶ್ವಾವಸು	59.	ಕ್ರೋಧನ
20.	ವ್ಯಯ	40.	ಪರಾಭವ	60.	ಕ್ಷಯ

- ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ.
- ಮರ್ತ್ಯಲೋಕವೆಂಬುದಿದು ಕರ್ತಾರನ ಕಮ್ಮಟ.
- ಇಲ್ಲಿ ಸಲ್ಲುವವರು ಅಲ್ಲಿ (ದೇವನಲ್ಲಿ) ಸಲ್ಲುವರು.
- ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು.
- ಕುಲತನ ಇರುವುದು ಜಾತಿಯಲ್ಲಲ್ಲ, ಗುಣ ನಡತೆಗಳಲ್ಲಿ.
- ಗುರುತ್ವ ದೊರೆಯುವುದು ಆಚಾರ-ಅರಿವು-ಅನುಭಾವಗಳಿಂದ.

ಸಮಸ್ಯೆ ? ಸಮಾಧಾನ !

—ಹೆಚ್. ಎಸ್. ಬಸವರಾಜ, ಭದ್ರಾವತಿ.

● ಸಿ. ಪಿ. ರೈಸ್ ಬಸವಣ್ಣನವರು ಭಾವಿಹಾರಿದರು ಎಂದು ಹೇಳುತ್ತಾರೆ. ಎಂದು ಜ ಚ ನಿ ವಾದ ಮಾಡುತ್ತಾರಲ್ಲ. ಹಾಗಾದರೆ ಇದರ ವಾಸ್ತವಾಂಶ ಏನು?

○ ರೈಸ್ ಯಾವುದೇ ಮಮಕಾರವನ್ನಾಗಲೀ, ದ್ವೇಷವನ್ನಾಗಲೀ ಇರಿಸಿಕೊಳ್ಳದೆ ಚರಿತ್ರೆಕಾರನಾಗಿ ಬೇರೆ ಬೇರೆ ಕಡೆಯಿಂದ ವಿಷಯಗಳನ್ನು ಸಂಗ್ರಹಿಸುವಾಗ ಹೀಗೆ ಉಲ್ಲೇಖಿಸಿದ್ದಾನೆ ಎಂದುಕೊಳ್ಳೋಣ. ಇದಕ್ಕೆ ಮೂಲ ಸಾಹಿತ್ಯ ಧರಣಿ ಪಂಡಿತನ ಬಿಜ್ಜಳರಾಜ ಚರಿತ್ರೆ. ಧರಣೀ ಪಂಡಿತ ಎಂಬ ಮತಾಂಧ, ಪುರೋಹಿತಶಾಹಿ ಪ್ರತಿಪಾದಕ ಕವಿ ಉದ್ದೇಶಪೂರ್ವಕವಾಗಿ ಬಸವಣ್ಣನವರನ್ನು ದ್ವೇಷಿಸಲೆಂದೇ ಹುಟ್ಟುಹಾಕಿದ ಕಾವ್ಯವಿದು. ಕಲ್ಯಾಣದ ಚಳುವಳಿಯನ್ನು ಈತ ಜೈನ–ವೀರಶೈವ ಘರ್ಷಣೆಯನ್ನಾಗಿ ಚಿತ್ರಿಸಲೆತ್ನಿಸಿದ್ದಾನೆ. ಶೈವ-ವೈಷ್ಣವ-ಜೈನರ ಮಧ್ಯೆ ಸೈದ್ಧಾಂತಿಕ ತಿಕ್ಕಾಟಗಳು ಸಾಕಷ್ಟು ನಡೆದುದನ್ನು ಕನ್ನಡ ನಾಡಿನಲ್ಲಿ ಕಾಣಬಹುದಾದರೂ ಬಸವಾದಿ ಪ್ರಮಥರು ಈ ತಿಕ್ಕಾಟದೊಳಗೆ ಇಳಿಯದೆ ನೊಂದವರನ್ನು ಸಾಂತ್ವನಿಸುವ, ಎಲ್ಲರಿಗೂ ಧಾರ್ಮಿಕ ಹಕ್ಕನ್ನು ಒದಗಿಸುವ, ದಲಿತರನ್ನು ಮೇಲೆತ್ತುವ, ನವ ಸಮಾಜವನ್ನು ನಿರ್ಮಾಣ ಮಾಡುವ ವಿಧಾಯಕ ಕಾರ್ಯದಲ್ಲಿ ತೊಡಗಿದರು.

ಮತಾಂಧನಾದ ವೈಷ್ಣವ ಕವಿ ಧರಣೀ ಪಂಡಿತನು ಬಿಜ್ಜಳನನ್ನು ಜೈನನನ್ನಾಗಿ ಮಾಡಿ, ವಿವಾದ ವೈಮನಸ್ಯಗಳನ್ನು ಹುಟ್ಟಿಸುವ ರೀತಿ ಕಾವ್ಯ ಬರೆದಿದ್ದಾನೆ. ಸತ್ಯ ಸಂಗತಿಯನ್ನು ತಿಳಿಸುವ ಹಲವಾರು ಕಾವ್ಯಗಳನ್ನು, ಅದಕ್ಕೂ ಮಿಗಿಲಾಗಿ ವಚನಗಳನ್ನು ಅವುಗಳು ಬಸವಣ್ಣನವರು ಕೂಡಲ ಸಂಗಮಕ್ಕೆ ಬಂದು ಐಕ್ಯರಾದರೆಂದು ಸಾರಿಸಾರಿ ಹೇಳುತ್ತಿರುವಾಗ ಅವೆನಲ್ಲ ಬಿಟ್ಟು ಜ. ಚ. ನಿ. ಯವರು ಧರಣಿ ಪಂಡಿತನ ಮಾತು ಉದಾಹರಿಸುವುದು ಎಷ್ಟು ಸಮರ್ಥನೀಯ. ನಾವು ಚರಜಂಗಮರು, ಸದಾ ಧರ್ಮ ಪ್ರಚಾರ ಮಾಡುತ್ತಾ ಓಡಾಡುತ್ತೇವಷ್ಟೆ. ಒಮ್ಮೆ ನಮ್ಮ ಪರಿಚಯದವರೊಬ್ಬರು ಮುಂಬಯಿಯಿಂದ ಬಂದು ನಮ್ಮ ಆಶ್ರಮ ಎಲ್ಲಿದೆ ಎಂದು ಕೇಳಲು ಧಾರವಾಡದಲ್ಲಿ ಒಂದು ಮಠಕ್ಕೆ ಹೋದಾಗ "ಇಲ್ರೀ, ಅವರು ಮಠವನ್ನು ಮಾರಿಕೊಂಡು ಎಲ್ಲೋ ಹೋದರು" ಎಂದು ಕುಚೋದ್ಯತನದಿಂದ ಆ ಮಠದಲ್ಲಿ ಯಾರೋ ಒಬ್ಬರು ಹೇಳಿದ್ದಾರೆ. ಮುಂಬಯಿಯಿಂದ ಬಂದು ನೊಂದುಕೊಂಡು ಹಾಗೇ ಹೋಗಿದ್ದಾರೆ. ನಂತರ ಒಮ್ಮೆ ಭೇಟಿಯಾದಾಗ ವಿಷಯವನ್ನು ತಿಳಿಸಿದರು. ಈಗ ನೀವೇ ಆಲೋಚಿಸಿ,

ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ನಮ್ಮದು ಎಂದು ನಮ್ಮ ಪುಸ್ತಕಗಳಲ್ಲಿ ಪ್ರಿಂಟಾಗಿರುವುದು ಸತ್ಯವೊ? ಅಥವಾ ಅಂತಹ ಒಬ್ಬ ಮಠದವರು ಕುಚೋದ್ಯತನದಿಂದ ಹೇಳಿದ ಮಾತು ಸತ್ಯವೋ? ಹಾಗೆಯೇ ಧರಣಿಪಂಡಿತನ ಮಾತು. ಅವನ ಕಾವ್ಯದ ಆಧಾರದ ಮೇಲೆ ಅದೂ ದುರುದ್ದೇಶದಿಂದಲೇ ಬರೆದ ಕೃತಿಯ ಆಧಾರದ ಮೇಲೆ ನಾವು ನಿರ್ಣಯಿಸುವುದು ತಪ್ಪಾಗದೆ?

—ಪ್ರೊ. ವಿ. ಜಿ. ಮಾರಿಹಾಳ, ಧಾರವಾಡ.

● ಈಗಾಗಲೇ ವೀರಶೈವಕ್ಕೆ ಹೊರಗಿನಿಂದ ದೊಡ್ಡ ದಾಳಿಗಳಿವೆ. ಈಗ ಇಡಿಯ ಸಮಷ್ಟಿಯೇ ಸುಸಂಘಟಿತ ರೀತಿಯಲ್ಲಿ ಹೊಸತನ ಪಡೆಯಬೇಕಾದಾಗ, "ಎಲ್ಲರೂ ನಮ್ಮವರೇ" ಆಗಬೇಕಾದ್ದು ಅಗತ್ಯವಲ್ಲವೆ? 'ವೀರಶೈವರು ಬೇರೆ, ಲಿಂಗಾಯತರು ಬೇರೆ' ಇಂದು ನೀವು ಪ್ರತಿಪಾದಿಸುವುದು ಸರಿಯೆ?

○ ಕರ್ನಾಟಕದ ಬಹುಪಾಲು ವಿಶ್ವವಿದ್ಯಾಲಯದ ಮತ್ತು ಮೇಲ್ವರ್ಗದ ಲಿಂಗವಂತರಿಗೆ ಏಕೆ ಈ ಪದಗಳು ಅರ್ಥವಾಗುತ್ತಿಲ್ಲವೋ ನಮಗೆ ತಿಳಿಯದೇ ಆಗದಂತಿದೆ.

1. ಕರ್ನಾಟಕದಲ್ಲಿ ಮುಖ್ಯವಾಗಿ ದಟ್ಟವಾಗಿ ನೆಲೆಸಿ, ಹೊರ ರಾಜ್ಯಗಳಲ್ಲೂ ನೆಲೆಸಿರುವ ಇಷ್ಟಲಿಂಗಧಾರಿಗಳಿಗೆ ಲಿಂಗವಂತರು (ಲಿಂಗಾಯತರು) ಎಂದು ಕರೆಯುವುದೇ ಸೂಕ್ತ. ಇವರು ಅನುಸರಿಸುವುದು ವೀರಶೈವ ಮತವನ್ನಲ್ಲ ಏಕೆಂದರೆ ಶೈವ ಧರ್ಮ ಎಂಬ ವೃಕ್ಷದಲ್ಲಿ ವೀರಶೈವ ಎಂಬುದು ಒಂದು ಟೊಂಗೆ ಮಾತ್ರ. ತಮಿಳುನಾಡು–ಆಂಧ್ರಗಳಲ್ಲಿ ಇರುವ ವೀರಶೈವ ಎಂಬೊಂದು ಜನಾಂಗವಿದೆ. ಅವರಲ್ಲಿ ವರ್ಣಾಶ್ರಮ ಪದ್ಧತಿ ಆಚರಣೆಯಲ್ಲಿದೆ. ಅವರಲ್ಲಿ ಬ್ರಾಹ್ಮಣ ವೀರಶೈವರನ್ನು ಬಿಟ್ಟು ಉಳಿದವರು ಮಾಂಸಾಹಾರಿಗಳು. ಅಂಥ ಜನರು ಬೆಂಗಳೂರಲ್ಲಿ 5000 ಜನ ಇದ್ದು ಒಮ್ಮೆ ಶ್ರೀ ಐ. ಎಂ. ಮಗದುಮ್ ಅವರನ್ನು ದೀಕ್ಷೆ ಕೊಡಿಸಿ, ನಿಮ್ಮ ಸಮಾಜಕ್ಕೆ ಸೇರಿಸಿಕೊಳ್ಳುವಿರಾ ಎಂದು ಕೇಳಿದರಂತೆ. ಅವರು ತಮಿಳುನಾಡಿನಲ್ಲಿ ತಿರುವಾಚಕಮ್ ತಮ್ಮ ಧರ್ಮ ಗ್ರಂಥ ಎಂದರೆ, ಆಂಧ್ರದಲ್ಲಿ ಶ್ರೀಕರಭಾಷ್ಯ ಮುಂತಾದುವನ್ನು ಮನ್ನಿಸುವರು.

ಗುರು ಬಸವಣ್ಣನವರ ಕಾಲದಲ್ಲಿ ತಂಡೋಪತಂಡವಾಗಿ ಇವರು ಲಿಂಗವಂತರಾದರು. ಕರ್ನಾಟಕದಲ್ಲಿ ಇರುವವರ ಮಧ್ಯೆ ಅಥವಾ ವಿಶ್ವದಾಕಾರದ ಇಷ್ಟಲಿಂಗಧಾರಿಗಳಲ್ಲಿ ನಾವು ಈ ವಿಭಜನೆ ಹೇಳುವುದಿಲ್ಲ. ಈ ಸಂಸ್ಕೃತಿಗೆ ಪೂರ್ತಿ ಬೇರೆಯೇ ಆದ ಒಂದು ಜನಾಂಗದ ಬಗ್ಗೆ ಹೇಳುವುದು. ಅವರು ಬಸವೋಕ್ತ ಲಿಂಗಾಯತ ಧರ್ಮ ಸ್ವೀಕರಿಸಿದರೆ ಯಾರು ಬೇಡ ಎನ್ನುವರು. ಸಮಸ್ಯೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಿರಿ. ಈ ಜನರಿಗೆ ವೀರಶೈವರು ಎಂದು ಕರೆಯುವುದನ್ನು ಬಿಟ್ಟು, ಮೊದಲು ರೂಢಿ ಇದ್ದಂತೆ ಲಿಂಗವಂತರು ಎಂದು ಹೆಚ್ಚು ಹೆಚ್ಚು ಬಳಸಿರಿ. ಎಂಟುನೂರು ವರ್ಷಕಾಲ ಲಿಂಗವಂತ ಧರ್ಮ ಎಂಬ ಪ್ರಯೋಗ ಗ್ರಾಮಾಂತರ ಪ್ರದೇಶದಲ್ಲಿ ರೂಢಿಯಲ್ಲಿತ್ತು. ಸಾಹಿತಿಗಳೇ ವೀರಶೈವ ಪ್ರಯೋಗ ಜಾಸ್ತಿ ಮಾಡಿ, ತಪ್ಪು ಕಲ್ಪನೆ ಹುಟ್ಟಲು ಕಾರಣರಾಗಿದ್ದಾರೆ ಎಂಬುದನ್ನು ಅರಿಯಿರಿ.

—ಬಾಣೂರು ಹಿರಣ್ಣಯ್ಯ ತರೀಕೆರೆ

● ವೀರಶೈವ ಮತ ಮತ್ತು ಲಿಂಗವಂತ ಧರ್ಮ ಒಂದೇ ಅಲ್ಲವೆ ? ರೂಢಿಯಲ್ಲಿ ಹಾಗೇ ಬಳಕೆಯಲ್ಲಿದೆಯಲ್ಲ.

○ ಇಬ್ಬರು ವ್ಯಕ್ತಿಗಳು ಇದ್ದಾರೆ ಎಂದುಕೊಳ್ಳಿರಿ. ಒಬ್ಬನು ಕುಬ್ಜನಾಗಿ ಕಪ್ಪಾಗಿ, ಕುರೂಪಿಯಾಗಿದ್ದಾನೆ. ಆತನ ಹೆಸರು ವೀರಪ್ಪ ಎಂದು ಕೊಳ್ಳುವಾ. ಇನ್ನೊಬ್ಬಾತ ಬೆಳ್ಳಗೆ, ಎತ್ತರವಾಗಿ ಸುಂದರವಾಗಿ ಇದ್ದಾನೆ. ಆತನ ಹೆಸರು ಶರಣಪ್ಪ ಎಂದುಕೊಳ್ಳುವಾ. ಉಭಯತರ ಹೆಸರು ಬೇರೆ, ರೂಪ ಬೇರೆ, ಗುಣ–ಸ್ವಭಾವಗಳೂ ಬೇರೆ. "ವೀರಪ್ಪಾ ನಿಮ್ಮ ತಂದೆ ಯಾರು?" ಎನ್ನುವಿರಿ. ಆಗ ಆತ ತನ್ನ ತಂದೆಯ ಹೆಸರು ಶಿವಪ್ಪ ಎನ್ನುವನು. ಅದೇ ಪ್ರಶ್ನೆಯನ್ನು ನೀವು ಶರಣಪ್ಪನಿಗೆ ಕೇಳಿದರೆ ಆತ ತನ್ನ ತಂದೆ ಹೆಸರು ಬಸವರಾಜಪ್ಪ ಎನ್ನುವನು. ಈಗ ನೀವೇ ಹೇಳಿ ವೀರಪ್ಪ–ಶರಣಪ್ಪ ಒಬ್ಬನೆಯೋ ? ಅಥವಾ ಇಬ್ಬರೂ ಅಣ್ಣ ತಮ್ಮಂದಿರೋ? ಅಥವಾ ಇಬ್ಬರೂ ಬೇರೆ ಬೇರೆಯೋ ಎಂಬುದನ್ನು.

—ಶೈಲಾ ಎಂ. ಕೆ.

● ಕಾಯದಿಂದ ಲಿಂಗದರ್ಶನ, ಜಂಗಮದರ್ಶನ, ಪ್ರಸಾದ ಸಂಪತ್ತು; ಕಾಯದಿಂದ ನಿಮ್ಮ ಕಂಡೆ ಎನ್ನುತ್ತಾರೆ ಚನ್ನಬಸವಣ್ಣನವರು. ಇದು ಕಾಯವೋ ಕಾಯಕವೋ ?

○ ಶರೀರವು ಮಾಯೆಯಲ್ಲ, ಮಿಥ್ಯವಲ್ಲ ದೇವರ ಅಮೂಲ್ಯ ಕೊಡುಗೆ. ಏಕೆಂದರೆ ಏನನ್ನು ಸಾಧಿಸಬೇಕಾದರೂ ಕಾಯವು ಬೇಕೇ ಬೇಕು. ಅದನ್ನು ಕೊರಗಿಸಿ, ಮರುಗಿಸಿ, ಅನಾರೋಗ್ಯ ಪೀಡಿತವಾಗುವಂತೆ ಮಾಡಬಾರದು ಎಂಬುದನ್ನೇ ಇಲ್ಲಿ ಚನ್ನಬಸವಣ್ಣನವರು 'ಕಾಯದಿಂದ' ಲಿಂಗ–ಜಂಗಮ-ಪ್ರಸಾದ ಪ್ರಾಪ್ತಿ ಎಂದು ಪ್ರತಿಪಾದಿಸುತ್ತಾರೆ.

—ಅವರೇ,

● ಮೊದಲು ಕಲ್ಯಾಣ ಕಿರಣದಲ್ಲಿ ವಿಷಯ ಸಂಗ್ರಹ ಇರುತಿತ್ತು. ಈಗೀಗ ದಾನಿಗಳ ಹೆಸರಿನ ಲಿಸ್ಟ್ ದೊಡ್ಡದಾಗುತ್ತಿದೆ. ಬೇಕಾದರೆ ಚಂದಾ ಹಣ ಜಾಸ್ತಿಮಾಡಿರಿ. ಇಲ್ಲವೇ ದಾನಿಗಳ ಹೆಸರು ಪ್ರಕಟಿಸಬೇಡಿರಿ.

○ ಈ ಕಾಲದಲ್ಲಿ ಧಾರ್ಮಿಕ ಪತ್ರಿಕೆ ನಡೆಸುವುದು ಅಷ್ಟೊಂದು ಸುಲಭವಲ್ಲ. ದಾನಿಗಳ ನೆರವಿದೆ ಎಂದೇ ಕಲ್ಯಾಣ ಕಿರಣ ನಡೆಸಲುಸಾಧ್ಯವಾಗಿದೆ. ವಿವಿಧ ಯೋಜನೆಗಳಿಗೆ ಜನರು ಕೊಟ್ಟ ಹಣ ನಮಗೆ ಕೈಸೇರಿತೆಂಬುದು ಯಾದಿಯನ್ನು ಪ್ರಕಟಿಸುವುದರಿಂದ ಖಚಿತವಾಗುವುದು. ಅದರಿಂದ ಇನ್ನಿತರರಿಗೂ ಪ್ರೇರಣೆದೊರೆಯುವುದು. ಚಂದಾ ಬೆಲೆ ಏರಿಸುವುದು ಅಷ್ಟೇ ಕಷ್ಟದ ಕೆಲಸ; ಏಕೆಂದರೆ ಬೆಲೆ ಎಲ್ಲರಿಗೂ ನಿಲುಕುವಂತಿರಬೇಕು.

—ಶರಣ. ಬನ್ನಿಗಿಡದ, ಧಾರವಾಡ.

● ಲಿಂಗವಂತ ಧರ್ಮದಲ್ಲಿ ಹುಟ್ಟಿದ ಪ್ರತಿಯೊಬ್ಬರೂ ದೀಕ್ಷೆಯನ್ನು ಪಡೆದುಕೊಳ್ಳಬೇಕಾದುದು ಕರ್ತವ್ಯ ಎಂದು ನಾವು ನಮ್ಮೂರಿನ ಗುರುಗಳೊಬ್ಬರಿಂದ ದೀಕ್ಷೆ ಪಡೆದೆವು. ವಚನ ಸಾಹಿತ್ಯವನ್ನು ಓದಿದ ಮೇಲೆ ನಮ್ಮ ದೀಕ್ಷಾಗುರು ಮಾಡುವ ಆಚರಣೆ ವಚನ ವಾಙ್ಮಯದಲ್ಲಿ ನಮ್ಮ ಧರ್ಮ ಗುರು ಹೇಳಿದುದಕ್ಕಿಂತಲೂ ಪೂರ್ತಿ ಬೇರೆಯೇ ಆಗಿದೆ. ಈಗ ನಮಗೆ ಸಂದಿಗ್ಧತೆ ಬಂದಿದೆ. ಯಾವುದು ಸರಿ? ಎಂಬುದು ಮೊದಲ ಪ್ರಶ್ನೆ. ಎರಡನೆಯದು, ಹರ ಮುನಿದರೆ ಗುರು ಕಾಯುವನು, ಗುರು ಮುನಿದರೆ ಹರ ಕಾಯನು ಎಂಬುದರ ಅರ್ಥವೇನು ?

○ ಗುರುವಿನ ಅರ್ಥವನ್ನು ಮೊದಲು ತಿಳಿಯಬೇಕು.
ಯಾವುದಾದರೊಂದು ಜಾತಿಯಲ್ಲಿ ಹುಟ್ಟಿದ ಮಾತ್ರಕ್ಕೆ ಯಾರಾದರೂ ಗುರು ಅಥವಾ ಜಂಗಮ ಆಗನು. ಜ್ಞಾನದಿಂದ ಗುರುತ್ವ ಅನುಭಾವದಿಂದ ಜಂಗಮತ್ವ ಪ್ರಾಪ್ತಿಯಾಗುವುದು. ರೂಢಿಯಂತೆ ನೀವು ಲಿಂಗದೀಕ್ಷೆ ಪಡೆದಿರುವಿರಿ. ಆದರೆ ಜ್ಞಾನಿಗಳಾದ ನಿಜ ಗುರುಗಳು, ಜಂಗಮರು ಸಿಕ್ಕಾಗ ಅನುಗ್ರಹ ಪಡೆದರೆ ತಪ್ಪೇನಿಲ್ಲ. ತನ್ನ ಧರ್ಮದ ಸಂವಿಧಾನಕ್ಕೆ ಬದ್ಧನಾಗಿ ನಡೆವವನು ಮಾತ್ರ ಗುರು. ಧರ್ಮಗುರು ಬಸವಣ್ಣನವರು ಹಾಕಿಕೊಟ್ಟ ಮಾರ್ಗದಂತೆ ನಡೆಯದವನು ಗುರುವೇ ಅಲ್ಲ. 'ಹರ ಮುನಿದರೆ ಗುರು ಕಾಯ್ವ' ಎಂಬ ಮಾತನ್ನು ವ್ಯಕ್ತಿ ಗುರುವಿಗಿಂತಲೂ ಧರ್ಮ-ಗುರುವಿಗೆ ಅನ್ವಯಿಸಿ ಹೇಳುವುದು ಒಳ್ಳೆಯದು ಮತ್ತು ಹರನನ್ನೂ ಎದುರಿಸುವ ಸಮರ್ಥ ಗುರುವಿದ್ದರೆ ಆಗಲೂ ಈ ಮಾತಿಗೆ ಅರ್ಥವಿದೆ. ವಚನ ಸಾಹಿತ್ಯ ಸಂವಿಧಾನಕ್ಕೆ ಬದ್ಧನಾಗಿ ನಡೆಯದವನು ಯಾರೇ ಇರಲಿ ಆತ ಲಿಂಗವಂತ ಸಮಾಜಕ್ಕೆ ಗುರುವಾಗಲಾರ.

—ಚಂದಾ ನಂಬರ್ 5015- ಬೆಳಗಾಂವ

● ನಾನು ಆರ್ಥಿಕವಾಗಿ ಹಿಂದುಳಿದಿದ್ದರಿಂದ ನನ್ನ ಬಂಧುಗಳೊಬ್ಬರು ಹೀನವಾಗಿ ಕಂಡರು. ಇದರಿಂದ ನೋವುಂಟಾಗಿ ಅವರ ಸಂಪರ್ಕ ಕಡಿಮೆ ಮಾಡಿದೆ. ಇದರಿಂದ ಅವರು ಮಾನಸಿಕ ವ್ಯಥೆಯಿಂದ ಬಳಲುತ್ತಿದ್ದಾರಂತೆ. ನನ್ನ ಮನಸ್ಸು ಒಪ್ಪದಿದ್ದರೂ ಅವರೊಡನೆ ಹೆಚ್ಚಿನ ಸಂಪರ್ಕವಿಟ್ಟುಕೊಳ್ಳಲೆ?

○ ನೀವು ಸಂಪರ್ಕ ಕಡಿಮೆ ಮಾಡುತ್ತಲೇ ಅವರು ವ್ಯಥೆಪಡುತ್ತಿದ್ದಾರೆ ಎಂದರೆ ಅವರು ಪರಿವರ್ತನಶೀಲ ಹೃದಯ ಉಳ್ಳವರು ಎಂದಾಯಿತು. ಒಮ್ಮೆ ಅವರಿಗೆ ನೀವು ಸಂಪರ್ಕ ಕಡಿಮೆ ಮಾಡಿದ್ದೇಕೆ ಎಂಬುದು ಮನವರಿಕೆಯಾಗುವಂತೆ ಮಾಡಿ, ಮನುಷ್ಯ ಸಂಬಂಧ ಇರಬೇಕಾದ್ದು ಪ್ರೀತಿ ವಿಶ್ವಾಸದ ಮೇಲೇ ವಿನಾ ಹಣದ ಮೇಲಲ್ಲ; ಮನುಷ್ಯನನ್ನು ಅಳೆಯಬೇಕಾದ್ದು ಗುಣನಡತೆಗಳಿಂದಲೇ ವಿನಾ ಧನದ ದೌಲತ್ತಿನ ಮೇಲಲ್ಲ ಎಂಬುದನ್ನು ತಿಳಿಸಿರಿ ಅದರಿಂದ ಉಭಯತರ ಪರಿತಾಪಗಳೂ ಪರಿಹಾರವಾಗುವವು.

ಉದಾತ್ತ ಸಂಸ್ಕಾರದ ಬಸವ ಶ್ರೀ

—ಮಾತಾಜಿ

ಬಯಸದೆ ಬಂದ ದೇವಪ್ರಸಾದವಾಗಿ ಆಗಮಿಸಿದ 'ಬಸವಶ್ರೀ' ಬಂದು ಒಂದು ವರುಷವಿಂದಿಗೆ ಕಳೆಯಿತು. 1986ನೇ ವರ್ಷದ ಮಾರ್ಚ್ ತಿಂಗಳಲ್ಲಿ ಸಾಗರ ಪ್ರವಚನ ಮುಗಿಸಿ ಹುಮ್ನಾಬಾದಕ್ಕೆ ಪೂಜ್ಯ ಗಂಗಾಮಾತಾಜಿಯವರ ಪ್ರವಚನ ಮುಕ್ತಾಯಕ್ಕೆ ಹೋದೆ. ತುಂಬಾ ಮಾತನಾಡಿ ಎಲ್ಲರನ್ನೂ ಆಕರ್ಷಿಸುವ ಆದರೆ ಕಪ್ಪಗಿನ ಕೊಳಕು ಕೊಳಕಾದ ಹುಡುಗಿಯೊಂದು ಬಂದು ಮುದ್ದು ಮುದ್ದಾಗಿ ಮಾತನಾಡಿ ಊಟತಿಂಡಿ, ಹಣ್ಣು ಹಂಪಲ ಪಡೆಯುತ್ತಿತ್ತು. ಅದರ ಮೇಲೆ ಎಲ್ಲರ ಮರುಕ ದೃಷ್ಟಿ : ಯಾರೋ ಮನೆಗೆ ಕರೆದೊಯ್ಯುವರು ; ಯಾರೋ ಉಣ್ಣಿಸುವರು; ಯಾರ ಮನೆಯಲ್ಲೋ ನಿದ್ರೆ. ಒಂದು-ಎರಡು ದಿನ ಎಲ್ಲಿ ಇದ್ದರೂ ಹುಡುಕಿಕೊಂಡು ಬರುವವರೂ ಇಲ್ಲ. ಆಮೇಲೆ ದೃಷ್ಟಿಮಂದವಾದ ಒಂದು ಮುದುಕಿ ಹುಡುಕಿ ಕೊಂಡು ಬಂದು ಕರೆದಾಗ ಬಲವಂತದಿಂದ ಮನೆಗೆ ಹೋಗುತ್ತಿದ್ದಳು.

ಕುತೂಹಲಗೊಂಡು ಒಂದು ದಿನ ಅಲ್ಲಿದ್ದ ಪ್ರಮುಖರನ್ನು ಕೇಳಿದಾಗ ತಿಳಿದುದಿಷ್ಟು. ತಾಯಿ ಸತ್ತು ಹೋಗಿದ್ದಾಳೆ, ಎಳೆಯ ಕಂದನನ್ನು ಬಿಟ್ಟು. ಇದೀಗ ಮಲತಾಯಿ, ತಂದೆಯೋ ಮಹಾಕುಡುಕ, ಇನ್ನೂ ಏನೇನೋ. ಇರುವ ಆಸರೆ ಕಣ್ಣು ಕಾಣದ ಮುದುಕಿ, ಅಜ್ಜಿ ಮಾತ್ರ. "ಮಾತಾಜಿ, ದೊಡ್ಡ ಮನಸ್ಸು ಮಾಡಿ ಒಯ್ಯಿರಿ. ಈ ಮಗುವಿನ ಪಾಲನೆ ಪೋಷಣೆಗೆ ಯಾರೂ ಇಲ್ಲ" ಎಂದು ಊರಪ್ರಮುಖರಾದ ವೀರಣ್ಣ ಧನಕಾಯಿಕರ್ ಮತ್ತು ಕರಿಯಪ್ಪನವರ ಒತ್ತಾಯ. ಅಜ್ಜಿ ಬಂದಾಗ ಕೇಳಿದೆವು. ಸಂತೋಷದಿಂದ ಒಪ್ಪಿದಳು. "ನನಗೆ ಇವಳದೇ ಚಿಂತೆ. ಕಣ್ಣು ಮಂದವಾಗಿವೆ, ನಾನು ಸತ್ತರೆ ಇವಳಿಗೆ ಯಾರು? ನೀವು ಸಾಕಿದರೆ ನೆಮ್ಮದಿಯಾಗಿ ಪ್ರಾಣ ಬಿಡುತ್ತೇನೆ."

ಒಪ್ಪಿಕೊಂಡೆವು. ಆದರೆ ಅವಳ ತಂದೆಯಿಂದ ಒಪ್ಪಿಗೆ ಇಲ್ಲ ಎಂದು ಮರುದಿನ ಅಜ್ಜಿ ಬಂದು ಹೇಳಿದಾಗ ಸುಮ್ಮನಾದೆವು. ಒಂದು ಫ್ರಾಕು ಕೊಡಿಸುವುದರಲ್ಲಿ ಸಮಾಧಾನ ಪಟ್ಟುಕೊಂಡು ನಾನು ಬೆಂಗಳೂರಿನತ್ತ ಪಯಣಿಸಿದೆ ; ಗಂಗಾಮಾತಾಜಿ ಮುಂದೆ ಆಲಮಟ್ಟಿ ಪ್ರವಚನಕ್ಕೆ ಹೊರಡುವವರಿದ್ದರು.

ಮರುದಿವಸ ಹುಮನಾಬಾದದಿಂದ ಫೋನ್. "ಆ ಮಗುವಿನ ತಂದೆ ಈಕೆಗಿಂತಲೂ ದೊಡ್ಡವನಿದ್ದ 8 ವರ್ಷದ ಪೋಲಿಯೋ ಪೀಡಿತ ಅಣ್ಣನನ್ನು ಕುಡಿದ ಅಮಲಿನಲ್ಲಿ ಕೊಂದಿರುವುದಾಗಿಯೂ ಅವನನ್ನು ಪೋಲಿಸರು ಬಂಧಿಸಿರುವುದಾಗಿಯೂ. ಊರಿನ ಮುಖಂಡರು ಮತ್ತು ಸಬ್‌ಇನ್ಸ್‌ಪೆಕ್ಟರ್ ಆದಿಯಾಗಿ ಬಂದು ಈ ಮುಗ್ಧ ಬಾಲಿಕೆ

ಯನ್ನು ಕರೆದೊಯ್ಯಿರಿ ಎಂದು ಒತ್ತಾಯಿಸುತ್ತಿರುವುದಾಗಿಯೂ, ಮುಂದೇನು ಮಾಡಬೇಕು? ಎಂದು ತಿಳಿಸಿ ಗಂಗಾಮಾತಾಜಿ ಕೇಳಿದರು.

ಆಮಲಿನಲ್ಲಿದ್ದ ತಂದೆ ಈ ಕಂದನನ್ನು ಹುಡುಕಿದ್ದಾಗಿಯೂ, ಅಜ್ಜಿಯ ಉಪಾಯದಿಂದ ಇದು ಉಳಿದುದಾಗಿಯೂ, ಇಲ್ಲಿಯೇ ಬಿಟ್ಟರೆ ಆಕೆ ಉಳಿಯುವುದಿಲ್ಲವಾಗಿಯೂ ತಿಳಿಸಿ ಊರಿನ ಗಣ್ಯರು ಬಂದು ಒತ್ತಾಯಿಸುತ್ತ ಕುಳಿತಿರುವುದಾಗಿಯೂ ಅವಕ್ಕಾಗಿ ಫೋನ್ ಮಾಡಿದ್ದಾಗಿಯೂ ತಿಳಿಸಿದರು.

"ಇದು ದೇವನ ಇಚ್ಛೆ, ಬಸವ ಸಂಕಲ್ಪ ಇರಬೇಕು. ಆಯಿತು ಕರೆತನ್ನಿರಿ...." ಎಂದು ತಿಳಿಸಿದೆ. ಅಲ್ಲಿಂದ ಆಕೆ ವಿಶ್ವಕಲ್ಯಾಣ ಮಿಷನ್ನದ ಮಗಳಾದಳು. ಆಕೆಯ ಜನ್ಮದಿನದ ಮಾಹಿತಿ ಇರಲಿಲ್ಲ. ಓರ್ವ ವೈದ್ಯರಿಗೆ ತೋರಿಸಿ ವಯಸ್ಸನ್ನು ಊಹಿಸಿ ಅಫಿಡವಿಟ್ ಮಾಡಿಸಲಾಯಿತು. 1986 ಏಪ್ರಿಲದಲ್ಲಿ ಜಗನ್ಮಾತಾ ಅಕ್ಕಮಹಾದೇವಿಯ ಜಯಂತಿಯಂದು ನಾಲ್ಕನೆಯ ಹುಟ್ಟು ಹಬ್ಬ ಆಚರಿಸಿ, ಅಂದು "ಬಸವ ಶ್ರೀ" ಎಂದು ಕರೆದೆವು. ಬಸವ ಮಂಟಪದಲ್ಲಿ ಸಮಾವೇಶವಾದ ಶರಣರ ಎದುರಿನಲ್ಲಿ.

ಆಕೆಯ ನೆನಪಿನ ಶಕ್ತಿ ಅದ್ಭುತ. ಬಂದ ನಂತರ ಆಶ್ರಮಕ್ಕೆ ಯಾರೇ ಬರಲಿ ಎಲ್ಲರ ಮುಂದೆ ತನ್ನ ತಂದೆ ಬಂದುದು, ಅಣ್ಣನನ್ನು ಹೇಗೆ ಕೊಂದ ಎಂಬುದು ಎಲ್ಲವನ್ನು ಚಾಚೂ ತಪ್ಪದೆ ನಿರೂಪಣೆ ಮಾಡುತ್ತಿದ್ದಳು. [ಅಂದು ಮನೆಯಲ್ಲಿ ಅನಾಹುತವಾದ ದಿನ ಪೋಲೀಸರಿಗೆ ಚಾಚೂ ತಪ್ಪದೇ ವಿವರಣೆ ಕೊಟ್ಟಳಂತೆ!] ಅಂದು ನಾನು ಹೇಳಿದೆ, "ನೋಡು ನೀನಿನ್ನು ಬಸವಣ್ಣನ ಮಗಳು. ಹಿಂದಿನದು ಏನೂ ಹೇಳಬಾರದು. ಯಾರಾದರೂ ಕೇಳಿದರೆ ನಮ್ಮ ಅಪ್ಪ ಬಸವಣ್ಣ, ಅಮ್ಮ ನೀಲಮ್ಮ ಎನ್ನಬೇಕು." ಎಂದೆ ಸರಿ, ಅಂದಿನಿಂದ ಎಲ್ಲರ ಮುಂದೆ ಹಾಗೇ ಹೇಳುವಳು.

ಒಂದು ದಿವಸ ಇತ್ತೀಚೆಗೆ, 'ನಿಮ್ಮಮ್ಮ ಯಾರು?' ಎಂದಾಗ ನೀಲಾಂಬಿಕೆ ಎಂದಳು. ಆಶ್ರಮದಲ್ಲಿರುವ ಓರ್ವ ಸಾಧಕಿ ನೀಲಾಂಬಿಕೆಯನ್ನು ತೋರಿಸಿ, 'ಈಕೆಯಾ?' ಎಂದಾಗ ಆಕೆಯ ಮುಖ ಸಪ್ಪಗಾಗಿ, 'ಅಲ್ಲ.... ಫೋಟೋದಲ್ಲಿರುವ ನೀಲಾಂಬಿಕೆ....' ಎಂದು ಫೋಟೋ ತೋರಿಸಿದಳು. ಇನ್ನೊಂದು ದಿನ ಯಾರೋ ಕೇಳುತ್ತಿದ್ದಾಗ, "ನಮ್ಮ ಅಪ್ಪ ಬಸವಣ್ಣ. ನಮ್ಮಮ್ಮ ಅಕ್ಕಮಹಾದೇವಿ" ಎಂದಳು. ನಾನು ಚಕಿತಳಾಗಿ, 'ಅದ್ಯಾಕಮ್ಮ ....ನೀಲಾಂಬಿಕೆ ಅಲ್ವ-? "ಆ ಹೆಸರಿನ ನೀಲಾಂಬಿಕೆ ಇಲ್ಲಿ ಇದ್ದಾಳೆ. ಅದಕ್ಕೆ ಅಕ್ಕಮಹಾದೇವಿ ಎಂದ" ಎಂದಳು. ನಾನಂತೂ ಈ ಉತ್ತರದಿಂದ ಬೆರಗಾದೆ.

ಈ ಲೇಖನ ಬರೆಯುವ ಹಿನ್ನೆಲೆಯಲ್ಲಿ ಒಂದು ಉದ್ದೇಶವಿದೆ. ಮೂರು ವರುಷದ ಬಾಲಿಕೆಯಾಗಿ ಆಕೆ "ಬಸವ ಸಂಕಲ್ಪ" ವೆಂಬಂತೆ ಬಂದಿದ್ದಾಳೆ. ಅವಳ ಭವಿಷ್ಯ ಹೇಗೆ ರೂಪುಗೊಳ್ಳುವುದು ಎಂಬ ಬಗ್ಗೆ ನಾವು ಕುತೂಹಲಿತರಾಗಿದ್ದೇವೆ. ನೀವೂ ಗಮನಿಸಬೇಕು. ಏಕೆಂದರೆ ಅದೊಂದು ಉದಾತ್ತ ಚೇತನ ; ಹಿಂದಿನ ಜನ್ಮದ ಸಂಸ್ಕಾರ ಆಕೆಯಲ್ಲಿ ಪ್ರಬಲವಾಗಿದೆ ಎನಿಸುತ್ತಿದೆ. ಸಾಧನಾ ಮಾರ್ಗದಲ್ಲಿ ಸಾಕಷ್ಟು

ದೂರ ಹಿಂದಿನ ಜನ್ಮದಲ್ಲಿ ಕ್ರಮಿಸಿದ್ದ ಈ ಆತ್ಮ ಸ್ವಲ್ಪ ಪಾಪಕರ್ಮ ಹೊತ್ತಿದ್ದ ಕಾರಣವೇ ಕೇವಲ 3½ ವರ್ಷಗಳ ಅವಧಿಯಲ್ಲಿ ಪಡಬಾರದ ನರಕಯಾತನೆ ಅನುಭವಿಸಿದೆ. ಆ ಪಾಪ ಕರ್ಮ ಕಳೆದುಹೋದ ಕಾರಣ ಇಂದು ಶರಣರ ಕಣ್ಮಣಿಯಾಗಿ, ಬಸವಣ್ಣನ ಕರುಣೆಯ ಕಂದಳಾಗಿ ಬೆಳೆಯುತ್ತಿದ್ದಾಳೆ.

ಕೆಲವು ಲೀಲೆಗಳು

ಅವಳ ವರ್ತನೆಗಳು ಕೆಲವೊಮ್ಮೆ ವಿಲಕ್ಷಣವಾಗಿ ತೋರಿ ಬರುತ್ತವೆ. ಒಂದು ದಿವಸ ನಮ್ಮ ಟ್ರಸ್ಟ್ ಸದಸ್ಯರಾದ ಶರಣ ಪುಟ್ಟರುದ್ರ ಅವರು ಬಂದಿದ್ದರು. ನಾವು ಮಾತನಾಡುತ್ತ ಕುಳಿತಿದ್ದೆವು. ಇದ್ದಕ್ಕಿದ್ದಂತೆಯೇ ಬಂದು ಬಸವಣ್ಣನವರ ಪ್ರತ್ಥಳಿಯ ಮುಂದೆ ಇಟ್ಟಿದ್ದ ಹಣ್ಣು-ಕಾಯಿ ತೆಗೆದುಕೊಂಡು ವಿಭೂತಿ ಧರಿಸಿ, ಬಸವ ಮೂರ್ತಿಯ ಪಾದಕ್ಕೆ ಮುಟ್ಟಿಸಿ ತಂದು ಪುಟ್ಟರುದ್ರಪ್ಪರಿಗೆ ಕೊಟ್ಟಾಗ ಅವರು ಬೆರಗಾದರು. "ಹಿಂದಿನ ಜನ್ಮದಲ್ಲಿ ಗುರುವಾಗಿದ್ದಿರಬೇಕು. ಆದ್ದರಿಂದ ಅಪ್ರಯತ್ನ ಪೂರ್ವಕವಾಗಿ ಹೀಗೆ ಮಾಡಿದ್ದಾಳೆ." ಎಂದುಕೊಂಡೆವು.

ಇನ್ನೊಂದು ದಿವಸ, ನಮ್ಮೊಡನೆ ಧಾರವಾಡಕ್ಕೆ ಕರೆದೊಯ್ದಿದ್ದೆ. 14-4-1987 ರಂದು ಬೆಳಿಗ್ಗೆ ಸ್ನಾನ ಮಾಡಿ, ಕೆಲವರಿಗೆ ದೀಕ್ಷೆ ಮಾಡುತ್ತಿದ್ದೆ. 'ಬಸವಶ್ರೀ' ಸ್ನಾನ ಮಾಡಿ ಬಂದು "ಮಾತಾಜಿ, ಇವತ್ತು ನನಗೆ ಆಶೀರ್ವಾದ ಮಾಡಿ...." ಎಂದಳು. ಯಾರು ಹೇಳಿ ಕಳಿಸಿದರು? ಎಂದೆ, 'ಜಯಕ್ಕ' ಎಂದಳು. ಕೊಂಚ ಕಾಲ ತಡೆದು, "ನಾನು ಮುಂದೆ ಇಲ್ಲಿಗೆ ಅಕ್ಕಮಹಾದೇವಿ ಪೀಠಕ್ಕೆ ಬರಬೇಕಲ್ವಾ?" ಎಂದಾಗ ನಾನು ಸ್ತಂಭೀಭೂತಳಾದೆ. ಯಾರಾದರೂ ಹೇಳಿಕೊಟ್ಟು ಕಳಿಸಿರಬೇಕು ಎಂದು ಕೇಳಿದರೆ ಯಾರೂ ಹೇಳಿರಲಿಲ್ಲ. "ಬಸವಣ್ಣನ ವಾಣಿಯೇ ಇದು?" ಎಂದು ಆಲೋಚಿಸತೊಡಗಿದೆ.

ದಿ. 10-4-1987 ರಂದು ಧಾರವಾಡಕ್ಕೆ ಬಂದು ಆಶ್ರಮವನ್ನು ಎಲ್ಲ ತೋರಿಸುತ್ತಾ ಕರೆದೊಯ್ದೆ. ನನ್ನ ಪೂಜಾಕೋಣೆಯಲ್ಲಿ ಕಾಲಿಟ್ಟವಳೇ. "ಅಯ್ಯೋ. ಪ್ರಭುದೇವರ ಪೂಜಾಪೀಠ ಇಲ್ಲಿದೆ." ಎಂದಾಗ ನಾನು ಚಕಿತಳಾಗಿ ನಿಂತೆ. 'ಪ್ರಭುದೇವರ ಪೀಠ ನೀನೆಲ್ಲಿ ನೋಡಿದೆ?' ಎಂದಾಗ ಉತ್ತರಿಸಲಿಲ್ಲ. ಸಿನಿಮಾದಲ್ಲಿ ಪ್ರಭುದೇವರ ಪೀಠ ನೋಡಿ ಹೇಳುತ್ತಿರಬೇಕು ಎಂದು ಊಹಿಸಿ ಕೇಳಿದೆ. ಸಿನೆಮಾದಲ್ಲಿರುವ ಆ ಕುರ್ಚಿಗೂ, ಬಸವ ಮಂಟಪದಲ್ಲಿರುವ ಪೀಠಗಳಿಗೂ ಹೋಲಿಕೆ ಇದೆಯೇ ವಿನಾ, ಇಲ್ಲಿಯ ಪೂಜಾಪೀಠಕ್ಕೆ ಯಾವ ಹೋಲಿಕೆಯೂ ಇರಲಿಲ್ಲ. ಅದೇಕೆ ಹೇಳಿದಳು ಎಂಬುದು ಅರ್ಥವಾಗಲಿಲ್ಲ.

ದಿ. 15-4-1987 ರಂದು ಶಾಬಾದಿಮಠ ಪ್ರಕಾಶನದ ಕ್ಯಾಲೆಂಡರ್ ನೋಡುತ್ತಾ ಏನೋ ಗುರುತು ಹಾಕಿಕೊಳ್ಳುತ್ತಿದ್ದೆ. ಆ ಕ್ಯಾಲೆಂಡರ್‌ದಲ್ಲಿ ಬಂದ ಮಣಿಯ ಮಂಟಪವೊಂದನ್ನು ನೋಡಿ, "ಮಾತಾಜಿ ಇದು ದೇವಶಿಖಾಮಣಿ" ಎಂದಳು. ಪದಪ್ರಯೋ

ಗದಲ್ಲಿ ತಪ್ಪಿಲ್ಲ. ಆದರೆ ನಾವು ಈವರೆಗೂ ಮಂಟಪದ ಆಕಾರದಲ್ಲಿರುವ ಅಂಥ ವಸ್ತುವನ್ನು ಯಾರೂ 'ದೇವಶಿಖಾಮಣಿ' ಎಂದು ಕರೆದುದನ್ನು ನೋಡಿಲ್ಲ. ಅಂದಾಗ ಈ ಪದಪುಂಜ ಹೇಗೆ ಬಂದೀತು?

ಕನ್ನಡ ನಿಘಂಟುವಿಗೆ ಎರಡು ಪದಗಳು

ಚಿತ್ರದುರ್ಗದಲ್ಲಿ ಪ್ರವಚನ ನಡೆದಿದೆ. ಕಾರಿನಲ್ಲಿ ಕುಳ್ಳಿರಿಸಿಕೊಂಡು ಡ್ರೈವರ್ ಬಸವರಾಜ ಹೋಗುತ್ತಿದ್ದಾನೆ. "ಅಣ್ಣಾ, ಬಾಯಾರಿಕೆ ಆಗಿದೆ, ನೀರು ಬೇಕು...."

"ಇಲ್ಲಿ ನೀರು ಇಲ್ಲ ಮರಿ, ಸ್ವಲ್ಪ ಕಾಲ ತಾಳು. ಮನೆಗೆ ಹೋಗೋಣ...."

"ಅಣ್ಣಾ.... ನನಗೆ 'ಚೀಪು-ನೀರು' ಕೊಡಿಸು...." ಬಸವರಾಜನಿಗೆ ಮತ್ತು ಕಾರಲ್ಲಿ ಇದ್ದ ಚಳ್ಳಕೆರೆಯ ಸದ್ಭಕ್ತರಾದ ಜಯರತ್ನಮ್ಮ ಅವರಿಗೆ ಆಶ್ಚರ್ಯವಾಗಿದೆ.

"ಚೀಪು-ನೀರು ಎಂದರೇನು." ಬೆರಗಾಗಿ ಕೇಳಿದಾಗ, ಐಸ್ ಕ್ರೀಮಿನವನು ಇಟ್ಟುಕೊಂಡು ನಿಂತಿದ್ದ ಐಸ್ ಕ್ಯಾಂಡಿಯನ್ನು ತೋರಿಸಿದ್ದಾಳೆ. ಅವರುಗಳು ಆಶ್ಚರ್ಯಭರಿತರಾಗಿ ಬಂದು ಐಸ್‌ಕ್ಯಾಂಡಿಗೆ "ಚೀಪು-ನೀರು" ಎಂಬ ಹೊಸ ಶಬ್ದ ಕೊಟ್ಟಳು ಎಂದು ಹೇಳಬೇಕೆ?

ಒಂದು ದಿವಸ ಬಸವ ಮಂಟಪದಿಂದ ಬಸವ ಗಂಗೋತ್ರಿಗೆ ಕಾರಲ್ಲಿ ಹೋಗುತ್ತಲಿದ್ದೆವು. ಮೈಸೂರು ಕಡೆಯಿಂದ ಟ್ರೇನ್ ಬಂತು. ಆಕೆ ಟ್ರೇನನ್ನು ಮೊಟ್ಟ ಮೊದಲ ಬಾರಿಗೆ ನೋಡಿದ್ದು, ಖುಷಿಯಿಂದ ಚಪ್ಪಾಳೆ ತಟ್ಟಿದಳು, "ಇದೇನು ಮಾತಾಜಿ? ಎಂದಳು." "ಅದಕ್ಕೆ ಟ್ರೇನು ಅಂತಾರೆ" ಅಂದೆ. "ಅಲ್ಲ.... ಇದು ಹೊಗೆ ಬಂಡಿ", ಎಂದಾಗ ಚಕಿತರಾಗುವ ಪಾಳೆ ನಮ್ಮದಾಯಿತು. ನಿಜ, 'ಹೊಗೆಬಂಡಿ' ಎಷ್ಟು ಸೂಕ್ತ ಪದ! ಅದು ಉಗಿಯಿಂದ ಓಡುವ ಬಂಡಿಯಾದರೂ ಹೊಗೆಯುಗುಳುತ್ತಾ ಹೋಗುವುದಿಲ್ಲವೆ? ಆಕೆ ಹಳ್ಳಿಯಲ್ಲಿ ಬಂಡಿ ನೋಡಿರಲು ಸಾಧ್ಯ. ಆದರೆ 'ಹೊಗೆಬಂಡಿ' ಎಂಬ ಪದವನ್ನು ಹೇಗೆ ರೂಪಿಸಿದಳು? ಎಲ್ಲರಿಗೂ ಆಶ್ಚರ್ಯ!

ರಸ ಪ್ರಜ್ಞೆ

ಒಂದು ದಿನ ಕಾರಿನಲ್ಲಿ ಅನೇಕರು ಹೋಗುತ್ತಿದ್ದಾರೆ. ಎಲ್ಲರೂ ಮಾತಿನಲ್ಲಿ ತಲ್ಲೀನರು. 'ಬಸವಶ್ರೀ' ಮಾತ್ರ ಮೌನಿಯಾಗಿ ಸುತ್ತಲೂ ನೋಡುತ್ತ ಒಮ್ಮೆ ಅಂದಳಂತೆ, "ಅಕ್ಕಾ ಗಿಡದ ಎಲೆಗಳು ಎಷ್ಟು ಚೆನ್ನಾಗಿ ನಗುತ್ತಿದ್ದಾವೆ ನೋಡು!" ಎಲ್ಲರೂ ಹೊರಗೆ ನೋಡಿದರೆ ಸುಪ್ರಭಾತದ ಸೂರ್ಯನ ಹೊಂಗಿರಣಗಳಲ್ಲಿ ಎಲೆಗಳು ನಗುತ್ತಿದ್ದುದು, ನಿಜ. ಆದರೆ ದೊಡ್ಡವರಿಗೆ ಕಾಣದ್ದು ಈ ಪುಟ್ಟ ಮೆದುಳಿನ ಕಲ್ಪನೆಗೆ ಕಂಡದ್ದು ಹೇಗೆ? ಇವೆಲ್ಲ ಬಾಲಲೀಲೆಗಳೋ. ಶಿವನ ಲೀಲೆಗಳೋ?

ಒಂದು ಭಾನುವಾರ ಬಸವ ಗಂಗೋತ್ರಿಗೆ ಬಂದಿದ್ದಳು. ಒಳಗಿದ್ದ ನನ್ನನ್ನು ಕೂಗಿ ಕರೆದು, "ಮಾತಾಜಿ ಈ ಗುಲಾಬಿ ಹೇಗೆ ನಗುತ್ತಿದೆ, ನೋಡಿ ಬನ್ನಿ." ಹೊರಗೆ ಹೋಗಿ ನೋಡಿದೆ, 'ಬೆಳಗಿನ ಸೂರ್ಯನ ಬೆಳಕಿನಲ್ಲಿ ಒಂದು ಸುಂದರ ಗುಲಾಬಿ ದೊಡ್ಡದಾಗಿ ಅರಳಿ ತೂಗಾಡುತ್ತಿದೆ. ನಿಜ, ಅದು ನಸುನಗುವ ಮುಖದಂತಿತ್ತು. ಆದರೆ ನಾಲ್ಕು ವರ್ಷದ ಬಾಲಿಕೆಗೆ ಕಂಡುದೆಂತು?

ಇನ್ನೊಂದು ದಿನ ಅಕ್ಕಮಹಾದೇವಿಯ ಫೋಟೋವನ್ನು ದಿಟ್ಟಿಸಿ ನೋಡುತ್ತ ಒಬ್ಬಳೇ ಕುಳಿತ್ತಿದ್ದಳು. ನಾನು ಅಡ್ಡಾಡುತ್ತಾ ಅತ್ತ ಬಂದು ಏನು ನೋಡ್ತಿದ್ದೀಯಾ? ಎಂದೆ. "ಮಾತಾಜಿ, ಅಕ್ಕಮಹಾದೇವಿಯ ಮೂಗು, ತುಟಿ ಎಷ್ಟು ಚೆನ್ನಾಗಿವೆ ನೋಡಿ.?" ಎಂದು ಉದ್ಗರಿಸಿದಳು ಆ ಫೋಟೋ ತೋರಿಸಿ. ವಯಸ್ಸಿಗೆ ಮೀರಿದ ರಸಪ್ರಜ್ಞೆ! ಇನ್ನೊಂದು ದಿನ ಟೆಲಿವಿಷನ್‌ದಲ್ಲಿ ಓರ್ವ ಬಾಲಕನ ಕಥೆ ಬಂದ ಕಾರಣ ಚಿಕ್ಕ ಹುಡುಗರಿಗೆಲ್ಲ ಅಪ್ಪಾಜಿ ಕರೆದು ತೋರಿಸುತ್ತಿದ್ದರು. ಎಲ್ಲರೂ ಸುಮ್ಮನೆ ಕುಳಿತು ನೋಡುತ್ತಿದ್ದರು. ಆಗ 'ಬಸವಶ್ರೀ' ಇದ್ದಕ್ಕಿದ್ದಂತೆಯೇ 'ಆ ಹುಡುಗನ ಗದ್ದ ಎಷ್ಟು ಚೆನ್ನಾಗಿದೆ ಅಲ್ವಾ?' ಎಂದಳು. ನಿಜ, ಆ ಬಾಲಕನ ಮುಖದಲ್ಲಿ ಅತ್ಯಂತ ಸುಂದರವಾದುದು ಅವನ ಗದ್ದವೆ ಆಗಿತ್ತು. ವಯಸ್ಸಿಗೆ ಮೀರಿ ಆಕೆ ಅನಿಸಿಕೆಗಳನ್ನು ಉದ್ಗರಿಸುವುದು ನಮಗೆ ವಿಚಿತ್ರವೇ ಎನ್ನಿಸುತ್ತಿದೆ. ಇದನ್ನೆಲ್ಲ ನೋಡಿದಾಗ ಆಕೆ ತುಂಬಾ ಉದಾತ್ತವಾದ ಸಂಸ್ಕಾರದ ಮೊತ್ತವನ್ನು ಹೊತ್ತು ಬಂದ ಆತ್ಮ ಎನ್ನಿಸುತ್ತದೆ. ಆಕೆಯ ತಾಯಿ-ತಂದೆ, ಮನೆತನ, ಪರಿಸರ ನೋಡಿ ಅವಳ ವ್ಯಕ್ತಿತ್ವ ನೋಡಿದರೆ ಎಡ್ಗಾರ್‌ಕೈಸಿ ಹೇಳುವಂತೆ "Psychic heredity is more powerfull than physical heredity." ಎಂದು ಅನ್ನಿಸುವುದು. ಆತ್ಮ-ಪಾರಂಪರ್ಯ ಹಿಂದಿನ ಅನಂತ ಜನ್ಮಗಳಿಂದ ಬಂದಿರುತ್ತದೆ. ಹಿಂದಿನ ಸಂಸ್ಕಾರಕ್ಕೆ ಅನುಗುಣವಾಗಿ ಈ ಜನ್ಮದ ತಾಯಿ-ತಂದೆ, ಪರಿಸರ ಲಭ್ಯವಾಗಿರುವುದಾದರೂ ಈ ವಂಶಪಾರಂಪರ್ಯವನ್ನು ಮೀರಿ ಆತ್ಮಿಕಪಾರಂಪರ್ಯ ಕೆಲಸ ಮಾಡುವುದು ನಿಜವೆನ್ನಿಸುತ್ತದೆ.

ಶರಣರ ಕಾಲಜ್ಞಾನದಲ್ಲಿ ಎಂಟುನೂರು ವರುಷಗಳ ನಂತರ ಶರಣರು ಹುಟ್ಟಿ ಬರುತ್ತಾರೆ ಎಂಬ ಮಾತುಗಳು ಬರುತ್ತವೆ. ಆ ಕಾಲವೀಗ ಬಂದಿರಬಹುದೆ? ಎಡ್ಗಾರ್ ಕೈಸಿ ಒಂದು ಮಾತು ಹೇಳುತ್ತಾನೆ : "ಆತ್ಮರುಗಳು ತಮ್ಮ ಪಾಪ-ಪುಣ್ಯಗಳ ಸಂಸ್ಕಾರಕ್ಕೆ ಅನುಗುಣವಾಗಿ ಮುಂದಿನ ಜನ್ಮ ಧರಿಸುತ್ತವೆ, ಈ ದೇಹ ವಿಸರ್ಜನೆಯಾದ ನಂತರ ಆ ಆತ್ಮರುಗಳಿಗೆ ತಕ್ಕಂತಹ ಭೂಮಿಕೆ ಸಿಗದಿದ್ದಾಗ ಆ ಆತ್ಮರುಗಳು ಸೂಕ್ತ ಕಾಲ ಬರುವವರಗೆ, ಶತಮಾನಗಳವರೆಗೆ ಸಹ ಕಾಯಬಲ್ಲವು. ತಮ್ಮ ಸಂಸ್ಕಾರಕ್ಕೆ ಅನುಗುಣವಾದ ಪರಿಸರ, ಭೂಮಿಕೆ ಸಿಕ್ಕಾಗ ದೇಹಧಾರಣೆ ಮಾಡಬಲ್ಲವು."

ಶರಣರ ಕಾಲಜ್ಞಾನ ಪರೋಕ್ಷವಾಗಿ ಈ ಮಾತುಗಳನ್ನು ಹೇಳುತ್ತದೆಯೆ ? ಈ ಆತ್ಮವು (ಬಸವಶ್ರೀ) ಅಂದಿನ ಅನುಭವ ಮಂಟಪದಲ್ಲಿ ಇದ್ದು ಪುನಃ ಶರಣರ ಕಾರ್ಯವನ್ನು ಮಾಡಲು ಬಂದಿರಬಹುದೆ?

ಅದೃಷ್ಟಶಾಲಿ

ಹುಟ್ಟಿನಿಂದ ಆಕೆ ಪಟ್ಟ ಕಷ್ಟ ನೋಡಿದರೆ ಆಕೆ ಅದೃಷ್ಟ ಹೀನೆ ಎಂದು ಯಾರಾದರೂ ಅಂದುಕೋಬಹುದು. ಆದರೆ ದೇವರು ಯಾರ್‍ಯಾರ ಮೂಲಕವೋ ಆಕೆಯನ್ನು ಕಾಪಾಡಿಕೊಳ್ಳುತ್ತ ಬಂದು, ಕಾವಳದ ಪೊರೆಯನ್ನು ಹರಿದು ಇಂದು ಅತ್ಯಂತ ಸುಖಿಯಾಗಿ, ಅಸಂಖ್ಯಾತರ ಪ್ರೇಮದ ಪುತ್ಥಳಿಯನ್ನಾಗಿ ಇರಿಸಿದ್ದಾನೆ. ಮನೆಯನ್ನು ಬಿಟ್ಟು ಆಲಮಟ್ಟಿಗೆ ಬರುತ್ತಲೇ ಅವಳ ಕಥೆಯನ್ನು ಕೇಳಿದ ಓರ್ವ ಶರಣರು 501 ರೂಗಳ ಅಡ್ಮಿಷನ್ ಫೀ ಎಂದು ಕೊಟ್ಟರು. ಅವಳನ್ನು ಸೇರಿಸಿರುವ ಶಾಲೆಯ ಮುಖ್ಯಸ್ಥರು ಆಕೆ ಅನಾಥಳೆಂದು ಅರ್ಜಿ ಕೊಡಿರಿ. ಫೀಸು ಮನ್ನಾ ಮಾಡಿಸುತ್ತೇವೆ ಎಂದರು. ಬಸವಣ್ಣನ ಕರುಣೆಯ ಕಂದಳಾದ, ನಮ್ಮೆಲ್ಲರ ಪ್ರೀತಿಯ ಕಣ್ಮಣಿಯನ್ನು ಅನಾಥಳೆಂದು ಕರೆದು ಫೀಸು ಮನ್ನಾ ಮಾಡಿಸಿಕೊಳ್ಳಲು ನಮ್ಮ ಅಂತರಾತ್ಮ ಒಪ್ಪಲಿಲ್ಲ. ನಾವು ಅರ್ಜಿ ಕೊಡಲಿಲ್ಲ. ಆದರೆ ಆಕೆಯನ್ನು ನೋಡಿ ಅವರಿವರು ಕೊಡುವ ಹಣ ಆಕೆಯ ಫೀಸನ್ನು ಪೂರೈಸಿ ಉಳಿಯುತ್ತದಷ್ಟೇ ಅಲ್ಲ ; ಅವಳ ತುದ್ದು ಮಾತಿಗೆ ಅನೇಕರು ಒಲಿದು ಕೊಡಿಸುವ ಬಟ್ಟೆ ಬರೆ ಸಾಕಷ್ಟು. ಇದು ಹಿಂದಿನ ಜನ್ಮದಲ್ಲಿ ಆಕೆ ಗಳಿಸಿದ ಪುಣ್ಯದ ಪ್ರತಿಫಲ ಎನ್ನಿಸದೆ ಇರದು.

ಹುಬ್ಬಳ್ಳಿಯ ಮೂರು ಸಾವಿರ ಮಠದ ಜಗದ್ಗುರುಗಳವರ ಪೀಠಾರೋಹಣದ ರಜತ ಮಹೋತ್ಸವದ ಸಮಾರಂಭದಲ್ಲಿ ಪೂಜ್ಯರಿಗೆ ಸಮರ್ಪಿಸಲೆಂದು ನಮ್ಮ ಸಾಧಕಿಯರು ಚುರುಮರಿಯ ಮಾಲೆಯೊಂದನ್ನು ಸಿದ್ಧಪಡಿಸಿದ್ದರು. ಸುಮಾರು ಎಂಟು ದಿವಸಗಳ ಕಾಲ ಇಬ್ಬರು ಪೋಣಿಸಿ, ಅಲಂಕರಿಸಿದ್ದರು. ಇದನ್ನು ಕುತೂಹಲದಿಂದ ನೋಡುತ್ತಿದ್ದ ಬಸವಶ್ರೀ ಇದ್ಯಾರಿಗೆ? ಎಂದಳು. "ಹುಬ್ಬಳ್ಳಿಯ ಒಬ್ಬರು ಸ್ವಾಮಿಜಿಯವರಿಗೆ" ಎಂದು ಹೇಳಲಾಯಿತು. ಹಾರವೆಲ್ಲವು ಸಿದ್ಧವಾದ ಮೇಲೆ ಜೋಪಾನವಾಗಿ ಎತ್ತಿಟ್ಟರು.

19-4-1987 ರಂದು ಮಧ್ಯಾಹ್ನ ನಾಲ್ಕು ಗಂಟೆಗೆ ಧಾರವಾಡದಿಂದ ಹೊರಟೆವು. ಈಗಿನಿಂದಲೇ ಪರಿಸರ ಪ್ರಜ್ಞೆ, ನಡಾವಳಿಕೆ ಮೂಡಿಸಲೋಸುಗ ಅವಳನ್ನೂ ಕರೆದೊಯ್ಯಲು ಸಿದ್ಧತೆ ಮಾಡಿ, ಕಾರಲ್ಲಿ ಕುಳಿತೆವು. ಧಾರವಾಡ ಆಶ್ರಮದಿಂದ ಹೊರಬಂದು ರೇಲ್ವೆಗೇಟು ದಾಟಿ, ಕಾರು ಹೋಗುತ್ತಿತ್ತು. ಮುದ್ದು ಮುದ್ದಾಗಿ ಮಾತನಾಡುತ್ತ ಕೇಳಿದಳು. 'ಈಗ ಎಲ್ಲಿಗೆ ಹೋಗುತ್ತಿರುವುದು....'

'ಹುಬ್ಬಳ್ಳಿಗೆ' 'ಏಕೆ?'

"ಸ್ವಾಮೀಜಿಯವರ ಕಾರ್ಯಕ್ರಮಕ್ಕೆ."

"ಹಾಗಾದರೆ ಚುರಮರಿ ಮಾಲೆ ತೆಗೆದುಕೊಂಡೇ ಇಲ್ಲ...." ಬಸವಶ್ರೀ ನೆನಪಿಸಿದಳು.

"ಹೌದಾ ಜಯಾ?" ಎಂದು ನಾನಂದಾಗ ಜಯಾಳಿಗೆ ನೆನಪಾಯಿತು. ಅರ್ಧ ಕಿಲೋಮೀಟರ್ ಬಂದಿದ್ದೆವು. ವಾಪಸ್ಸು ಹೋಗಿ ತಂದೆವು. ಬಸವಶ್ರೀಯ ನೆನಪಿನ ಶಕ್ತಿಗೆ ವಿಸ್ಮಯಗೊಂಡೆವು.

ನೆರಳಲ್ಲಿ ನಿಲ್ಲಿಸಲು ಸೂಚನೆ

8-5-87 ರಂದು ಹುಬ್ಬಳ್ಳಿಯಲ್ಲಿ ಹಲವಾರು ಕಾರ್ಯಕ್ರಮ. ಅಂದು ವಿವಾಹ ನೆರವೇರಲಿದ್ದ ಕೆಲವರಿಗೆ ದೀಕ್ಷೆ ಮಾಡಬೇಕಿತ್ತು. ಆದ್ದರಿಂದ ಧಾರವಾಡದಿಂದ ಬೆಳಿಗ್ಗೆ 7-30 ಕ್ಕೆ ಹೊರಟು ಶ್ರೀ ಪರಮಾದಿಯವರ ಮನೆಯಲ್ಲಿ ದೀಕ್ಷೆ ಮಾಡಲು ವ್ಯವಸ್ಥೆ ಮಾಡಲಾಗಿತ್ತು. ಕಾರನ್ನು ಇಳಿದ ತಕ್ಷಣ, ಪರಮಾದಿ ದಂಪತಿಗಳು ತಲೆ ಬಾಗಿಲಲ್ಲಿ ಪಾದಕ್ಕೆ ನೀರೆರೆದು ಸ್ವಾಗತಿಸಲು ಸಿದ್ಧರಾದ ಕಾರಣ ಮುಂದಕ್ಕೆ ನಡೆದೆ. ಸದಾ ನಮ್ಮ ಕಾರನ್ನು ನಡೆಸುವ ಶಿವರಾಯ ಮಾಸ್ತರು ಊರಿಗೆ ಹೋಗಿದ್ದರಿಂದ ತಾತ್ಕಾಲಿಕವಾಗಿ ಚಾಲಕನೊಬ್ಬನನ್ನು ಕರೆತಂದಿದ್ದೆವು.

ಬಸವಶ್ರೀ ಕಾರಿಂದ ಇಳಿದು. "ಏನಪ್ಪ ಕಾರನ್ನು ಎಲ್ಲಿ ನಿಲ್ಲಿಸುತ್ತೀಯಾ ? ನೋಡು ಅಲ್ಲಿ ನೆರಳಿದೆ ನಿಲ್ಲಿಸು." ಎಂದು ಸೂಚಿಸಿದಾಗ ವಯಸ್ಸಿಗೆ ಮೀರಿದ ಆಕೆಯ ಸಮಯಪ್ರಜ್ಞೆ, ನೆನಪಿನ ಶಕ್ತಿಗೆ ಬೆರಗಾದೆವು. ಕಾರು ಇಳಿಯುವಾಗ ನಾವು ಹಾಗೆ ಸೂಚಿಸುತ್ತಿರುತ್ತೇವೆ. ಇವತ್ತು ಬೇಗನೆ ನಾನು ಹೇಳದೆ ಹೋಗಿದ್ದೆ.

ದಿ. 9-5-87 ರಂದು ಪೂಜ್ಯ ಅಪ್ಪಾಜಿಯವರ ಪ್ರವಚನ ಕಾರ್ಯಕ್ರಮದಲ್ಲಿ ಭಾಗಿಯಾಗಲು ತುಮಕೂರಿಗೆ ಮಹಾಲಕ್ಷ್ಮಿ ಎಕ್ಸ್‌ಪ್ರೆಸ್ಸಿನಲ್ಲಿ ಹೊರಟಿದ್ದೆವು. ಟ್ರೇನಿನಲ್ಲಿ ಹೋಗುತ್ತಿರುವಾಗ ಚಿಲಿಪಿಲಿ ಎಂದು ಮಾತನಾಡುವ ಆಕೆ ಬೇಗನೆ ಎಲ್ಲರ ಗಮನ ಸೆಳೆಯುತ್ತಾಳೆ. ಟಿ. ಸಿ.ಯವರು ಸಲಿಗೆಯಿಂದ ಮಾತನಾಡಲು ತೊಡಗಿದರು.

"ಎಲ್ಲಿಗೆ ಹೋಗುತ್ತಿರುವಿ...."

"ತುಮಕೂರಿಗೆ, ಅಪ್ಪಾಜಿ ಬಳಿ"

"ಅಯ್ಯೋ....ಈಗಾಡಿ ತುಮಕೂರಿಗೆ ಹೋಗದು...." ಅವರೆಂದರು.

"ಇಲ್ಲ.... ಹೋಗುತ್ತೆ...." ದೃಢಧ್ವನಿಯಲ್ಲಿ ಹೇಳಿದಳು.

"ಇಲ್ಲ....ಇದು ಮೈಸೂರಿಗೆ ಹೋಗುತ್ತೆ...." ಅವರೆಂದರು. ಸ್ವಲ್ಪ ಗಲಿಬಿಲಿಗೊಂಡಳು. "ಹೌದಾ ಮಾತಾಜಿ?" ಎಂದಳು.

"ಹೌದು.... ನೀನು ಏನು ಮಾಡುತ್ತಿ ಹಾಗಾದರೆ?" ನಾನೂ ಕೇಳಿದೆ. ಆಕೆಯಿಂದ ಏನು ಉತ್ತರ ಬರುತ್ತದೋ ಎಂಬ ಕುತೂಹಲ.

"ನೀವು ಏನು ಮಾಡ್ತೀರೋ ಅದನ್ನೇ ನಾನು ಮಾಡೋದು...." ಎಂದಾಗ ನಾವೇ ಆಶ್ಚರ್ಯಗೊಂಡು ಮೌನ ತಾಳಿದೆವು. ಅಳುವಳೇನೋ, ಗಾಬರಿಗೊಳ್ಳುವಳೇನೋ ಎಂದರೆ ಇಲ್ಲ ; ತಕ್ಷಣ ಉತ್ತರಿಸಿದಳು. ಅಜ್ಜನ ಜೊತೆ ಸುತ್ತಾಡ ಹೋದ ಮೊಮ್ಮಗ "ಮಗೂ ನೀನು ಕಳೆದುಹೋದಿ" ಎಂದಾಗ, "ಇಲ್ಲ ನಾನು ಕಳೆದಿಲ್ಲ ; ಏಕೆಂದರೆ ನೀನು ನನ್ನ ಜೊತೇನೆ ಇದ್ದಿ" ಎಂದು ಉತ್ತರಿಸಿದಂತೆ ಇತ್ತು ಈ ಉತ್ತರ!

ಮೇಲಿನ ಲೇಖನ ಬರೆದು ಸಾಕಷ್ಟು ಸಮಯವಾಯಿತು. ಬರೆದಿಟ್ಟವಳು ಪ್ರಕಟಿಸಲು ಮರೆತಿದ್ದೆ. ದಿ. 4-2-90 ರಂದು ಶ್ರೀ ಅಣ್ಣಯ್ಯಪ್ಪನೆಂಬುವವರು ಪೂಜೆ ಇಟ್ಟಿದ್ದರು, ಹೋಗಿ ಬರುತ್ತಿದ್ದೆವು. ಕಾರಿನಲ್ಲಿ ಬರುತ್ತಿದ್ದ ಬಸವಶ್ರೀ " ಮಾತಾಜಿ ಅವರನ್ನು ನೋಡಿದರೆ ಅಯ್ಯೋ ಅನ್ನಿಸಿ, ಅಳುಬರುತ್ತದೆ." ಎಂದಳು ಯಾರನ್ನಮ್ಮಾ? ಎಂದೆ. "ನೋಡಿ, ಅಲ್ಲಿ ಯಾರೋ ಇದ್ದರು ಪಾಪ ಇಷ್ಟು ಚಳೀಲಿ, ಹಾಕಿಕೊಳ್ಳ ಲಿಕ್ಕೆ ಬಟ್ಟೇನೆ ಇರಲಿಲ್ಲ. ಅವರು ಎಂಥಾ ಜಾಗದಲ್ಲಿ ಮಲಗಿದ್ದರು ಅಂತೀರಿ. ಪಾಪ, ಮಲಗಕ್ಕೆ ಜಾಗ ಇಲ್ಲ, ತೊಡೋಕ್ಕೆ ಬಟ್ಟೆಯಿಲ್ಲ...." ಧ್ವನಿಯಲ್ಲಿ ದುಃಖ ತುಂಬಿತ್ತು.

ಈ ಮಾತಿನಿಂದ ನನಗೆ ಸೋಜಿಗವೆನಿಸಿತು. ಅಂತೂ ತನ್ನ ಸುತ್ತಲಿನ ಜಗತ್ತನ್ನು ಗಮನಿಸುವ, ಗುರುತಿಸುವ, ಸ್ಪಂದಿಸುವ ಗುಣವಿದೆಯಲ್ಲಾ. ಇದು ಬಹು ದೊಡ್ಡ ಗುಣ. ಅದುವೇ ವ್ಯಕ್ತಿಯನ್ನು ಚಿಂತನಶೀಲನನ್ನಾಗಿ ಮಾಡುತ್ತದೆ. 'ದಯವೇ ಧರ್ಮದ ಮೂಲವಾಗಿ' ಎಲ್ಲ ಉದಾತ್ತ ವಿಚಾರಧಾರೆಗಳನ್ನು ಹುಟ್ಟು ಹಾಕಿದೆ. ಸಿರಿವಂತಿಕೆಯ ಆಡಂಬರದಲ್ಲಿ ಬೆಳೆದ ಮಕ್ಕಳಾದರೆ ಅಂಥ ನಿರ್ಗತಿಕರನ್ನು ನೋಡಿ, 'ಅಯ್ಯೋ ಎಷ್ಟು ಕೊಳಕಾಗಿದ್ದಾರೆ.' ಎಂದು ಪ್ರತಿಕ್ರಿಯಿಸುತ್ತವೆ. ಆದರೆ ಬಸವಶ್ರೀಯ ಉದ್ಗಾರದಲ್ಲಿ ಆ ತಿರಸ್ಕಾರ ಕಾಣದೆ ಮಾನವೀಯತೆ-ಮರುಕ ತುಂಬಿದ್ದವು. ಇದು ನನಗೆ ಸಮಾಧಾನ ತಂದಿತು.

ದಿ. 21-2-90ರಂದು ನಾನೇನೋ ಬರೆಯುತ್ತಿದ್ದೆ, ಹತ್ತಿರ ಬಂದಳು. 'ಮಾತಾಜಿ ಇವತ್ತು ನನಗೆ ಅಳು ಬರ್‍ತಿದೆ' ಎಂದಳು. ಏಕೆ? ಎಂದೆ. "ಶಾಲೆಯಿಂದ ಬರುವಾಗ ನನ್ನ ಗೆಳತಿ ದೂಡಿಬಿಟ್ಟಳು. ನನಗೆ ಸಿಟ್ಟು ಬಂದು ಜೋರಾಗಿ ಮಾತಾಡಿದೆ." ತಪ್ಪು ಯಾರದು? ಎಂದೆ. ತಪ್ಪು ಅವಳದೇ, ಅದರೂ ಹಾಗೆ ಜೋರಾಗಿ ಬೈಯಬಾರದಿತ್ತಲ್ವಾ? ಅದಕ್ಕೆ ಅಳು ಬರ್‍ತಿದೆ." ಎಂದಳು.

ಈ ರೀತಿಯ ಆತ್ಮಾವಲೋಕನ ಉದಾತ್ತ ಗುಣ. ಸಾಮಾನ್ಯ ತಪ್ಪುಗಳನ್ನು ಸಮರ್ಥಿಸಿಕೊಳ್ಳುವುದೇ ಮಾನವ ಸಹಜ ಗುಣವಲ್ಲವೆ?

"ಇರಲಿ....ನಾಳೆ ಕ್ಷಮೆ ಕೇಳಿಕೊಂಡು ಬಿಡು...." ಎಂದಾಗ ಅವಳಿಗೆ ಸಮಾಧಾನವಾಯಿತು.

ಶಿವರಾತ್ರಿ ದಿವಸ : ಬಸವಶ್ರೀ ಕೇಳಿದಳು. "ಇವತ್ತೆಲ್ಲ ಏನು ತಿನ್ನುವಂತಿಲ್ಲವೆ? ಉಪವಾಸನೇ ಇರಬೇಕಾ?"

"ಹೌದು...."

"ನನಗೆ ತುಂಬಾ ಹಸಿವಾಗ್ತಾಯಿದೆ. ನಾನು ನೀವು ತಿಂದು ಬಿಡೋಣ."

"ನೀನು ಚಿಕ್ಕವಳು ಹೋಗಿ ತಿನ್ನು...."

"ಇಲ್ಲಪ್ಪ ಅದು Capitalism ಆಗುತ್ತೆ...." ನನಗೆ ದಿಗ್ಭ್ರಾಂತಿಯಾಯಿತು. ಈ ಪದವನ್ನು ಇವಳು ಹೇಗೆ ಅರ್ಥ ಮಾಡಿಕೊಂಡಿರಬಹುದು ಎಂದು ಸಖೇದಾಶ್ಚರ್ಯವಾಯಿತು.

"ಕ್ಯಾಪಿಟಾಲಿಸಮ್ ಅಂದರೇನು?"

"ಇನ್ನೊಬ್ಬರ ಜೊತೆ ಹಂಚಿಕೊಳ್ಳದೆ ತಾವಷ್ಟೆ ತಿನ್ನೋದು...."

ನನಗೆ ಇನ್ನೂ ಆಶ್ಚರ್ಯವಾಯಿತು.

"ಇದು ನಿನಗೆ ಹೇಗೆ ಗೊತ್ತಾಯ್ತು"? ಎಂದೆ.

"ಅಪ್ಪಾಜಿ ಪ್ರವಚನದಲ್ಲಿ ಹೇಳುತ್ತಾರೆ, ಹಂಚಿಕೊಂಡು ತಿನ್ನುವುದು Socialism ಅಂತೆ! ಹರಿದುಕೊಂಡು, ತಾವಷ್ಟೆ ತಿನ್ನೋದು Capitalism ಅಂತೆ. ನೀವೂ ಪ್ರವಚನದಲ್ಲಿ ಹೇಳ್ತೀರಲ್ಲವೆ?" ಇದನ್ನು ಕೇಳಿದಾಗ ನನಗೆ ಅತೀವ ಹರ್ಷವಾಯಿತು. ಈಗ ಸುಮಾರು ಎಂಟು ವರ್ಷ ಇರುವ ಇವಳು ಹೀಗೆಲ್ಲ ಆಲೋಚಿಸುತ್ತಾಳೆ ಎಂದರೆ ಅದ್ಭುತ ವಿಚಾರ ಶಕ್ತಿ ಇದ್ದ ಹುಟ್ಟು ಪ್ರತಿಭಾವಂತ ಬಸವಣ್ಣನವರು ಈ ವಯಸ್ಸಿನಲ್ಲಿ ಆ ರೀತಿ ಸಮಾಜ ಧರ್ಮ ಕುರಿತು ಆಲೋಚಿಸಿರುವುದು ಅಸಂಭವವೇನಲ್ಲ.

ಮಕ್ಕಳ ಲೀಲೆ ಎಂಬಂತೆ ಆಟವಾಡುತ್ತ, ಆಶ್ರಮದಲ್ಲಿರುವ ಅಜ್ಜಿಯರನ್ನು ಮುದ್ದಾಗಿ ಕಾಡಿಸುತ್ತಾ ಮೂಲೆಮೂಲೆಗಳಲ್ಲಿ ಬಚ್ಚಿಟ್ಟುಕೊಳ್ಳುತ್ತಿದ್ದಳು. ಒಂದು ದಿನ ಪುಸ್ತಕಗಳನ್ನು ಸಂಗ್ರಹಿಸಿರುವ ಗವಿಯಲ್ಲಿ ಬಚ್ಚಿಟ್ಟುಕೊಂಡು ಎಷ್ಟು ಹೊತ್ತಾದರೂ ಸಿಕ್ಕಿಯೇ ಇಲ್ಲ. ಆಶ್ರಮದವರು ಅತ್ತಿತ್ತ, ಆಕೆಯ ಸ್ನೇಹಿತೆಯರ ಮನೆಯಲ್ಲೂ ಹುಡುಕಿದ್ದಾರೆ. ಕಡೆಗೆ ತಾನೇ ನಗುತ್ತಾ ಹೊರಬಂದಿದ್ದಾಳೆ. ಇದನ್ನು ತಪ್ಪಿಸಬೇಕೆಂದು ನಾನು ಹೇಳಿದೆ.

"ನೋಡು ಈ ತರಹ ಹೋಗಿ ಬಚ್ಚಿಟ್ಟುಕೊಂಡರೆ ಬಸವಣ್ಣ ನಿನಗೆ ಶಿಕ್ಷೆ ಕೊಡುತ್ತಾನೆ."

"ಏನು ಮಾಡುತ್ತಾನೆ?"

"ಮೂಲೆಗಳಿಗೆ ಚೇಳುಗಳನ್ನು ಕಳಿಸುತ್ತಾನೆ. ಅವು ನಿನ್ನನ್ನು ಕಡಿಯುತ್ತವೆ."

"ಹೀಗೆ ಶಿಕ್ಷೆ ಕೊಡೋದು ಏತಕ್ಕೆ?" ಬಸವಶ್ರೀ ಪ್ರಶ್ನೆ.

"ನಿನಗೆ ಬುದ್ಧಿ ಕಲಿಸಲಿಕ್ಕೆ."

"ಚೇಳು ಕಡಿದರ ಏನಾಗುತ್ತದೆ."

"ಸತ್ತು ಹೋಗುತ್ತಾರೆ." [ಇನ್ನು ಬೇರೆ ಏನು ಹೇಳಬೇಕು. ಅವಳ ದೃಷ್ಟಿಯಿಂದ ಸಾವೊಂದೇ ಭಯಾನಕ. ಅಣ್ಣನ ಸಾವನ್ನು ಕಣ್ಣಾರೆ ಕಂಡಿದ್ದಳಂತೆ.]

"ಬಸವಣ್ಣ ಅಂಥ ಶಿಕ್ಷೆ ಕೊಟ್ಟುಬಿಟ್ಟರೆ, ಸತ್ತೇ ಹೋಗುತ್ತೇವಲ್ಲ. ಆಗ ಇನ್ನೇನು ನಮಗೆ ಬುದ್ಧಿ ಕಲಿಸಲು ಸಾಧ್ಯ?"

ಈಗ ನಾನೇ ದಂಗಾದೆ. ಅವಳ ಚಿಂತನ ಶಕ್ತಿ ಎಷ್ಟು ತೀವ್ರವಾಗಿ ಓಡುವು ದೆಂದರೆ ತಡವರಿಸದೆ ಪ್ರಶ್ನೋತ್ತರ ಜೋಡಿಸುವಳು.

[ತರ್ಕ-ಚಿಂತನೆ ಮನುಷ್ಯನ ಹುಟ್ಟುಗುಣಗಳಲ್ಲಿ ಒಂದು ಎಂಬುದು ಇನ್ನೂ ಯಾವ ಶಾಸ್ತ್ರಗ್ರಂಥಗಳನ್ನು ಓದದ, ಇಂಥವರ ಚಿಂತನೆಯಿಂದ ತಿಳಿದುಬರುವುದು.

ಮಕ್ಕಳ ಮುಂದೆ ಮಾತನಾಡುವಾಗ ಹುಡುಗಾಟಕ್ಕೂ ಸುಳ್ಳು ಹೇಳಬಾರದು ಎಂಬುದನ್ನು ಇದರಿಂದ ಅರಿಯಬಹುದು.]

ಏನೇ ಆಗಲಿ, ಆಕೆ ಒಂದು ದೊಡ್ಡ ವ್ಯಕ್ತಿಯಾಗಿ ಬೆಳೆಯಬೇಕು ; ಬಸವಣ್ಣನ ಕರುಣೆಯ ಕಂದಳಾಗಿ, ಆ ತಂದೆಯ ತತ್ತ್ವಪ್ರಸಾರ ಕಾರ್ಯದಲ್ಲಿ ಮಹತ್ತರ ಸೇವೆ ಸಲ್ಲಿಸಬೇಕೆಂಬುದೇ ನಮ್ಮೆಲ್ಲರ ಆಸೆ. ನಿಮ್ಮಗಳ ಹರಕೆಯೂ ಹಾಗೇ ಇರಲಿ. ಬಯ ಸುವುದು ನಮ್ಮ ಕೈಲ್ಲಿದೆ. ಭವಿಷ್ಯದ ಗರ್ಭದಲ್ಲಿ ಅಡಗಿರುವುದನ್ನು ಯಾರು ಬಲ್ಲರು? ಕಾಲಚಕ್ರವೇ ಅದನ್ನು ಪ್ರಕಟಿಸಬಲ್ಲದು ಅಲ್ಲವೆ? ಒಳ್ಳೆಯದನ್ನು ಹಾರೈಸುವ ಸ್ವಾತಂತ್ರ್ಯ ನಮಗಿದೆ ಅಷ್ಟೆ.

[ಇದೊಂದು ದಾಖಲೆಯಾಗಿ ಬರವಣಿಗೆಯಲ್ಲಿ ಇರಲಿ. ಮುಂದೆ ವ್ಯಕ್ತಿತ್ವದ ಅಧ್ಯಯನಕ್ಕೆ ಅನುಕೂಲವಾಗಬಹುದು ಎಂಬ ದೃಷ್ಟಿಯಿಂದ ಬರೆದಿರುವೆ.] ★

ಬಸವ ಮಂತ್ರ

ಬಸವ ಮಂತ್ರವ ಜಪಿಸೋ ಹೇ ಶರಣ. ॥ಪ॥
ನಿಜಕರ್ತನ ತಿಳಿಸುವ ಮಂತ್ರ
ನಿಜ ಭಕ್ತಿಯ ಕಲಿಸುವ ಮಂತ್ರ
ತತ್ತ್ವ ನಿಷ್ಠೆಯ ಬೆಳೆಸುವ ಮಂತ್ರ
ಅರಿತು ಶರಣನಾಗುವ ಮಂತ್ರ ॥೧॥

ಜಾತಿ ಭೇದವ ತೊಡೆಯುವ ಮಂತ್ರ
ಮೇಲು ಕೀಳು ಅಳಿಸುವ ಮಂತ್ರ
ಲಿಂಗ ಭೇದವ ಜರಿಯುವ ಮಂತ್ರ
ಕಲ್ಯಾಣ ರಾಜ್ಯವ ಕಟ್ಟುವ ಮಂತ್ರ ॥೨॥

ಜೀವಕೆ ಲೇಸ ಬಯಸುವ ಮಂತ್ರ
ವಿಶ್ವಕೆ ಶಾಂತಿಯ ಸಾರುವ ಮಂತ್ರ
ದೇಹವ ದೇಗುಲ ಮಾಡುವ ಮಂತ್ರ
ದೇವ-ಜೀವರ ಬೆಸೆಯುವ ಮಂತ್ರ ॥೩॥

ಸೋದರಿ ಕಸ್ತೂರಿ

ಬಸವ ಕಿರಣ - ಬಸವ ಚಂದ್ರಿಕೆಯರ ಆಗಮನ

ಅದೊಂದು ದಿನ ಧಾರವಾಡ ಆಶ್ರಮದಿಂದ ಪತ್ರ ಬಂದಿತು. ಅಲ್ಲಿಯ ಜವಾಬ್ದಾರಿ ನೋಡಿ ಕೊಳ್ಳುತ್ತಿರುವ ಶರಣೆ ಕಲ್ಯಾಣಮ್ಮನವರದು ಆ ಪತ್ರ. ಓರ್ವ ಮಹಿಳೆ ತುಂಬು ಗರ್ಭಿಣಿ ಬಂದು ಇರಲು ಆಶ್ರಯ ಕೋರಿದ್ದಳಂತೆ. ನಿರ್ಗತಿಕ ಮಹಿಳೆ, ತುಂಬು ಗರ್ಭಿಣಿ ಬೇರೆ ಎಂದು ಆಶ್ರಯಕೊಟ್ಟು ಇರಿಸಿಕೊಂಡುದಲ್ಲದೆ ಸಿವಿಲ್ ಆಸ್ಪತ್ರೆಯ ವೈದ್ಯರಿಗೆ ತೋರಿಸಿದರಂತೆ. ಆಸ್ಪತ್ರೆಯಲ್ಲೇ ಹೆರಿಗೆ ಆಯಿತು; ಮುಂದೆ ಈ ಮಗು ವನ್ನು ನೋಡಿಕೊಂಡು ಹೇಳಿದ ಕೆಲಸ ಮಾಡಿಕೊಂಡು ಇದ್ದುಬಿಡು; ಎಂದು ಆ ಮಹಿಳೆಗೆ ಹೇಳಿದ್ದರಂತೆ. ಆದರೆ ಒಂದು ದಿನ ಆಕೆ ಹೇಳದೆ ಕೇಳದೆ ಆ ಶಿಶುವನ್ನು ಬಿಟ್ಟು ಎಲ್ಲಿಯೋ ಹೊರಟು ಹೋಗಿದ್ದಳು. ಮುಂದೇನು ಮಾಡಲಿ ಎಂದು ಕಲ್ಯಾಣಮ್ಮ ಕೇಳಿ ಪತ್ರ ಬರೆದರು. ನಾನು ಅವರಿಗೆ ತಿಳಿಸಿದೆ.

"ಆ ಶಿಶುವಿನ ತಾಯಿ ಆಕಸ್ಮಿಕವಾಗಿ ಬಂದು ಇಲ್ಲಿ ಹೆತ್ತು ಬಿಟ್ಟು ಹೋಗಿದ್ದಾಳೆ ಎಂದ ಮೇಲೆ ಇದು ದೇವನ ಸಂಕಲ್ಪ ಇರಬಹುದು. ನಮಗೇನೋ ಅನಾಥ ಮಕ್ಕ ಳನ್ನು ಪೋಷಿಸಿ ಅವರನ್ನು ಒಳ್ಳೆಯ ವ್ಯಕ್ತಿಗಳನ್ನಾಗಿ ರೂಪಿಸಬೇಕೆಂದು ಅಪೇಕ್ಷೆ. ಆದರೆ ನೋಡಿಕೊಳ್ಳುವವರು ಬೇಕು. ನಿಮಗೆ ಆ ಕಳಕಳಿ ಇದ್ದರೆ ಸಾಕಿರಿ. ಇದು ನಿಜವಾದ ಸೇವೆ, ನಾನು ಒತ್ತಾಯ ಮಾಡಲಾರೆ. ನಿಮಗೆ ಆಗದೆ ಇದ್ದರೆ ತಿಳಿಸಿರಿ ಯಾರಾದರೂ ಶ್ರೀಮಂತ ಸಂತಾನ ಹೀನ ದಂಪತಿಗಳಿಗೆ ಕೊಡಿಸುತ್ತೇವೆ" ಎಂದೆ.

ಕಲ್ಯಾಣಮ್ಮ ಬಹಳ ಸದ್ಭಾವ-ಸೇವೆಗಳ ನಿಜ ಶರಣೆ. ಅವರ ಮಗಳು ಅನಿತಾ ಈಗಾಗಲೇ ದಾನಿಗಳ ನೆರವಿನಿಂದ ಮೆಡಿಕಲ್ ಓದುತ್ತಿದ್ದಾಳೆ. ಧಾರವಾಡದ ಆಶ್ರಮಕ್ಕೆ ಅವರು ಬಂದು ಇರಲಾರಂಭಿಸಿದಂದಿನಿಂದ ಕಲ್ಯಾಣಮ್ಮ ಬಹಳ ಜನರ ಆತ್ಮೀಯತೆ-ಅಭಿಮಾನ ಗೌರವ ಗಳಿಸಿಕೊಂಡಿದ್ದಾರೆ. ಅವರು ಹೇಳಿದರು, "ಈ ಶಿಶುವನ್ನು ನಾನೇ ಸಾಕಿ ಬೆಳೆಸುವೆ. ಈ ಮಗುವಿನ ತಾಯಿ ಇಲ್ಲಿಗೆ ಬರುವ ಪೂರ್ವದಲ್ಲಿ ನನಗೊಂದು ಕನಸಾಗಿತ್ತು. ಅದರಲ್ಲಿ ಒಂದು ಮುದ್ದಾದ ಗಂಡು ಮಗುವನ್ನು ಸಾಕುತ್ತಿದ್ದೆ. ಅತ್ಯಂತ ತೇಜಸ್ವಿಯಾದ ಬಾಲಕ ಬೆಳೆದು ದೊಡ್ಡವನಾದ. ವೇದಿಕೆಯ ಮೇಲೆ ಭವ್ಯ ನಿಲುವಿನ ವನಾಗಿ ಪ್ರವಚನ ಮಾಡುವುದು ಕಂಡಿತು. ನೀವು ಒಪ್ಪಿಗೆ ಕೊಟ್ಟರೆ ಇಲ್ಲೇ ಬೆಳೆಸುವೆ." ದಯವಿಲ್ಲದ ಧರ್ಮವದೇವುದಯ್ಯಾ? ಎಂಬ ಬಸವ ಗೀತೆ ನಂಬಿದವರು ನಾವು. ಪ್ರೀತಿ ಯಿಂದ ಸಾಕುವವರಿದ್ದರೆ ಎಷ್ಟು ಮಕ್ಕಳಾದರೂ ಬರಲಿ; ಸಮಾಜದ ಜನರಿಂದ ನೆರವು ಪಡೆದು ಸಾಕೋಣ ಎನ್ನುವ ಮನಸ್ಸು ನಮ್ಮದು.

ಸುಮಾರು 6 ತಿಂಗಳಾಗಿರುವ ಆ ನಿರ್ಮಲಾತ್ಮಕ ಶಿಶುವು ಈಗ ಅನಾಥನಲ್ಲ, ಸನಾಥ: ಮನೆಯಲ್ಲಿ ಬೆಳೆಯುವವರಿಗೆ ಒಬ್ಬ ತಾಯಿತಂದೆ, ಕೆಲವೇ ಅಣ್ಣತಮ್ಮಂದಿರು.

ಇಲ್ಲಿ ಇವನಿಗೆ, 'ಬಸವ ಕಿರಣ'ನಿಗೆ ಬಹುದೊಡ್ಡ ಕುಟುಂಬ, ಹಾರೈಕೆ, ಅಕ್ಕರೆ. ನಿಮ್ಮೆಲ್ಲರ ಹರಕೆ ಇರಲಿ. ಅವನು ಗುರು ಬಸವನ ಒಂದು ಕಿರಣವಾಗಲೆಂದೇ ನಮ್ಮ ಆಕಾಂಕ್ಷೆ.

ಬಸವ ಚಂದ್ರಿಕೆ

ಕೂಡಲ ಸಂಗಮದಲ್ಲಿ ಶರಣ ಮೇಳಕ್ಕೆ ಬಹಳ ಭರಾಟೆಯ ಸಿದ್ಧತೆ ನಡೆದಿತ್ತು. ಬಾಗಲಕೋಟೆಗೆ ಸಾಮಾನು ಖರೀದಿಗೆ ಹೋದ ಜಯಮ್ಮ ಸ್ಥಳೀಯ ಪತ್ರಿಕೆಯೊಂದನ್ನು ನೋಡಿ "ಇಂದು ಪೇಪರಿನಲ್ಲಿ ಒಂದು ಅನಾಥ ಮಗುವಿನ ಬಗ್ಗೆ ಬಂದಿದೆ. ಸರ್ಕಾರಿ ಆಸ್ಪತ್ರೆಯಲ್ಲಿದೆಯಂತೆ., ಸುದ್ದಿ ನೋಡಿ ಕುತೂಹಲದಿಂದ ಹೋಗಿ ನೋಡಿ ಬಂದೆ. ನಮ್ಮ ಆಶ್ರಮದಲ್ಲಿ ಸಾಕುತ್ತೇವೆ ಕೊಡುತ್ತೀರಾ? ಎಂದು ವೈದ್ಯಾಧಿಕಾರಿಗಳನ್ನು ಕೇಳಿದೆ." ಎಂದಳು. ನಮಗೆ ಸಂತೋಷವಾಯಿತು. ಏಕೆಂದರೆ ಧರ್ಮಪಂತಿಕೆಯು ಮಾನವೀಯತೆ, ದಯಾಗುಣ ಮುಂತಾದುವನ್ನು ಕಲಿಸಬೇಕಲ್ಲವೆ? ಅವು ನಮ್ಮ ಶಿಷ್ಯರಲ್ಲಿ ಬೆಳೆಯುತ್ತಿವೆ ಎಂದಾಗ ಸಂತೋಷವೆನಿಸುತ್ತೆ. ನಾವಾಗಿ, 'ಇಂಥ ಅನಾಥ ಮಕ್ಕಳನ್ನು ಬೆಳೆಸುವುದರಲ್ಲೇ ದೇವರಿಗೆ ಆನಂದವಾಗುತ್ತದೆ.' ಎಂದು ಬೋಧೆ ಮಾಡುವ ಮೊದಲೇ ತಾವೇ ಅಂತಹ ದೃಷ್ಟಿಕೋನ ಬೆಳೆಸಿಕೊಂಡರೆ ಅದು ಅಭಿನಂದನಾರ್ಹವಲ್ಲವೆ?

ಡಾ|| ಜಿ. ಆರ್. ತಮಗೊಂಡ, ಮುಖ್ಯ ವೈದ್ಯಾಧಿಕಾರಿಗಳು ಶರಣ ಮೇಳದಲ್ಲಿ ಭಾಗಿಗಳಾಗಿ ಲಿಂಗಾಯತ್ ಬಿಬ್ಲಿಯೋಗ್ರಫಿ ಎಂಬ ಗ್ರಂಥವನ್ನು ಬಿಡುಗಡೆ ಮಾಡಿದರು. ಬಂದಾಗ ನಾನು ಹೇಳಿದೆ, "ಆಶ್ರಮದವರು ಎಲ್ಲರೂ ಇಷ್ಟಪಡುತ್ತಿದ್ದಾರೆ. ಹಲವಾರು ಭಾಷೆಗಳನ್ನು ಕಲಿಸಿ ಒಳ್ಳೆಯ ಮಿಷನರಿಗಳನ್ನು ಮಾಡುತ್ತೇವೆ. ನಮ್ಮ ಸಂಸ್ಥೆಗೆ ಕೊಡಿಸಿರಿ."

ಶ್ರೀ ತಮಗೊಂಡರವರು 'ಮಗುವು ಪೋಲೀಸರ ಮುಖಾಂತರ ಬಂದಿರುವ ಕಾರಣ, ಅದು ಕೋರ್ಟ್ ಮೂಲಕವೇ ಕೊಡಲ್ಪಡಬೇಕು. ಕಾಯಿದೆಯನ್ನು ಗಮನಿಸಿ ಎಲ್ಲ ವಿಧಿವಿಧಾನಗಳನ್ನು ಪೂರೈಸಿ ಕೊಡಿಸುತ್ತೇವೆ.' ಎಂದರು.

ಬುಧವಾರ, ದಿ. 31-1-1990 ರಂದು 'ಬಸವ ಚಂದ್ರಿಕೆ' ಕೋರ್ಟಿನ ಮುಖಾಂತರ ಮಹಾಮನೆಯನ್ನು ಪ್ರವೇಶಿಸಿದ್ದಾಳೆ. ಶ್ರೀ ಸಂಗಮೇಶ್ವರ ದೇವಾಲಯ ಟ್ರಸ್ಟಿನ ಅಧ್ಯಕ್ಷ ಎಸ್. ಜಿ. ಪಾಟೀಲ ವಕೀಲರು ಅವಳ ಹೆಸರಿಗೆ 1000 ಇಂದಿರಾ ವಿಕಾಸ ಪತ್ರ ಕೊಟ್ಟು ಕಳಿಸಿದ್ದಾರೆ.

ಮನುಷ್ಯನ ಹುಟ್ಟು, ಅಂತಸ್ತು ಮುಖ್ಯವಲ್ಲ. ಅವನಿಗೆ ಸಿಗುವ ಸಂಸ್ಕಾರ ಮುಖ್ಯ. ಸಂಸ್ಕಾರ-ಸಾಧನೆಗಳಿಂದ ವ್ಯಕ್ತಿಯು ಮೇಲೆರಬಲ್ಲ ಎಂಬುದೇ ಬಸವ ತತ್ತ್ವದ ವೈಶಿಷ್ಟ್ಯ. ಅಂತಹ ಪ್ರಯೋಗವನ್ನು ಮಾಡೋಣವೆಂಬ ಅಪೇಕ್ಷೆ ನಮ್ಮದು ; ಫಲ ದೇವನ ಕೈಲಿದೆ, ಹರಕೆ-ಸಹಕಾರ ಮಾತ್ರ ನಿಮ್ಮದಾಗಿರಲಿ.

ಕೂಡಲ ಸಂಗಮದ ಬಸವ ಧರ್ಮ ಪೀಠದ

ದಾಸೋಹ ನಿಧಿಗೆ 1111 ರೂ ಸಲ್ಲಿಸಿದವರ ಯಾದಿ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಶರಣರುಗಳಾದ.

ಕ್ರ, ಸಂ.	ಹೆಸರು ಮತ್ತು ಊರು	
291.	ಹೇಮಲತಾ ನಾಗರಾಜ ಹಾರನಹಳ್ಳಿ,	ಕಾಟೇರಿ
292.	ಮೀನಾಕ್ಷಮ್ಮ ಬಿ. ಎಂ. ಮಹಾಲಿಂಗಪ್ಪ	,,
293.	ಎನ್. ಯೋಗಮ್ಮ ಮತ್ತು ಗಿರಿಜಮ್ಮ	,,
294.	ಲಕ್ಷ್ಮಿ ಜಿ. ರಾಜು,	ಸಕಲಟ್ಟಿ
295.	ನಾಗಮ್ಮ ರಾಜಬೆಟ್ಟಪ್ಪ,	,,
296.	ಕನ್ನಗಿ ಪ್ರಭುರಾಜ,	,,
297.	ಸುಂದರಮ್ಮ ಲಕ್ಷ್ಮಣ,	,,
298.	ಶಿವಮ್ಮ ನಂಜುಂಡನ್,	,,
299.	ದೇವಿ ಎಂ. ಲಿಂಗರಾಜು.	,,
300.	ಸೀತಮ್ಮ ಬಸವರಾಜು	,,
301.	ಶ್ರೀಮತಿ ಮತ್ತು ಶ್ರೀ ಪಿ. ರಾಮು.	ಬೆಂಗಳೂರು
302.	ರೇವಣಸಿದ್ಧಪ್ಪ ಸಿದ್ದಪ್ಪ ಹೊನ್ನಪ್ಪನವರು,	ಹುಬ್ಬಳ್ಳಿ
303.	ಸಂಗಪ್ಪ ಲಿಂಗಪ್ಪ ಎಮ್ಮಿ,	ಧಾರವಾಡ
304.	ಗೌರಮ್ಮ ಸೋಮಶೇಖರ ಪುಟಾಣಿ,	,,
305.	ತೋಟಪ್ಪ ದೇವೇಂದ್ರಪ್ಪ ಮುಮ್ಮಿಗಟ್ಟಿ,	,,
306.	ಶಂಕರಪ್ಪ ಚನ್ನಪ್ಪ ಗುಮ್ಮಗೋಳ,	,,
307.	ಅಣ್ಣಪ್ಪ ಕಾಶಪ್ಪ ಕಾಮೋಜಿ,	,,
308.	ಗುಪ್ತ ದಾನಿಗಳು	
309.	ಮುರುಗೇಂದ್ರಪ್ಪ ಶ್ರೀಶೈಲಪ್ಪ ತೇಲಸಂಗ	,,
310.	ಸಿದ್ಧಮ್ಮ ಶಿವಪುತ್ರಪ್ಪ ಸೌದಿ,	,,
311.	ಬಿ. ಎಸ್. ಉಳ್ಳೀಗೇರಿ	,,
312.	ಶಂಕರ್ ಸಿದ್ಧರಾಮಪ್ಪ ಕಮತೆ	,,
313.	ಬಸಪ್ಪ ಚನ್ನಬಸಪ್ಪ ಆಯೆಟ್ಟಿ,	,,
314.	ಲಕ್ಷ್ಮಣ ಈಶ್ವರಪ್ಪ ಆಕಳವಾಡಿ,	,,
315.	ಅಂದಾನಪ್ಪ ವಿರುಪಾಕ್ಷಪ್ಪ ಕನವಳ್ಳಿ,	,,

ಕ್ರ. ಸಂ. ಹೆಸರು ಮತ್ತು ಊರು

ಶರಣರುಗಳಾದ :

316. ಎಂ. ಬಿ. ಬೆಟಗೇರಿ, ಧಾರವಾಡ
317. ಸಾತವೀರಪ್ಪ ಮುಂಡಪ್ಪ ಅಂಗಡಿ, ,,
318. ಮಲ್ಲೇಶಪ್ಪ ವೀರಪ್ಪ ಕುಸುಗಲ್, ,,
319. ನಾಗಪ್ಪ ಚನ್ನಬಸಪ್ಪ ಹುಲ್ಮನಿ, ,,
320. ಪವಾಡಪ್ಪ ಕಾಶಪ್ಪ ಕಾವೋಜಿ, ,,
321. ಎನ್. ವೈ. ಚಿಕ್ಕನಗೌಡರು, ತಿಮ್ಮಾಪುರ
322. ಶೇಖರಗೌಡ ಬಸವನಗೌಡ ಪಾಟೀಲ, ಧಾರವಾಡ
323. ಶಿವಪುತ್ರಪ್ಪ ಗಂಗಪ್ಪ ಬನ್ನಿಗಿಡದ, ಹೆಬ್ಬಳ್ಳಿ
324. ಮಲ್ಲಪ್ಪ ಗಂಗಪ್ಪ ಯಮುಕನಮರಡಿ, ಧಾರವಾಡ
325. ಬಸವ್ವ ರುದ್ರಪ್ಪ ಹೆಗ್ಗಡೆ, ,,
326. ಪಾರ್ವತವ್ವ ಈಶ್ವರಪ್ಪ ಕೌದಿಶೆಟ್ಟರು, ದುಂಡಸಿ
327. ರುದ್ರಮ್ಮ ನಾಗರಾಜ ಕಲಿವಾಳ, ಧಾರವಾಡ
328. ಬಸವನಗೌಡ ಸಿದ್ಧಪ್ಪ ಕಟಕೋಳ, ,,
329. ವೀರನಗೌಡ ಚನ್ನಪ್ಪಗೌಡ ಜೀವನಗೌಡರು, ಧಾರವಾಡ
330. ಗುಪ್ತದಾನಿ
331. ದೇವಪ್ಪ ಬಸವಲಿಂಗಪ್ಪ ಮೇಟಿ, ಧಾರವಾಡ
332. ಅಶೋಕ ಸಿದ್ಧಪ್ಪ ನಾವಳ್ಳಿ, ,,
333. ಸಂಗನಗೌಡ ಗೌಡಪ್ಪಗೌಡ ಖಾನಗೌಡ, ಧಾರವಾಡ
334. ಗಂಗಾಧರ ಬಸಪ್ಪ ತಂಬ್ರಳ್ಳಿ ,,
335. ರುದ್ರಪ್ಪ ನಿಂಗಪ್ಪ ಸೋದರ ,,
336. ಬಸವಗೌಡ ಸಿದ್ಧನಗೌಡ ದೊಡ್ಡಗೌಡರು, ,,
337. ನಾಗಪ್ಪ ಗರಗದ ,,
338. ನಿಂಗಪ್ಪ ಭೀಮಪ್ಪ ವಗ್ಗರ, ತಿಮ್ಮಾಪುರ
339. ಬಸವಣ್ಣೆಯ್ಯ ಪೂಜಾರ್, ಕೆಲಗೇರಿ
340. ಅಣ್ಣಪ್ಪ ಬಸಪ್ಪ ಕುಂಬಾರ, ಧಾರವಾಡ
341. ಬಸಯ್ಯ ಸಿದ್ಧಲಿಂಗಯ್ಯ ಗಣಾಚಾರಿ, ಧಾರವಾಡ
342. ಓರ್ವ ತಾಯಿಂದಿರು
343. ಈಶ್ವರಯ್ಯ ಅಡಿವೆಯ್ಯ ಕಲ್ಲೂರು, ಧಾರವಾಡ
344. ಮೆ॥ ವ್ಹಿ. ಎಸ್. ಬೆಟಗೇರಿ, ,,
345. ಸಿದ್ಧಣ್ಣ ಕಲಾದಗಿ, ,,

ಕ್ರ. ಸಂ. ಹೆಸರು ಮತ್ತು ಊರು

ಶರಣರುಗಳಾದ :

346. ಗಂಗಾಧರ ಬಸಲಿಂಗಪ್ಪ ಕುರುಡೀಕೇರಿ, ಧಾರವಾಡ
347. ಎಸ್. ಹಾಲಪ್ಪ, ,,
348. ಶಿವಪ್ಪ ಹನುಮಂತಪ್ಪ ಬಿರಾದಾರ, ಧಾರವಾಡ
349. ಬಸವನಗೌಡ ರುದ್ರಗೌಡ ಕಂದಗಲ್, ,,
350. ಗುರುಸಿದ್ಧಪ್ಪ ವೀರಪ್ಪ ಸವದತ್ತಿ ,,
351. ಕಮಲಕ್ಕ ಸಾಲಿಮಠ, ,,
352. ಮಲ್ಲಿಕಾರ್ಜುನಸ್ವಾಮಿ ಗುರುಸ್ಥಲಮಠ, ಧಾರವಾಡ
353. ವ್ಹಿ. ಡಿ. ಮುಮ್ಮಿಗಟ್ಟಿ, ,,
354. ಶಂಕರ ಕರಡೀಗುಡ್ಡ, ಗರಗ
355. ಗುಪ್ತ ದಾನಿ
356. ಗಿರಿಜಾ ಪ್ರಕಾಶ ಚರಾಟೆ, ಬೈಲಹೊಂಗಲ
357. ಪಂಡಿತಪ್ಪ ಬಸವಂತಪ್ಪ ಮುಮ್ಮಿಗಟ್ಟಿ, ಧಾರವಾಡ
358. ಶಿವಕುಮಾರ್ ಎಸ್. ಹಿರೇಹಾಳು, ,,
359. ಫಕೀರಪ್ಪ ತಿರುಕಪ್ಪ ಭಾವೀಕಟ್ಟಿ, ,,
360. ಬಸವಣ್ಣೆಪ್ಪ ನಿಂಗಪ್ಪ ಕಡ್ಡುಗೋಳ, ,,
361. ಲಕ್ಷ್ಮೀದೇವಿ ಬಸವರಾಜ ಸದಾನಂದ ,,
362. ಮಲ್ಲಗೌಡ ಅಡಿವೆಪ್ಪಗೌಡ ಪಾಟೀಲ, ,,
363. ಕಾಶಪ್ಪ ರಾಜಶೇಖರ ತೋಟದ, ,,
364. ಎಲ್ಲಪ್ಪಗೌಡ ಬಸವನಗೌಡ ಪಾಟೀಲ, ,,
365. ಮಲ್ಲೇಶಿ ದೇವಪ್ಪ ಬಡಿಗೇರ ,,
366. ತೋಟೇಶ್ವರ ಗುಡದೂರು, ಧಾರವಾಡ
367. ಜಿ. ಬಿ. ಹೊಸಮಠ, ,,
368. ಮಹಾರುದ್ರಪ್ಪ ಚನ್ನಪ್ಪ ಕಿನ್ನಾಳ, ,,
369. ಚಂದ್ರಕಾಂತ ವೀರಯ್ಯ ಶಿವಳ್ಳಿ, ,,
370. ಟಿ. ಎಸ್. ಮಲ್ಲಪ್ಪ, ,,
371. ನಾಗರತ್ನ ಅಣ್ಣಪ್ಪ ಬಾಳಿ, ,,
372. ಶಂಕರವ್ವ ಶಂಕರಪ್ಪ ಕೂಡ್ಲಣ್ಣನವರ್, ,,
373. ಸಿದ್ಧರಾಮಪ್ಪ ಲಿಂಗಪ್ಪ ಎಮ್ಮಿ, ,,
374. ಬಾಬೂರಾವ ಅದೃಶ್ಯಪ್ಪ ಬಿರದೆ, ,,

ಕ್ರ. ಸಂ, ಹೆಸರು ಮತ್ತು ಊರು

ಶರಣರುಗಳಾದ ;

375. ಜಿ. ವಿ. ಕೋಳೀವಾಡ, ಧಾರವಾಡ
376. ಶಂಕರಪ್ಪ ಮಲ್ಲಪ್ಪ ಮೇಟಿ, ,,
377. ಗುರುಪಾದ ಮರಿಯಪ್ಪ ಬೆಟಗೇರಿ, ,,
378. ಮಂಗಳಾ ವಿ. ಬಿಜಾಪುರ
379. ಮುರಿಗೆಪ್ಪ ವೀರಭದ್ರಪ್ಪ ಅಮರಶೆಟ್ಟಿ, ಧಾರವಾಡ
380. ಮಹಾದೇವಪ್ಪ ಹನುಮಂತಪ್ಪ ಎಲಿಗಾರ, ,,
381. ಮಲ್ಲಗೌಡ ಭೀಮಗೌಡ ಪಾಟೀಲ, ,,
382. ಕರಿಯಮ್ಮ ತಿರುಕಪ್ಪ ಗೋಕಾವಿ, ತೇಗೂರು
383. ಸಿದ್ಧಪ್ಪ ಶಿವಪ್ಪ ಲಕ್ಕಣ್ಣನವರ್, ರಾಯಾಪುರ
384, ಜಿ. ಎಂ. ರಾಮಲಿಂಗಪ್ಪ, ಹೊಸಪೇಟೆ.

ಹಿಂದಿನ ಸಂಚಿಕೆಯಲ್ಲಿ ಮರೆತು ಬಿಟ್ಟದ್ದನ್ನು ಸೇರಿಸಲಾಗಿದೆ.

ಕ್ರಮ ಸಂಖ್ಯೆ ಹೆಸರು-ಊರು.

237. ಅಂದಾನ ಸ್ವಾಮಿಯವರು. ಹೊಸಪೇಟೆ.
268. ಯು. ನಾಗಪ್ಪ, ಬಳ್ಳಾರಿ.
269. ಎರಗುಂಟ ಮಲ್ಲೇಶಪ್ಪ-ನಿಂಬಗಲ್ ವೀರಣ್ಣ, ಹೊಸಪೇಟೆ.
270. ಹೇಮಾ ಕೃಷ್ಣನ್, ಮದ್ರಾಸ್ ನಗರ
272. ಬೆಲ್ಲದ ಚನ್ನಪ್ಪ, ಚಿತ್ತವಾಡಗಿ,

ಜನವರಿಯ ವಿಶೇಷ ಸಂಚಿಕೆ 'ಶರಣಸಾಗರ'ದಲ್ಲಿ ಪ್ರಕಟವಾದ ಯಾದಿಯ ಮುಂದುವರಿದ ಭಾಗವಿದು. ಅಕಸ್ಮಾತ್ ದಾನಿಗಳ ಹೆಸರು ಕೈಬಿಟ್ಟಿದ್ದರೆ ಮರೆಯದೆ ಪತ್ರ ಬರೆದು ತಿಳಿಸಬೇಕು.

ಈ ಎಲ್ಲ ದಾಸೋಹಿಗಳಿಗೂ ಮಂತ್ರಪುರುಷ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ಕರುಣಿಸಲೆಂದು ಹಾರೈಸುತ್ತೇವೆ.

—**ಮಾತಾಜಿ**, ಕಾರ್ಯಾಧ್ಯಕ್ಷೆ.

ಬಸವಂ ಪ್ರಣವಾಕಾರಂ
ಬಸವಂ ಶರಣಾಗತ ರಕ್ಷಕ ವರಲೋಲಂ ।
ಬಸವಂ ಜನ್ಮಕುಠಾರಂ
ಬಸವಂ ನಮಾಮಿ ಶ್ರೀ ಗುರು ಬಸವೇಶಂ ॥

—ಜಗದ್ಗುರು ಮಾತೆ ಮಹಾದೇವಿ

ಕೂಡಲ ಸಂಗಮದ ಮಹಾಮನೆಯ ಆವರಣದಲ್ಲಿರುವ ಬಸವ ಮಂಟಪದ ಪೂಜಾ ನಿಧಿಗೆ 501 ರೂ ಸಲ್ಲಿಸಿದವರು.

ಶರಣರುಗಳಾದ :

ಕ್ರ. ಸಂಖ್ಯೆ ಹೆಸರು ಮತ್ತು ಊರು

1. ಕೆ. ಎಂ. ಶಿವಶಂಕರ್, ಮೈಸೂರು.
2. ವೀರಭದ್ರಪ್ಪ, ರುದ್ರಪ್ಪ ಕಮಡೊಳ್ಳಿ, ಹುಬ್ಬಳ್ಳಿ.
3. ರಾಜಮ್ಮ ಚಂದ್ರಶೇಖರ, ಮೈಸೂರು.
4. ಜೆ. ಸಿ. ಬಸವರಾಜು, ಮೈಸೂರು.
5. ಜೆ. ಬಿ. ವನಜಾ, ಜೆ. ಸಿ. ಬಸವರಾಜು, ಮೈಸೂರು.
6. ಶ್ರೀಮತಿ ಮೀನಾಕ್ಷಿ, ಎಂ. ನಾಗರಾಜು, ಮೈಸೂರು,
7. ದೊಡ್ಡ ಮಾದಪ್ಪನವರು, ಮೈಸೂರು.
8. ಕೆ. ಬಸವಣ್ಣಾಚಾರ್, ಮೈಸೂರು,
9. ಶ್ರೀಮತಿ. ನೀಲಮ್ಮ. ಮೇಲೂರು, ತಮಿಳುನಾಡು.
10. ,, ಬಸವಮ್ಮ W/o ಆರ್. ಎಸ್. ಶಿವಯ್ಯ ದೇನಾಡ್, ಮೇಲಹಟ್ಟಿ (ತಮಿಳುನಾಡು)
11. ,, ಶಿವಕಾಮಿ W/o ಹೆಚ್. ಎಂ. ರಾಮನ್ ದೇನಾಡ್ ಪಂಚಾಯತ್, ತಮಿಳುನಾಡು.
12. ಡಿ .ಎನ್. ರಾಜಣ್ಣ, ದೇನಾಡ್, ಮೇಲ್‌ಹಟ್ಟಿ. ತಮಿಳುನಾಡು.
13. ಬಿ. ಎಂ. ರಾಮಯ್ಯ, ದೇನಾಡ್ ಮೇಲ್‌ಹಟ್ಟಿ. ತಮಿಳುನಾಡು.
14. ಶ್ರೀಮತಿ ನೀಲಮ್ಮ W/o ಎಂ. ಹೆಚ್. ಮುದ್ದಪ್ಪ ದೇನಾಡ್, ತಮಿಳುನಾಡು.
15. ಎಂ. ಎಸ್. ಗೋಪಾಲು, ದೇನಾಡ್, ತಮಿಳುನಾಡು.
16. ನೀಲಮ್ಮ W/o ಬಿ. ಎಂ. ಮುದ್ದಪ್ಪ ದೇನಾಡ್, ತಮಿಳುನಾಡು.
17. ರಾಜಮ್ಮ W/o ಎಂ. ಹೆಚ್. ಪರಮೇಶ್ವರಪ್ಪ ದೇನಾಡ್, ತಮಿಳುನಾಡು.
18. ಎಸ್. ನಾಗರಾಜು C/o ಎಸ್. ನಂಜೇಶೆಟ್ಟರು, ಚಾಮರಾಜನಗರ.
19. ಚಂದ್ರಶೇಖರ ಗುರುಸಿದ್ಧಪ್ಪ ತುರಮುರಿ, ಗುರ್ಲ ಹೊಸೂರು.
20. ಜೆ. ರಾಜೇಂದ್ರನ್ S/o ಜಯಪ್ಪ, ಚಿಕ್ಕಬಾಗಿಲು.
21. ಗುರಮ್ಮ W/o ಎಸ್. ಸಿ. ಸೂಗಣ್ಣ ಶೆಟ್ಟಿ ಗುಡಿಯಾತ್ತಮ್, ತಮಿಳುನಾಡು.

ಕ್ರ. ಸಂ.	ಹೆಸರು ಮತ್ತು ಊರು
	ಶರಣರುಗಳಾದ :
22.	ಎಸ್. ಸಿದ್ದಲಿಂಗಮ್ಮ W/o ಲೇಟ್ ಬಿ. ಎ. ಸಂಗಪ್ಪ, ಗುಡಿಯಾತ್ತಮ್, ತಮಿಳುನಾಡು.
23.	ಗುರುಸಿದ್ಧಪ್ಪ ಮುರಿಗೆಪ್ಪ ಬುರಲಿ, ಬೈಲಹೊಂಗಲ.
24.	ಅಂದಾನಪ್ಪ ಕುಂದರಗಿ, ಗಜೇಂದ್ರಗಡ.
25.	ಗುರುಮಲ್ಲಮ್ಮ W/o ದೊಡ್ಡಪುರದ ಮಹಾದೇವಪ್ಪ, ಚಿಕ್ಕಬಾಗಿಲು.
26.	ಪಾರ್ವತಮ್ಮ *W/o* ಪಟೇಲ ನಂಜಪ್ಪ, ಚಿಕ್ಕಬಾಗಿಲು,
27.	ಜಿ. ಆರ್. ಚನ್ನಬಸಪ್ಪ, ಹೊಸೂರು, ತಮಿಳುನಾಡು.
28.	ಎಸ್. ಎಸ್. ಕೆ. ಶಿವಪ್ಪ, ಪನ್‌ರೂಟಿ, ತಮಿಳುನಾಡು.
29.	ಶ್ರೀ ಬಸವೇಶ್ವರ, ಆಂಬೂರು, ತಮಿಳುನಾಡು.
30.	ಮಲ್ಲಪ್ಪ, ಜೂನಿಯರ್ ಇಂಜಿನಿಯರ್, ಸಿಂಧನೂರು.
31.	ವೈ. ಕೆ. ನಂಜುಂಡಪ್ಪ, ಬೆಂಗಳೂರು.
32.	ರಾಮಕ್ಕ ಮತ್ತು ಮಲ್ಲಮ್ಮ *W/o* ವಿ. ಕೊಂಡಪ್ಪನವರು. ಆನೇಕಲ್.
33.	ಮೇದಾರ ಲಿಂಗಪ್ಪ, ಮಾನ್ವಿ. (ರಾಯಚೂರು ಜಿಲ್ಲೆ)
34.	ಅಂಬಮ್ಮ ಹನುಮಂತಪ್ಪ, ಪೋತನಾಳ.
35.	ಹನುಮಂತಪ್ಪ ಮಹಾದೇವಪ್ಪ ಪತ್ತಾರ, ಜಮ್ಮಿನ ಕಟ್ಟೆ.
36.	ಚಿಕ್ಕಗೌಡರ ವೀರಣ್ಣ C/o ಸಾನಂದಪ್ಪನ. ಮಠ, ಮಟಮಾರಿ,
37.	ಲಿಂಗಪ್ಪ ರುದ್ರಪ್ಪ ಕಂಕಣ ಮೇಲಿ, ಬಾಗಲಕೋಟೆ.
38.	ಶಕುಂತಲಾ ಪುಟ್ಟಸಿದ್ಧಪ್ಪ, ಬೆಂಗಳೂರು.
39.	ಯಶವಂತಪ್ಪ ಬಿರಾದಾರ, ಹಟ್ಟಿ ಚಿನ್ನದ ಗಣಿ.
40.	ಮೆಸರ್ಸ್ ಎಸ್. ವಿ. ಗೌಡರ್, ಬಾಗಲಕೋಟ.
41.	ಸುಮಿತ್ರಾ ಸಂಗಪ್ಪ ಬಾಗೇವಾಡಿ, ಬಾಗಲಕೋಟ.
42.	ಗೋನಾಳ ಪಂಪಣ್ಣ, ಹೇರೂರು.
43.	ಸಾಹುಕಾರ ನರಸಯ್ಯ, ಮಟಮಾರಿ.
44.	ನಾಗರೆಡ್ಡಪ್ಪ ಕಂಪರೆಡ್ಡಿ, ತುರವಿಹಾಳ.
45.	ಗೌರಮ್ಮ ಲಿಂ॥ ಮಾದಪ್ಪ C/o ಗಂಗಾಂಬಿಕೆ ರೇವಣ ಸಿದ್ಧಪ್ಪ, ಬೆಂಗಳೂರು.
46.	ಚಂದ್ರಶೇಖರ್ ಎಂ. ಎ. ಎಲ್. ಎಲ್. ಬಿ ಆರುನ್‌ಗಡ.
47.	ಎನ್. ಚೆನ್ನಯ್ಯ, ಕಾಟೇರಿ ವಿಲೇಜ್, ತಮಿಳುನಾಡು.
48.	ಕೆ. ಕೃಷ್ಣಯ್ಯ, ,, ,,
49.	ಪಾರ್ವತಮ್ಮ ಶಿವಮಣಿ ಶಿವಪ್ಪ, ಸಕ್ಕಲಟ್ಟಿ ,, ,,

ಕ್ರಮ. ಸಂ.	ಹೆಸರು ಮತ್ತು ಊರು
	ಶರಣರುಗಳಾದ :
50.	ಚನ್ನಬಸಮ್ಮ ಲಿಂಗಪ್ಪ ಕಂಕಣ ಮೇಲಿ, ಬಾಗಿಲಕೋಟ.
51.	ಕುಮಾರಿ ಕವಿತಾ D/o ನಾಗೇಶ, ಬಂಗಾರ ಪೇಟೆ, (ಜಿ. ಕೋಲಾರ)
52.	ಸಿ. ಎಸ್. ಬಸವರಾಜಯ್ಯ, ಬಂಗಾರಪೇಟೆ.
53.	ಗಿರಿಜಾಂಬಾ *W/o* ಎಚ್. ಬಿ. ಬಸವರಾಜಪ್ಪ, ಬಂಗಾರಪೇಟೆ.
54.	ಭೀಮಪ್ಪ ಯಮುನಪ್ಪ ರೂಡಗಿ, ಮುದ್ದೇಬಿಹಾಳ.
55.	ಕೆ. ಎನ್. ಮುದ್ದಪ್ಪ, ಕಾರಹಳ್ಳಿ.
56.	ಶ್ರೀಮತಿ ಸರೋಜಮ್ಮ *W/o* ಶಂಭುಲಿಂಗಪ್ಪ, ಬಂಗಾರ ಪೇಟೆ.
57.	ಎಂ. ಎನ್. ಶಿವಕುಮಾರ ರಂಜನ, ಮಾಲೂರು.
58.	ಮರಿಬಸಪ್ಪ ಚೆನ್ನಪ್ಪ ದನದಮನಿ, ಧಾರವಾಡ.
59.	ಸಿ. ಮಂಜುನಾಥ, ಧಾರವಾಡ.
60.	ಸುಲೋಚನಾ ಮರಡಿ, ಧಾರವಾಡ.
61.	ಎಸ್. ಹಾಲಪ್ಪ, ಧಾರವಾಡ
62.	ಬಸವನಗೌಡ ರುದ್ರಗೌಡ ಕಂದಗಲ್ಲ, ಧಾರವಾಡ.
63.	ಶಂಕರ ಕರಡಿಗುಡ್ಡ, ಗರಗ.
64.	ಸುಬ್ಬಣ್ಣ ನಂಜಪ್ಪ, ಮೈಸೂರು. ಧಾರವಾಡ
65.	ಕರಿಸಿದ್ದಪ್ಪ ಕೆ. ಎ. ಡಬ್ಲ್ಯು. ಎಸ್. ಧಾರವಾಡ.
66.	ಸಿದ್ದಪ್ಪ ಶಿವಪ್ಪ ಲಕ್ಕಣ್ಣನವರ, ರಾಯಾಪೂರ.

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ಪೂಜಾನಿಧಿಗೆ ಬಸವಪ್ರಭು ರುದ್ರಪ್ಪ ದೊಡ್ಡಮನಿ, ಧಾರವಾಡ ಇವರು 501 ರೂ ಕೊಟ್ಟಿದ್ದಾರೆ.

ಈ ಎಲ್ಲ ದಾನಿಗಳಿಗೆ ಮಂತ್ರಪುರುಷ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪದ ನೀಡಲೆಂದು ಹಾರೈಸುತ್ತೇವೆ.

ಪೂಜೆಗೆ ನಿರ್ದಿಷ್ಟ ದಿನಾಂಕ ಕೊಟ್ಟಿರದವರು ಬೇಗನೆ ಕಳಿಸಿಕೊಡಬೇಕೆಂದು ಸೂಚಿಸುತ್ತೇವೆ.

—**ಮಾತಾಜಿ**, ಕಾರ್ಯಾಧ್ಯಕ್ಷೆ.

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಕೂಡಲ ಸಂಗಮದಲ್ಲಿ ನಿರ್ಮಾಣವಾಗುತ್ತಿರುವ ಬಸವ ಧರ್ಮ ಪೀಠ ಕಟ್ಟಡ ದಾಸೋಹಿಗಳ ವಿವರ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಕಟ್ಟಡ ನಿಧಿಗೆ : **ಸಿಂಗಲ್ ಕೋಣೆಗೆ**

ಶರಣರುಗಳಾದ :

1.	ಪುಷ್ಪ ಮತ್ತು ಎಲ್. ಗುರುಬಸವಪ್ಪ, ನೀಲಗಿರಿ.	ಒಂದು ಲಕ್ಷರೂ.
2.	ಶಾಂತಾ ಮತ್ತು ಚಂದ್ರಶೇಖರ್, ಸಕಲಟ್ಟಿ. ತ. ನಾಡು	15001-00
3.	ಲಕ್ಷ್ಮಿ ಮತ್ತು ಜೆ. ರಾಜು, ಸಕಲಟ್ಟಿ. ,,	15001-00
4.	ನಾಗಮ್ಮ ಮತ್ತು ರಾಜು ಬೆಟ್ಟಪ್ಪ, ಸಕಲಟ್ಟಿ ,,	15001-00
5.	ನೀಲಮ್ಮ ಮತ್ತು ಬಿ. ಎಂ. ಮುದ್ದಪ್ಪ, ದೇನಾಡು, ,,	15001-00
6.	ಕಲ್ಲಮ್ಮ ವಿರೂಪಾಕ್ಷಗೌಡ ಪಾಟೀಲ, ಧಾರವಾಡ.	15001-00
7.	ಶಿವಪ್ಪ ಸಿದ್ಧವೀರಪ್ಪ ಲಕ್ಕಣ್ಣನವರ್, ರಾಯಾಪುರ.	15001-00
8.	ಪಾರ್ವತಮ್ಮ ಮಲ್ಲಿಕಾರ್ಜುನಪ್ಪ ಪಟ್ಟಣಶೆಟ್ಟಿ, ಧಾರವಾಡ.	15001-00
9.	ರುದ್ರಪ್ಪ ಚನ್ನಬಸಪ್ಪ ದೊಡ್ಡಮನಿ, ಧಾರವಾಡ.	15001-00
10.	ಮಹಾಂತವ್ವ ಮತ್ತು ಗುರುಲಿಂಗಪ್ಪ ಕೋರಿ. ಧಾರವಾಡ.	15001-00
11.	ಇದೇ ದಾನಿಗಳು ಇನ್ನೊಂದು ಕೋಣೆಗೆ	15001-00
12.	ಶೇಖರಗೌಡ ಬಸವನಗೌಡ ಪಾಟೀಲ, ಧಾರವಾಡ.	15001-00
13.	ಸುಮಿತ್ರ ಚನ್ನಪ್ಪ ಕಟಗಿ. ಧಾರವಾಡ.	15001-00
14.	ಗಿರಿಜಮ್ಮ ಮತ್ತು ವೀರಸಂಗಪ್ಪ ಹೊಸಮನಿ, ಧಾರವಾಡ	15001-00
15.	ಸುಮಂಗಲಾ ಕುಪ್ಪಸದ C/oರಾ.ರು. ಕುಪ್ಪಸದ ಧಾರವಾಡ	15001-00

ಕಟ್ಟಡ ನಿಧಿಗೆ

1.	ಜಂಬಣ್ಣ ಗುಂಗಾಧರಪ್ಪ ರಾಜಮಲ್ಲಿಗಿ, ಹುಬ್ಬಳ್ಳಿ	1001-00
2.	ಶೋಭಾದೇವಿ ಮತ್ತು ಕಲ್ಯಾಣಪ್ಪ ಪರವಾದಿ, ಹುಬ್ಬಳ್ಳಿ.	1001-00
3.	ಮಲ್ಲೇಶಿ ದೇವಪ್ಪ ಬಡಿಗೇರ. ಧಾರವಾಡ.	1001-00
4.	ಬಸವರಾಜ ಪಾಟೀಲ, ಧಾರವಾಡ.	1001-00
5.	ಗಂಗವ್ವ ಮಹಾಲಿಂಗಪ್ಪ ಮಟ್ಟೀಕಲ್ಲಿ, ಧಾರವಾಡ.	505-00
6.	ಸುಬ್ಬಣ್ಣ ನಂಜಪ್ಪ ಮೈಸೂರು, ಧಾರವಾಡ.	501-00
7.	ಲೀಲಾವತಿ ಫಕೀರಪ್ಪ ಮದನಭಾವಿ, ಧಾರವಾಡ.	501-00
8.	ಪರಪ್ಪ ಫಕೀರಪ್ಪ ಮೂರುಸಿಳ್ಳಿನ, ಧಾರವಾಡ.	501-00
9.	ಬಸವರಾಜ. ಕಾಟೀರಿ, ತಮಿಳುನಾಡು.	1001-00
10.	ನಾಗಾರೆಡ್ಡಪ್ಪ, ತುರವೀಹಾಳ,	501-00

ಧರ್ಮಗ್ರಂಥ ನಿಧಿಗೆ 1001 ರೂ ಸಲ್ಲಿಸಿ ಧನ ಸಹಾಯ ಗೈದವರು

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಕ್ರ. ಸಂ:	ಶರಣರುಗಳಾದ :
257.	ಎಸ್. ಸತ್ಯನಾರಾಯಣಶೆಟ್ಟಿ, ತುಮಕೂರು.
258.	ಚನ್ನಬಸಮ್ಮ, ಟಿ. ತಿಪ್ಪೇಸ್ವಾಮಪ್ಪ, ತಿಪ್ಪಗೊಂಡನಹಳ್ಳಿ.
259.	ಸಾಂಬಶಿವಪ್ಪ ಶಿವಶಂಕರಪ್ಪ ಢಂಗ, ಸಂಕೇಶ್ವರ.
260.	ಸುಮಿತ್ರ ಮರಿಬಸಪ್ಪ ದನದಮನಿ, ಧಾರವಾಡ.
261.	ವಿಜಯ ಸಿದ್ಧರಾಮಪ್ಪ ಶಾಬಾದಿ, ,,
262.	ಶಂಕರಪ್ಪ ಚನ್ನಪ್ಪ ಗುಮ್ಮಗೋಳ ,,
263.	ಅಣ್ಣಪ್ಪ ಕಾಶಪ್ಪ ಕಾಮೋಜಿ, ,,
264.	ವಿಶ್ವನಾಥ ಗಂಗಣ್ಣನವರು, ,,
265.	ಷಡಕ್ಷರಯ್ಯ ಹಿರೇಮಠ, ,,
266.	ಗುಪ್ತ ಕಾಣಿಕೆ–(ಮುಕ್ತಾಯಕ್ಕ) ,,
267.	ರವೀಂದ್ರ ಮುರುಗೇಂದ್ರಪ್ಪ ತೇಲಸಂಗ, ,,
268.	ಸಿದ್ಧಮ್ಮ ಶಿವಪುತ್ರಪ್ಪ ಸೌದಿ, ,,
269.	ನಾಗಪ್ಪ ಚನ್ನಬಸಪ್ಪ ಹುಲ್ಮನಿ, ,,
270.	ಮಲ್ಲಮ್ಮ ಗಂಗಪ್ಪ ಯಮಕನಮರಡಿ, ,,
271.	ಅಕ್ಕಮಹಾದೇವಿ ವೀರನಗೌಡ ಜೀವನಗೌಡರ, ಧಾರವಾಡ
272.	ಗುಪ್ತ (ಗೌರಮ್ಮ) ,,
273.	ಎಸ್. ಹಾಲಪ್ಪ ,,
274.	ಶಿವಪ್ಪ ಹನುಮಂತಪ್ಪ ಬಿರಾದಾರ ,,
275.	ಶಂಕರ ಕರಡೀಗುಡ್ಡ, ,,
276.	ಬಸವರಾಜ ಶಿವಪ್ಪ ಹೆಬ್ಬಳ್ಳಿ ,,
277.	ಸಿದ್ಧಪ್ಪ ಶಿವಪ್ಪ ಲಕ್ಕಣ್ಣನವರು ರಾಯಾಪುರ,
278.	ಮಹಾರುದ್ರಪ್ಪ ಚನ್ನಪ್ಪ ಕಿನ್ನಾಳ, ,,
279.	ಗುರುಪಾದ ಮರಿಯಪ್ಪ ಬೆಟಗೇರಿ, ,,
280.	ಶಂಕರಗೌಡ ಮಲ್ಲನಗೌಡ ಪಾಟೀಲ, ,,

(ಮುಂದುವರಿಯುವುದು.)

ಮೂರ್ತಿಗಳಿಗೆ ದಾನಿಗಳು

ಈಗಾಗಲೇ ಕೆಲವು ಸಿದ್ಧವಾಗಿ ಮತ್ತೆ ಕೆಲವು ಪೂರ್ಣಗೊಳ್ಳುವ ಹಂತದಲ್ಲಿರುವ ಮೂರ್ತಿಗಳಿಗಾಗಿ ಈ ಕೆಳಗಿನ ಶರಣ ಬಂಧುಗಳು ದೇಣಿಗೆ ನೀಡಿದ್ದಾರೆ.

ಶರಣರುಗಳಾದ;

1. ರೇವಣಸಿದ್ಧಪ್ಪ ಸಿದ್ಧಪ್ಪ ಹೊನ್ನಪ್ಪನವರು, ಹುಬ್ಬಳ್ಳಿ 5001-00
2. ಸುಮಿತ್ರಾ ಮರಿಬಸಪ್ಪ ಚನ್ನಪ್ಪ ದನದಮನಿ, ಧಾರವಾಡ 5001-00
3. ಗಂಗಮ್ಮ ಮತ್ತು ಮಲ್ಲೇಶಪ್ಪ ಕತ್ತೀಶೆಟ್ಟಿ, ,, 5001-00
4. ಗಂಗಾಧರ. ಜಿ. ಚೆನ್ನಿ, ,, 5001-00
5. ಎಂ. ಬಿ. ಬಣಕಾರ, ಜಗದೀಶ ಮೆಡಿಕಲ್ ಸ್ಟೋರ್ 5001-00
6. ಬಿ. ಎಸ್. ಉಳ್ಳೀಗೇರಿ. 5001-00

ಬಸವೇಶ್ವರ ಬಯಲು ಪುತ್ಥಳಿಗಾಗಿ

63 ವರ್ಷಗಳ ಕಾಲ ಮರ್ತ್ಯಲೋಕದಲ್ಲಿದ್ದ (1106-1168) ವಿಶ್ವಗುರು ಬಸವಣ್ಣನವರ ಬೃಹತ್ ಸ್ಮಾರಕವಾಗಿ 63 ಅಡಿ ಎತ್ತರದ ಸಿಮೆಂಟಿನ ಬಯಲ ಪುತ್ತಳಿಯ ನಿರ್ಮಾಣಕ್ಕೆ ಅನೇಕ ದಾನಿಗಳು ಮುಂದೆ ಬರುತ್ತಲಿದ್ದು, ಅದನ್ನು ಸ್ವೀಕರಿಸಲಾಗುತ್ತಿದೆ.

ಕ್ರ. ಸಂ. ಹೆಸರು ಮತ್ತು ಊರು

ಶರಣರುಗಳಾದ :

1. ಶಾಂತಾ ಚಂದ್ರಶೇಖರ್, ಸಕಲಟ್ಟಿ, ತಮಿಳುನಾಡು 5001-00
2. ಪಾರ್ವತಮ್ಮ ಶಿವಮಣಿ ಶಿವಪ್ಪ, ,, 5001-00
3. ಶಿವಮ್ಮ ನಂಜುಂಡನ್, ,, 5001-00
4. ಗಂಗಾದೇವಿ. ಕೆ. ರಾಮನ್, ,, 5001-00
5. ರೇವತಿ ಶಿವಸುಬ್ರಹ್ಮಣ್ಯಂ ,, 5001-00
6. ದೇವಿಯಮ್. ಎನ್. ಜೋಗಿ ,, 5001-00
7. ಪಾರ್ವತಿ ಎಂ. ಬಸವರಾಜ ,, 5001-00
8. ರಾಷ್ಟ್ರೀಯ ಬಸವದಳ, ದೇನಾಡು ,, 5001-00

,, 5001-00

ವಿಶ್ವಕಲ್ಯಾಣ ಮಿಷನ್ ಸಂಸ್ಥೆಗೆ :

1. ಶರಣ. ಎಲ್. ನಂಜಯ್ಯ, ಸೊಗತೊರೆ. ತಮಿಳುನಾಡು 6001-00
2. ಗುಪ್ತಕಾಣಿಕೆ, 2501-00
3. ಎಲ್. ಎಲ್. ಪ್ರಭಾವತಿ, ದಾವಣಗೆರೆ 501-00

ಅಕ್ಷಯ ನಿಧಿ ಯೋಜನೆ.

ಕೆಲವು ಜನ ಶರಣ ಬಂಧುಗಳು ನಮ್ಮ ಎಲ್ಲ ಯೋಜನೆಗಳಿಗೆ ಧನ ಸಹಾಯ ಸಲ್ಲಿಸಿದ್ದು, ಸದಾ ಸಲ್ಲಿಸುವ ಮನೀಷೆ ಹೊಂದಿದ್ದಾರೆ. ಸರಳ ಜೀವನದ ವ್ರತ ಕೈಗೊಂಡು, "ಎನ್ನ ಆಯುಷ್ಯ-ಭವಿಷ್ಯ, ಸುಖ-ದುಃಖ ಬಸವಾದಿ ಪ್ರಮಥರು" ಎಂಬ ನಂಬುಗೆಯೊಡನೆ ತಮ್ಮ ತನು ಮನ ಧನಗಳನ್ನು ಬಸವ ಗುರುವಿನ ಅಡಿಗೆ ಎಡೆಮಾಡಿದ್ದಾರೆ. ತಮ್ಮ ಗಳಿಕೆಯಲ್ಲಿ ಉಳಿತಾಯವಾದ ಹಣವನ್ನೆಲ್ಲ ಬಸವ ಧರ್ಮ ಪೀಠಕ್ಕೆ ಆಗಾಗ ಸಲ್ಲಿಸುವುದಾಗಿಯೂ ಇದಕ್ಕಾಗಿ ತಮ್ಮದೊಂದು ನಿರಂತರ ಖಾತೆಯನ್ನು ತೆರೆಯಬೇಕೆಂದು ಕೋರಿಕೆ ಸಲ್ಲಿಸಿದ ಪ್ರಕಾರ ಅಕ್ಷಯ ನಿಧಿ ಯೋಜನೆಯನ್ನು ಪ್ರಾರಂಭಿಸಿದ್ದೇವೆ. ಈ ನಿಧಿಗೆ ಸ್ವಯಂ ಇಚ್ಛೆಯಿಂದ ಕಳಿಸಿದ ಹಣವನ್ನು ಅಗತ್ಯ ಬಿದ್ದ ಕೆಲಸ ಕಾರ್ಯಗಳಿಗೆ ಬಳಸಿಕೊಳ್ಳಲಾಗುವುದು.

ಶರಣರುಗಳಾದ.

1. ಶೋಭಾದೇವಿ ಮತ್ತು ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ.
   ನವಂಬರ್ 1989 ರಲ್ಲಿ 2000 ರೂ, 1990 ಮಾರ್ಚ್‌ನಲ್ಲಿ 1000 ರೂ.
2. ಈರಸಂಗಪ್ಪ ಶಾಂತಪ್ಪ ಹೊಸಮನಿ. ಬಾಗಲಕೋಟೆ.
   ಇವರು ಪ್ರತಿ ತಿಂಗಳು 500 ರೂ. ಕೊಡುತ್ತಲಿದ್ದಾರೆ.
3. ಟಿ. ಎಂ. ಪ್ರಕಾಶ್, ವಾಸ್ಕೊ, ಗೋವಾ.
   ಇವರು ಪ್ರತಿ ತಿಂಗಳೂ 100 ರೂ. ಕಳಿಸುತ್ತಲಿದ್ದಾರೆ.
4. ಅಕ್ಕಮಹಾದೇವಿ ವೀರನಗೌಡ ಜೀವನಗೌಡರ್, ಧಾರವಾಡ.
   ಇವರು ಪ್ರತಿ ತಿಂಗಳು 100 ರೂ. ಕೊಡುತ್ತಲಿದ್ದಾರೆ.
5. ಹನುಮಂತ ಸಿಂಗ್ ಬಾಬುಸಿಂಗ್ ಸುಬೇದಾರ, ಧಾರವಾಡ.
   ಇವರು ಪ್ರತಿ ತಿಂಗಳು 50 ರೂ. ಕೊಡುತ್ತಲಿದ್ದಾರೆ.
6. ಎಲ್ಲೂಬಾಯಿ ದೊಡ್ಡಪ್ಪ ಕೊಂಬಳಿ, ನಿವೃತ್ತ ಟೀಚರ್, ಧಾರವಾಡ.
   ಇವರು ಪ್ರತಿ ತಿಂಗಳು 100 ರೂ ಕೊಡುತ್ತಲಿದ್ದಾರೆ.
7. ಗಿರಿಮಲ್ಲಪ್ಪ ಬಸವಣ್ಣೆಪ್ಪ ಸಪ್ಪೂರಿ, ಧಾರವಾಡ.
   ಇವರು ಪ್ರತಿ ತಿಂಗಳು 50 ರೂ. ಕೊಡುತ್ತಲಿದ್ದಾರೆ.
8. ರೇವಣಸಿದ್ಧಪ್ಪ ಹೊನ್ನಪ್ಪನವರು, ಹುಬ್ಬಳ್ಳಿ.
   ಇವರು ಪ್ರತಿ ತಿಂಗಳು 50 ರೂ. ಕೊಡುತ್ತಲಿದ್ದಾರೆ.

ಬಸವ ಚಂದ್ರಿಕೆಗೆ ಕೊಡುಗೆ.

ಬಸವ ಚಂದ್ರಿಕೆ ಶಿಶುವನ್ನು ಬಾಗಿಲುಕೋಟೆಯ ಸಿವಿಲ್ ಆಸ್ಪತ್ರೆಯಿಂದ ಕೋರ್ಟಿನ ಮೂಲಕ ಬಸವ ಧರ್ಮಪೀಠಕ್ಕೆ ಹಸ್ತಾಂತರಿಸುವಾಗ ಶರಣ ಎಸ್. ಜಿ.

ಪಾಟೀಲ ವಕೀಲರು ಅಧ್ಯಕ್ಷರು, ಶ್ರೀ ಕೂಡಲ ಸಂಗಮೇಶ್ವರ ದೇವಾಲಯ ಟ್ರಸ್ಟ್ ಅವರು 500 ರೂ, ಗಳ ಇಂದಿರಾ ವಿಕಾಸ ಪತ್ರಗಳನ್ನು ತಮ್ಮ ವೈಯುಕ್ತಿಕ ದೇಣಿಗೆ ಯನ್ನಾಗಿ ಪಾಪುವಿಗೆ ನೀಡಿದ್ದಾರೆ.

ವಿವರಗಳನ್ನು ತಿಳಿಸಿರಿ

ಪ್ರತಿ ತಿಂಗಳ ಮೊದಲವಾರದಲ್ಲಿ ಕೂಡಲ ಸಂಗಮದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಎಸ್. ಬಿ. ಖಾತೆ 500/3 ಕ್ಕೆ 1000 ರೂಗಳು ಜಮಾ ಆಗುತ್ತಿವೆ. ದಾನಿಗಳು ಯಾರು ಎಂಬುದು ತಿಳಿಯುತ್ತಲಿಲ್ಲ. ಖಾತೆಗೆ ಎಂ. ಟಿ. ಮಾಡಿದವರು ನಮಗೆ ಒಂದು ಕಾರ್ಡ್ ಬರೆದಾದರು ತಿಳಿಸಬೇಕು.

ಒಂದು ವೇಳೆ ಗುಪ್ತದಾನಿಗಳಾಗಿ ಉಳಿಯಬಯಸಿದವರಾಗಿದ್ದರೆ, ನಮಗೆ ತಿಳಿಸಿದರೆ ಸಾಕು. ನಾವು ಅವರ ಹೆಸರನ್ನು ಬಹಿರಂಗ ಪಡಿಸುವುದಿಲ್ಲ.

ಈ ಎಲ್ಲರಿಗೂ ಶುಭವನ್ನು ಹಾರೈಸುತ್ತೇವೆ.

—ಮಾತಾಜಿ, ಕಾರ್ಯಾಧ್ಯಕ್ಷೆ

3 ನೆಯ ಶರಣ ಮೇಳಕ್ಕೆ ಧನ ಸಹಾಯ ಸಲ್ಲಿಸಿದವರ ಮುಂದುವರಿದ ಯಾದಿ.

ಶರಣರುಗಳಾದ.

1.	ಹೆಚ್. ಸಿದ್ಧಮ್ಮ ಹನುಮಂತಪ್ಪ, ಮಲ್ಲೇನಹಳ್ಳಿ	500-00
2.	ಸಿ. ವಿ. ಮಲ್ಲಿಕಾರ್ಜುನ - ಜಯದೇವ, ಚಿಕ್ಕಮಗಳೂರು	251-00
3.	ಎಂ. ಪ್ರೇಮ ಮಲ್ಲಣ್ಣ, ಚಿಕ್ಕಮಗಳೂರು	222-00
4.	ಡಾ|| ಎಸ್. ಬಿ. ಹೆಂಡಿ, ಡಿ. ಹೆಚ್. ಓ.	201-00
5.	ಎಂ. ವಿ. ನಾಗರಾಜಶೆಟ್ಟಿ, ಬೀರೂರು	201-00
6.	ಚಂದ್ರಮೌಳಿ ಬಿಸಲೇಹಳ್ಳಿ	201-00
7.	ಸೊಪ್ಪಿನ್ ಸ್ನೇಹಕೂಟ, ಚಿಕ್ಕಮಗಳೂರು	200-00
8.	ಎಲ್. ಎನ್. ಸಿದ್ದಪ್ಪ ಮತ್ತು ಮಕ್ಕಳು, ಲಿಂಗದಹಳ್ಳಿ	200-00
9.	ಸಿ. ಮಲ್ಲಮ್ಮ ಚನ್ನಪ್ಪ, ಚಿಕ್ಕಮಗಳೂರು.	571-00
10.	ಚಾಮುಂಡಿ ಕ್ಯೂರಿಂಗ್ ವರ್ಕ್ಸ್, ಚಿಕ್ಕಮಗಳೂರು	201-00
11.	ಪಿ. ಮಲ್ಲಪ್ಪ, ಚಿಕ್ಕಮಗಳೂರು	835-00
12.	ರುದ್ರಸ್ವಾಮಿ, ಮೈಸೂರು.	1300-00
13.	ರಾಷ್ಟ್ರೀಯ ಬಸವ ದಳ, ಲಾಡಗೇರಿ	225-00

ಶರಣ ಬಂಧುಗಳೇ, 201 ರೂ ಮೇಲೆ ಕೊಟ್ಟವರಿಗೆಲ್ಲ "ಶರಣ ಸಾಗರ" ವಿಶೇಷ ಸಂಚಿಕೆ ಕೊಡುವ ಹಂಬಲವಿದ್ದಿತು. ಹೆಚ್ಚಿನ ಪ್ರತಿಗಳನ್ನು ಮುದ್ರಿಸಿದ್ದರೂ ಸಂಚಿಕೆಯ ಸೌಂದರ್ಯ ಮತ್ತು ಸಮಗ್ರತೆಯಿಂದಾಗಿ ಎಲ್ಲ ಪ್ರತಿಗಳೂ ಮುಗಿದು ಹೋಗಿವೆ. ಆದ್ದರಿಂದ ಹೆಸರು ಮುದ್ರಣಗೊಂಡ ದಾನಿಗಳಿಗೆ ಪ್ರಸ್ತುತ ಸಂಚಿಕೆ ಮಾತ್ರ ಕೊಡಲು ಸಾಧ್ಯವಾಗುತ್ತಿದೆ.

ಶರಣ ಮೇಳಕ್ಕೆ ನೆರವು ನೀಡಿದ ಎಲ್ಲರಿಗೂ ಶುಭಹಾರೈಕೆಗಳು.

—ಮಾತಾಜಿ

* ಬಸವನ ಮೂರ್ತಿಯೆ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೇ ಜ್ಞಾನಕ್ಕೆ ಮೂಲ
ಬಸವ ಬಸವಾ ಎಂಬುದೇ ಭಕ್ತಿ ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನ.

—ಶಿವಯೋಗಿ ಸಿದ್ಧರಾಮೇಶ್ವರ

ದಾನಿಗಳಿಗೆ ಸೂಚನೆ

ಬಸವ ಧರ್ಮಪೀಠ, ವಿಶ್ವಕಲ್ಯಾಣ ಮಿಷನ್‌ಗಳ ವಿವಿಧ ಯೋಜನೆಗಳಿಗೆ 501 ರೂಗಳಿಗಿಂತ ಮೇಲಿನ ಹಣ ಕೊಟ್ಟದಾನಿಗಳಲ್ಲಿ ಕೆಲವರು ಕಲ್ಯಾಣ ಕಿರಣ ಮಾಸ ಪತ್ರಿಕೆಗೆ 300 ರೂ ಆಜೀವ ಸದಸ್ಯತ್ವ 30 ರೂ ವಾರ್ಷಿಕ ಚಂದಾ ತುಂಬಿ ಓದುಗರಾಗಿರುತ್ತಾರೆ. ಇನ್ನು ಕೆಲವರು ಆಗಿರಲಿಕ್ಕಿಲ್ಲ. ನಮ್ಮ ಸಂಸ್ಥೆಗಳು ಕೈಗೊಂಡ ಯೋಜನೆ, ಸಾಧಿಸುವ ಪ್ರಗತಿ ಬಗ್ಗೆ ದಾನಿಗಳಿಗೆ ತಿಳಿದಿರಬೇಕೆಂದು ನಾವು ಉಚಿತ ಪ್ರತಿಯನ್ನು ಕಳಿಸುತ್ತಲಿರುತ್ತೇವೆ. ಸಾಮಾನ್ಯವಾಗಿ ಉಚಿತ ಪ್ರತಿ ಸ್ವೀಕರಿಸುವ ದಾನಿಗಳು ನಂತರ ಸದಸ್ಯರಾಗುತ್ತಾರೆ.

1. ಆದ್ದರಿಂದ 501 ರೂಗಳ ಮೇಲೆ ದೇಣಿಗೆ ಕೊಟ್ಟಿದ್ದು ಪ್ರತ್ಯೇಕವಾಗಿ ಸದಸ್ಯರಾಗಿರದವರಿಗೆ, ಏನಾದರೂ ಕಾರಣದಿಂದ ಕಲ್ಯಾಣ ಕಿರಣ ಬರದೆ ಇದ್ದರೆ ಅವರು ತಕ್ಷಣ ನಮ್ಮ ಗಮನಕ್ಕೆ ತರಬೇಕು. ತಾವು ದೇಣಿಗೆ ಸಲ್ಲಿಸಿದ ಊರು ದಿನಾಂಕ ನಮಗೆ ತಿಳಿಸಬೇಕು.
2. ಕಲ್ಯಾಣ ಕಿರಣದ ಯಾದಿ, ದೇಣಿಗೆ ನೀಡುವವರ ಯಾದಿ ಬೆಳೆಯುತ್ತಲಿರುವುದರಿಂದ ಕೆಲವೊಮ್ಮೆ ಆಜೀವ ಸದಸ್ಯರಾದ ದಾನಿಗಳಿಗೂ ಉಚಿತ ಪ್ರತಿ ಹೋಗುತ್ತಿರಬಹುದು ಅಥವಾ ಡಬ್ಬಲ್ ಎಂಟ್ರಿ ಆಗಿ ಎರಡು ಪ್ರತಿ ಬರುತ್ತಿರಬಹುದು. ಹಿಂದೊಮ್ಮೆ ದೇಣಿಗೆ ನೀಡಿರುವುದರಿಂದ, ಆಗಲೊಮ್ಮೆ ಪುನಃ ದೇಣಿಗೆ ನೀಡಿದಾಗ ಮತ್ತೊಮ್ಮೆ ಎಂಟ್ರಿಯಾಗಿಯೂ ಎರಡು ಪ್ರತಿ ಬರಬಹುದು.

ಇಂಥ ಸನ್ನಿವೇಶದಲ್ಲಿ ಉದಾಸೀನ ಮಾಡದೆ ಕ್ರಮ ಸಂಖ್ಯೆ ನಮೂದಿಸಿ ತಿಳಿಸಿದರೆ ಒಂದು ಪ್ರತಿಯನ್ನು ಮಾತ್ರ ಕಳಿಸಲಾಗುವುದು. ಹೃತ್ಪೂರ್ವಕವಾಗಿ ಸಹಕರಿಸುವಿರಾಗಿ ನಂಬುತ್ತೇವೆ.

ಕಲ್ಯಾಣ ಕಿರಣ ಮಾಸ ಪತ್ರಿಕೆಯನ್ನು ತಪ್ಪದೆ ಓದುವಿರಾಗಿ ನಂಬುತ್ತೇವೆ.

—ಸೋದರಿ ಕಸ್ತೂರಿ

★ ಧಾರ್ಮಿಕ ಪತ್ರಿಕೆಗಳಲ್ಲಿಯೇ ಹೆಚ್ಚಿನ ಸಂಖ್ಯೆಯ ಪ್ರಸಾರ ಪಡೆದಿರುವ ಕಲ್ಯಾಣ ಕಿರಣ ಮಾಸ ಪತ್ರಿಕೆಗೆ ಸದಸ್ಯರಾಗಿರಿ, ಇನ್ನಿತರರನ್ನು ಸದಸ್ಯರಾಗಲು ಪ್ರೇರೇಪಿಸಿ.

★ ಶೀಘ್ರ ಗತಿಯ ಪತ್ರ ವ್ಯವಹಾರಕ್ಕೆ ಕೆಳಕಂಡ ವಿಳಾಸಕ್ಕೆ ಪತ್ರ ಬರೆಯಿರಿ.

ಕಲ್ಯಾಣ ಕಿರಣ ಕಾರ್ಯಾಲಯ, ಬಸವ ಗಂಗೋತ್ರಿ
ಕುಂಬಳಗೋಡು – 560074, ಬೆಂಗಳೂರು ದಕ್ಷಿಣ ತಾಲ್ಲೋಕು

ಧಾರವಾಡ ನಗರದಲ್ಲಿ ವಿಶ್ವಧರ್ಮ ಪ್ರವಚನ

—ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ.

ಅಡಿಯ ಇಟ್ಟು ನಡೆದಲ್ಲೆಲ್ಲ, ದೀಪ ಹಚ್ಚಿ ಬರುವಿರಿ.
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆವಿರಿ. ॥

ದಿನನಿತ್ಯವೂ ಶರಣ ಸೌರಭ ಕೆಸಟ್ಟನ್ನು ಕೇಳುವಾಗ ಪೂಜ್ಯ ಮಾತಾಜಿ ಬರೆದ ಈ ವಾಕ್ಯಗಳ ಅರ್ಥ ಹೆಚ್ಚು ಹೆಚ್ಚು ಆಗುವುದು. ಪೂಜ್ಯಸದ್ಗುರು ಲಿಂಗಾನಂದ ಸ್ವಾಮೀಜಿಯವರ ಪ್ರವಚನದ ಪರಿಣಾಮವನ್ನು ಇಷ್ಟು ಸೂಕ್ತವಾಗಿ ಯಾರೂ ಬಣ್ಣಿಸಲಿಕ್ಕಿಲ್ಲ. ಪೂಜ್ಯರ ಪ್ರವಚನ ಆರಂಭವಾಗುತ್ತದೆ, ನಡೆಯುತ್ತಿದೆ ಎಂಬುವ ಸುದ್ದಿ ಮುಟ್ಟುತ್ತಲೇ ಮುಮುಕ್ಷುಗಳ ಹೃದಯದಲ್ಲಿ ಅಪಾರ ಆನಂದ. ವರ್ಷಗಟ್ಟಳೆ ಕಾಯುತ್ತ ಕುಳಿತವರಿಗೆ ಅಮೃತದ ಸಾಗರವೇ ಹರಿದು ಬಂದಂತೆ. ಪೂಜ್ಯರ ಜನಪ್ರಿಯತೆ ಕಂಡು ಮತ್ಸರಿಸುವವರ ಸಂಖ್ಯೆ ಹಿರಿದಾದಂತೆ ಗೌರವಿಸುವ ಆರಾಧಕರ ಸಂಖ್ಯೆ ಇಮ್ಮಡಿಸಿ. ಮುಮ್ಮಡಿಸಿ ಬೆಳೆಯುತ್ತಿದೆ.

"ಅವರು ಏನೋ ಮೋಡಿ ಮಾಡುತ್ತಾರೆ." ಎಂದು ಹೊಟ್ಟೆ ಉರಿದುಕೊಳ್ಳುವ ವಾಗ್ಮಿಗಳ ಸಂಕಟದ ಮಾತಿನಲ್ಲೇ ಪೂಜ್ಯರ ಪ್ರತಿಭೆಯ ಬಗ್ಗೆ ಮೆಚ್ಚುಗೆ ಪುಟಿಯುತ್ತದೆ. ಮತ್ಸರವೂ ಮೆಚ್ಚುಗೆಯ ಇನ್ನೊಂದು ಮುಖವಲ್ಲವೆ? ಪೂಜ್ಯರು ಯಾವ ಮೋಡಿಯನ್ನೂ ಮಾಡರು- ಆಕರ್ಷಣೆ ಇರುವುದು ಕಂಚಿನ ಕಂಠದಲ್ಲಿ, ನಿರ್ಭೀತ ವಿಚಾರ ಧಾರೆಯಲ್ಲಿ. ಸಮಾಜವನ್ನು ಮೇಲೆತ್ತ ಬೇಕೆಂಬ ಕಳಕಳಿಯಲ್ಲಿ ಹೃದಯಾಂತರಾಳದಿಂದ ಹೊರಹೊಮ್ಮುವ ನುಡಿಗಳು ಜನಮನವನ್ನು ಮೀಟದೇ ಇದ್ದಾವೆಯೆ?

ಬುದ್ಧಿ ಜೀವಿಗಳ ಕೇಂದ್ರವಾದ ಧಾರವಾಡ ನಗರದ ಇತಿಹಾಸ ಪ್ರಸಿದ್ಧ ಕಡಪಾ ಮೈದಾನದಲ್ಲಿ ಪೂಜ್ಯ ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳ ಪ್ರವಚನ 29-1-90 ರಂದು ಆರಂಭ. ದಿನದಿನಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸಿತು. ಮಧ್ಯೆ ಮಧ್ಯೆ ಸಾಮೂಹಿಕ ಪ್ರಾರ್ಥನೆ, ಬಸವೇಶ್ವರ ಪೂಜಾವ್ರತ, ಸಾಮೂಹಿಕ ಇಷ್ಟಲಿಂಗ ಪೂಜೆ ನೆರವೇರಿದವು. ಚಿಕ್ಕಮಕ್ಕಳಿಂದ ಹಿಡಿದು ಮುಪ್ಪಿನ ಮುದುಕರವರೆಗೆ ಸಂಜೆಯಾಗುತ್ತಲೇ ಕಲಾಭವನದತ್ತ ಕಾಲು ಸಾಗುವಂತಹ ವಾತಾವರಣ. ತಾತ್ತ್ವಿಕ, ತಾರ್ಕಿಕ, ವೈಜ್ಞಾನಿಕವಾಗಿ ವಿಷಯಗಳನ್ನು ಪ್ರತಿಪಾದಿಸುವ ಪೂಜ್ಯ ಗುರುಗಳ ಪ್ರವಚನ ಬುದ್ಧಿಭಾವಗಳಿಗೆ ರಸದೌತಣ.

ಸುವರ್ಣಕ್ಕೆ ಸುವಾಸನೆ ಬಂದಂತೆ, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಆಗಮನವಾಯಿತು, ದಿ. 13-3-90 ರಂದು. ಪೂಜ್ಯ ಮಾತಾಜಿಯವರ 45 ನೆಯ ವರ್ಧಂತಿಯನ್ನು ಆಚರಿಸುವ ಸದವಕಾಶವೂ ನಮ್ಮದಾಯಿತು. ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ದಿ. 13 ರಂದು ಬೆಳಿಗ್ಗೆ ನಡೆದ ಪೂಜಾ ಕಾರ್ಯಕ್ರಮಕ್ಕೆ

ಸಂಜೆ ಸಾರ್ವಜನಿಕವಾಗಿ ನಡೆದ ಅಭಿನಂದನಾ ಸಮಾರಂಭಕ್ಕೆ ಜನರು ಕಿಕ್ಕಿರಿದು ಸೇರಿದುದು, ಸುತ್ತಲಿನ ಮತ್ತು ಹಲವಾರು ಜಿಲ್ಲೆಗಳಿಂದ ಬಂದುದು ಪೂಜ್ಯರ ಜನಪ್ರಿಯತೆಗೆ ಜೀವಂತ ಸಾಕ್ಷಿಯಾಗಿತ್ತು. ವರ್ಧಂತಿಯ ನಿಮಿತ್ತ ಹಂಚಿದ ಬೂಂದಿಯ ಪ್ರಸಾದ ನಾಲಿಗೆಯನ್ನು ತಣಿಸಿದರೆ ಪೂಜ್ಯ ಮಾತಾಜಿಯವರು ನೀಡಿದ ವಾಙ್ಮಯ ಪ್ರಸಾದ ಹೃನ್ಮನಗಳನ್ನು ತಣಿಸಿತು.

ಯುಗಾದಿಯ ನಿಮಿತ್ತ ಅಲ್ಲಮಪ್ರಭು ದೇವರ ಜಯಂತಿ 27-3-90 ರಂದು ಆಚರಿಸಲ್ಪಟ್ಟಿತು. ಭಾನುವಾರ ದಿನಾಂಕ 25-3-90 ರಂದು ಕಲಾಭವನದಲ್ಲಿ ಸಾಮೂಹಿಕ ಇಷ್ಟಲಿಂಗಪೂಜೆ ತೋರಿಸಲ್ಪಟ್ಟಿತು. ಮಧ್ಯದಲ್ಲಿ ಒಂದು ದಿವಸ ಪ್ರವಾಸ ಕಾರ್ಯಕ್ರಮವೂ ಏರ್ಪಾಡಾಯಿತು. ದಿನ ನಿತ್ಯ ಧಾರವಾಡದಿಂದ ಕೂಡಲ ಸಂಗಮಕ್ಕೆ ಸಾರಿಗೆ ಸಂಸ್ಥೆಯ ಬಸ್ಸು ಇದ್ದು, ಅದರಲ್ಲಿ ಜನರನ್ನು ಕರೆದೊಯ್ಯುವ ಯೋಜನೆಯನ್ನು ಹಾಕಲಾಯಿತು. ನಾ ಮುಂದು ತಾ ಮುಂದು ಎಂದು ಹೊರಟ ಜನರಿಗಾಗಿ ನಾಲ್ಕು ಬಸ್ಸುಗಳನ್ನೇ ಏರ್ಪಡಿಸಬೇಕಾಯಿತು.

ಅವ್ಯಾಹತವಾಗಿ 63 ದಿವಸಗಳ ಕಾಲ ನಡೆದ ಪ್ರವಚನವು ಸೋಮವಾರ 2-4-90 ರಂದು ಮಂಗಲವಾಯಿತು. ದಿ. 13-3-90 ರಿಂದ ಪೂಜ್ಯ ಮಾತಾಜಿ ಪ್ರವಚನ ಮಾಡಿದರು. ಸಹಸ್ರಾರು ಜನ ಪ್ರವಚನ ಕೇಳಿ, ನೂರಾರು ಜನ ದೀಕ್ಷೆ ಪಡೆದು ಧನ್ಯರಾದರು. ಆಧ್ಯಾತ್ಮಿಕ ಹಬ್ಬವನ್ನು ಆಚರಿಸುವ ಸಂಭ್ರಮ 63 ದಿವಸಗಳ ಕಾಲ ನಮಗೆಲ್ಲ ಒದಗಿತ್ತು. ಹರಿಯುವ ಗಂಗೆಯಂತೆ ಪೂಜ್ಯರು ಮುಂದೆ ಕರ್ತವ್ಯಪರರಾಗಿ ಧಾವಿಸಿದ್ದರೂ ಅವರು ಬೀರಿರುವ ಪ್ರಭಾವ ಮಾತ್ರ ಅಚ್ಚಳಿಯದೆ ಉಳಿದಿರುವಂಥಾದ್ದು. ಇದಕ್ಕೆ ಪೋಷಕವಾಗಿ ರಾಷ್ಟ್ರೀಯ ಬಸವದಳವು 1-4-90 ರಂದು ಸ್ಥಾಪನೆಗೊಂಡು ನಮ್ಮಗಳನ್ನು ಸ್ಫೂರ್ತಿಚೇತನರನ್ನಾಗಿ ಮಾಡಿದೆ. ★

'ಬ' ಎಂಬಲ್ಲಿ ಎನ್ನ ಭವವು ಹರಿಯಿತ್ತಯ್ಯ

'ಸ' ಎಂಬಲ್ಲಿ ಸರ್ವಜ್ಞಾನಿಯಾದೆನಯ್ಯ

'ವ' ಎಂದು ವಚಿಸುವರೆ ವಸ್ತು ಚೈತನ್ಯಾತ್ಮಕನಾದೆನಯ್ಯ

ಇಂತೀ ಬಸವಾಕ್ಷರ ತ್ರಯವೆನ್ನ ಸರ್ವಾಂಗದೊಳಗೆ ತೊಳಗಿ ಬೆಳಗಿದ ಭೇದವನರಿದು

ಆನು-ನೀನು ಬಸವಾ ಬಸವಾ ಎನುತಿರ್ದೆನಯ್ಯ ಗುಹೇಶ್ವರಾ

—ಶಿವಯೋಗಿ ಅಲ್ಲಮಪ್ರಭು

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ದಿನಾಂಕ 2-4-1990

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳಿಗೆ ಧಾರವಾಡ ಘಟಕ ರಾಷ್ಟ್ರೀಯ ಬಸದವಳದವರು ಅರ್ಪಿಸಿದ

ಸನ್ಮಾನ ಪತ್ರ

★ **ಕರ್ನಾಟಕದ ವಿವೇಕಾನಂದರೇ,**

ನಾಡಿನ ಪುಣ್ಯವೇ ಹಣ್ಣಾದಂತೆ ತಾವು ದಿ. 14-9-1931 ರಲ್ಲಿ ಬಸವನ ಬಾಗೇವಾಡಿಯ ಮನಗೋಳಿ ಗ್ರಾಮದ ಶರಣ ದಂಪತಿಗಳಾದ ಶ್ರೀ ಮಲ್ಲಪ್ಪ ಮತ್ತು ಕಲ್ಲಮ್ಮನವರ ಗರ್ಭ ಶುಕ್ತಿಯಲ್ಲಿ ಅಗ್ಗಳದ ಮುತ್ತಾಗಿ ಜನ್ಮಿಸಿದ್ದೀರಿ. ಪ್ರಕಾಂಡ ಪಂಡಿತರಾಗಿ, ಶ್ರೇಷ್ಠ ತತ್ತ್ವಜ್ಞಾನಿಗಳಾಗಿ, ಉಜ್ವಲ ಪ್ರವಚನಕಾರರಾಗಿ, ಅನುಪಮ ಅನುಭಾವಿಗಳಾಗಿ, ಬಸವ ತತ್ವದ ಪರಿಕಾರರಾಗಿ ಕರ್ನಾಟಕದ ವಿವೇಕಾನಂದರಾಗಿ ಬೆಳಗುತ್ತಿದ್ದೀರಿ.

★ **ಸುಯಿಧಾನ ಸುಗ್ರಂಥಮಾಲೆಯ ಸಂಸ್ಥಾಪಕರೇ.**

"ನಿನ್ನೊಡವೆ ಎಂಬುದು ಜ್ಞಾನರತ್ನ ನೋಡಾ" ಎಂಬ ಪ್ರಭುವಾಣಿಯಂತೆ ಬಸವ ತತ್ವವು ಮನೆಮನೆಗೆ ಮನ ಮನಕ್ಕೆ ಮುಟ್ಟಬೇಕೆಂಬ ಹಿರಿದಾದ ಹಂಬಲದಿಂದ ಸುಯಿಧಾನ ಸುಗ್ರಂಥ ಮಾಲೆಯನ್ನು ಪ್ರಾರಂಭಿಸಿ, ತನ್ಮೂಲಕ ನೂರಾರು ಗ್ರಂಥ ರತ್ನಗಳನ್ನು ಕನ್ನಡ ಸಾಹಿತ್ಯ ಭಂಡಾರಕ್ಕೆ ಅರ್ಪಿಸಿದ ಹಿರಿಮೆ ತಮ್ಮದು. ಚುಳುಕಾದ ಚೇತನ, ದೇವರು, ದೇವರ ಪೂಜೆ, ಅಕ್ಕನ ಪ್ರವಚನ ಮೊದಲಾದ ಕೃತಿ ಕುಸುಮಗಳು ತಮ್ಮ ಪಳಗಿದ ಲೇಖನಿಯಿಂದ ಹೊರಬಂದಿವೆ. ಅವೆಲ್ಲವೂ ಶರಣ ಸಂಸ್ಕೃತಿಯ ಸೌರಭ ಸೂಸಿವೆ.

★ **ಪ್ರಪ್ರಥಮ ಮಹಿಳಾ ಜಗದ್ಗುರು ಪೀಠ ಸ್ಥಾಪಕರೇ.**

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಇನ್ನೊಂದು ಮಹಿಳಾ ಜಗದ್ಗುರು ಪೀಠ ಸ್ಥಾಪನೆ ಸುವರ್ಣ ಸಂಪುಟ, ಧೈರ್ಯ-ಸಾಹಸಗಳ ಅಮೃತ ಫಲ. ತನ್ಮೂಲಕ ಜಗದ್ಗುರು ಮಾತೆ ಮಹಾದೇವಿಯವರು ಈ ಪೀಠದ ಗೌರವ ಘನತೆಯನ್ನು ಕಾಯ್ದುಕೊಳ್ಳುವುದರಲ್ಲಿ ಮಾತ್ರವಲ್ಲ ಬೆಳೆಸುವುದರಲ್ಲಿ ಯಶಸ್ವಿಯಾಗಿರುವುದು ನಾಡು ಪರನಾಡುಗಳು ಒಪ್ಪಿಕೊಂಡಿವೆ.

★ **ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಯೋಜಕರೆ.**

ಧಾರವಾಡದ ಇನ್ನೊಂದು ಕೀರ್ತಿ ಕಳಸ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ. ಪ್ರಶಾಂತ ವಾತಾವರಣದಲ್ಲಿ ಅರಳಿನಿಂತ ಈ ಸುಂದರ ಆಶ್ರಮ ತತ್ತ್ವಚಿಂತಕರಿಗೆ ವರದಾನವಾಗಿದೆ.

★ **ವಿಶ್ವಧರ್ಮ ಪ್ರವಚನದ ರೂವಾರಿಗಳೆ.**

ಧರ್ಮದ ಬಳಿಗೆ ಜನರು ಬರದಾಗ ಧರ್ಮವನ್ನೇ ಅವರಲ್ಲಿ ಕೊಂಡೊಯ್ಯಬೇಕೆಂಬ ಆದಮ್ಯ ಚೇತನದಿಂದ ತಾವು ಪ್ರಾರಂಭಿಸಿದ ವಿಶ್ವಧರ್ಮ ಪ್ರವಚನಗಳು ಸಮಸ್ತ ಜನಾಂಗವನ್ನೇ ಬಡಿದೆಬ್ಬಿಸಿವೆ. ಜಾಗೃತರನ್ನಾಗಿ ಮಾಡಿವೆ. ದಿ. 29-1-90 ರಿಂದ 2-4-90 ರ ವರೆಗೆ ಧಾರವಾಡ ಮಹಾನಗರದಲ್ಲಿ ಮೂರನೆಯ ಸಲ ವಿಶ್ವಧರ್ಮ ಪ್ರವಚನ ಮಾಡಿ ನಮ್ಮೆಲ್ಲರ ಮನಸ್ಸಿನ ಕೊಳೆಯನ್ನು ಕಿತ್ತೊಗೆದಿದ್ದೀರಿ.

★ **ರಾಷ್ಟ್ರೀಯ ಬಸವದಳದ ಯೋಜಕರೆ.**

ರಾಷ್ಟ್ರೀಯ ಬಸವದಳ ಪ್ರಾರಂಭಿಸಲು ಪ್ರೋತ್ಸಾಹ ನೀಡಿದ್ದೀರಿ. ತಮ್ಮ ಸೂಕ್ತ ಮಾರ್ಗದರ್ಶನ ಸದಾ ನಮಗಿರಲೆಂದು ಬಯಸುತ್ತೇವೆ. ನಾಡಿನ ಅಮೃತ ಪುತ್ರರಾದ ತಾವು ನೂರುವರ್ಷದ ಬಾಳನ್ನು ಬೆಳಗಿರೆಂದು ಹಾರೈಸುತ್ತೇವೆ.

ತಮ್ಮ, ರಾಷ್ಟ್ರೀಯ ಬಸವ ದಳದ ಸದಸ್ಯರು.

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ದಿನಾಂಕ: ೨-೪-೧೯೯೦

ಪೂಜ್ಯ ಶ್ರೀ ಜಗದ್ಗುರು ಮಾತೆಮಹಾದೇವಿಯವರಿಗೆ ರಾಷ್ಟ್ರೀಯ ಬಸವ ದಳದ ಧಾರವಾಡ ಘಟಕ ಅರ್ಪಿಸುವ

ಸನ್ಮಾನ ಪತ್ರ

★ ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುಗಳೆ.

ವೀರ ವಿರಾಗಿಣಿಯಾದ ಅಕ್ಕಮಹಾದೇವಿಯ ಪವಿತ್ರ ನಾಮವನ್ನು ಹೊತ್ತು, ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುಗಳಾಗಿ ಬಹು ದಕ್ಷತೆಯಿಂದ, ಸಂಪೂರ್ಣ ಸಾಮರ್ಥ್ಯದಿಂದ ತಾವು ಬಸವ ಧರ್ಮ, ಸಂಸ್ಕೃತಿ ಸಾಹಿತ್ಯ ಕ್ಷೇತ್ರಗಳಲ್ಲಿ ಅದ್ವಿತೀಯ ಯಶಸ್ಸು ಗಳಿಸಿದ್ದೀರಿ. ಭಾರತದಾದ್ಯಂತ ಅಷ್ಟೇ ಏಕೆ ಜಗತ್ತಿನ ಅನೇಕ ಕಡೆ ತಮ್ಮ ಕೀರ್ತಿ ದುಂದುಭಿ ಮೊಳಗುತ್ತಿರುವುದು ನಮ್ಮೆಲ್ಲರಿಗೆ ಅಪಾರ ಸಂತೋಷ ತಂದಿದೆ. ಇಂಥ ಜಗದ್ಗುರು ಪೀಠವನ್ನು ಹೊಂದಿರುವ ಹೆಮ್ಮೆ ಧಾರವಾಡ ನಗರದ್ದಾಗಿದೆಯಷ್ಟೆ.

★ ಅಪ್ರತಿಮ ಪ್ರವಚನ ಪ್ರವೀಣರೆ.

ನಾಡಿನ ಮೂಲೆಗಳಲ್ಲೆಲ್ಲಾ ತಾವು ಸಂಘಟಿಸಿದ ವಿಶ್ವಧರ್ಮ ಪ್ರವಚನಗಳು ಸಮಸ್ತ ಜನಾಂಗಕ್ಕೆ ಅಪ್ಯಾಯಮಾನವಾಗಿವೆ. ಧರ್ಮ ಸಂಸ್ಕಾರ ಕೊಡುವುದರಲ್ಲಿ, ರಾಷ್ಟ್ರೀಯ ಐಕ್ಯತೆಯನ್ನು ಉಂಟು ಮಾಡಿಸುವುದರಲ್ಲಿ, ಈಗಾಗಲೇ ವಿಶ್ವದಲ್ಲಿ ಅದ್ವಿತೀಯ ಯಶೋದುಂದುಭಿ ಬಾರಿಸಿವೆ. ತಮ್ಮ ಅಪಾರ ಅನುಭವದ ಅಮೃತ ಸಮವಾದ ಜ್ಞಾನ ಜೇನನ್ನು ಅಪಾರವಾಗಿ ಸವಿದು ವಿಶ್ವಜನ ಕೋಟಿ ಧನ್ಯರಾಗಿದ್ದಾರೆ. ತಾವು ವಿದೇಶಗಳಲ್ಲಿಯೂ ವಿಶ್ವಧರ್ಮ ಪ್ರವಚನಗಳನ್ನು ಕೊಟ್ಟು ವಿಶ್ವಗುರು ಬಸವಣ್ಣನವರ ತತ್ತ್ವಗಳನ್ನು ಪ್ರಚಾರಗೊಳಿಸಿರುವಿರಿ.

★ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಸ್ಥಾಪಕರೆ.

ಕಂದಾಚಾರ, ಮೂಢನಂಬಿಕೆ, ಜಾತಿ, ಮತ, ಪಂಥಗಳಲ್ಲಿಯ ತಿಕ್ಕಾಟಗಳನ್ನು ಕಿತ್ತೊಗೆಯಲು ತಾವು ನವದೃಷ್ಟಿಕೋನದ ನೂತನ ಸಂಸ್ಥೆ ಸ್ಥಾಪಿಸಿ ಮಾನವ ಕಲ್ಯಾಣಕ್ಕಾಗಿ ಹಗಲಿರಳು ದುಡಿಯುತ್ತಿರುವಿರಿ. ಸಂಸ್ಥೆಯ ಸೂತ್ರಧಾರರಾದ ಕ್ರಾಂತಿಯೋಗಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ಮಾರ್ಗದರ್ಶನದಲ್ಲಿ ಪ್ರತಿಯೊಂದು ಕಾರ್ಯಗಳನ್ನು ಬಹು ದಕ್ಷತೆಯಿಂದ ನಿರ್ವಹಿಸುತ್ತಿರುವಿರಿ. ಜ್ಞಾನ ಪ್ರಸಾರಕ್ಕಾಗಿ ಪ್ರಭುದೇವ ದಿವ್ಯಜ್ಞಾನ ವಿಶ್ವವಿದ್ಯಾಲಯದ ಮುಖಾಂತರ ತರಬೇತಿ ವರ್ಗಗಳನ್ನು ನಡೆಸುತ್ತಿದ್ದು ಮುಮುಕ್ಷುಗಳಿಗೆ ಮಹದುಪಕಾರ ಮಾಡುತ್ತಿರುವಿರಿ.

★ ಕಲ್ಯಾಣ ಕಿರಣ ಸಂಸ್ಥಾಪಕರೆ,

ಕಳೆದ ಹದಿನೆಂಟು ವರುಷಗಳಿಂದಲೂ "ಕಲ್ಯಾಣ ಕಿರಣ" ಮಾಸ ಪತ್ರಿಕೆಯ ಸಂಪಾದಕರಾಗಿ ಅಪೂರ್ವ ಸೇವೆ ಸಲ್ಲಿಸಿದ ನಿಮ್ಮ ಸಾಹಸ ಅವರ್ಣನೀಯ. 7000 ಕ್ಕೂ ಮಿಕ್ಕಿ ಪ್ರತಿಗಳನ್ನು ನಾಡಿನ ಉದ್ದಗಲದಲ್ಲಿ ಪ್ರಸಾರವಾಗುತ್ತಿರುವುದು ಶ್ಲಾಘನೀಯ. ಧಾರ್ಮಿಕ ಮಾಸ ಪತ್ರಿಕೆಯು ಇಷ್ಟೊಂದು ಪ್ರಸಾರವಾಗುತ್ತಿರುವುದು ತಾವು ಬರೆಯುತ್ತಿರುವ ವೈವಿಧ್ಯಮಯ ಶೀರ್ಷಿಕೆಗಳೇ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ಪತ್ರಿಕೋದ್ಯಮದಲ್ಲಿ ಪಳಗಿದ ತಮ್ಮ ಹರಿತ ಲೇಖನಿ ಅನೇಕ ಸಂದೇಹಗಳನ್ನು ದೂರ ಮಾಡಿವೆ.

★ ಸುವಿಧಾನ ಸುಗ್ರಂಥ ಮಾಲೆಯ ಸಂಪಾದಕರೆ,

ತಾವು ಹಾಗೂ ಪೂಜ್ಯ ಶ್ರೀ ಕ್ರಾಂತಿಯೋಗಿ ಲಿಂಗಾನಂದ ಸ್ವಾಮೀಜಿಯವರು ಗ್ರಂಥ ಮಾಲೆಯನ್ನು ಸ್ಥಾಪಿಸಿ ನೂರಾರು ಗ್ರಂಥಗಳನ್ನು ಪ್ರಕಟಗೊಳಿಸಿ ಸಾಧಕರಿಗೆ ಮಾರ್ಗದರ್ಶಿಕೆಗಳನ್ನು ಒದಗಿಸಿರುವಿರಿ. ಇದೀಗ ಧರ್ಮ ಗ್ರಂಥ ರಚನೆಗೆ ಪ್ರವೃತ್ತರಾಗಿರುವುದು ನಮ್ಮೆಲ್ಲರ ಭಾಗ್ಯವೇ ಸರಿ.

★ ಶರಣ ಮೇಳದ ಪ್ರಾಯೋಜಕರೆ,

ಕಳೆದ ಮೂರು ವರ್ಷಗಳಿಂದ ಬಸವಕ್ರಾಂತಿದಿನದ(ಮಕರ ಸಂಕ್ರಾಂತಿಯ) ಶುಭ ಸಂದರ್ಭದಲ್ಲಿ ಬಸವಣ್ಣನವರ ಐಕ್ಯಸ್ಥಾನವಾದ ಕೂಡಲ ಸಂಗಮದಲ್ಲಿ ಶರಣ ಮೇಳಗಳನ್ನು ಸಂಘಟಿಸಿದ ಕೀರ್ತಿ ತಮ್ಮದಾಗಿದೆ. ಕೂಡಲ ಸಂಗಮವು ಅವಿಮುಕ್ತ ಕ್ಷೇತ್ರವಾಗಿ ನಾಡಿನ ಶ್ರೇಷ್ಠ ಧಾರ್ಮಿಕ ಕೇಂದ್ರವನ್ನಾಗಿ ಮಾಡಲು ಹೋರಾಡುತ್ತಿರುವುದು ಕನ್ನಡ ನಾಡಿನ ಪುಣ್ಯ ವಿಶೇಷವೇ ಸರಿ.

★ ರಾಷ್ಟ್ರೀಯ ಬಸವದಳದ ಸಂಘಟಕರೆ,

ಬಸವಾಭಿಮಾನಿಗಳು ಒಂದೆಡೆ ಕೂಡಿ ಬಸವ ತತ್ತ್ವ ಚಿಂತನ ಮಂಥನ ಮಾಡಲು ರಾಷ್ಟ್ರೀಯ ಬಸವ ದಳಗಳನ್ನು ಸಂಘಟಿಸುವ ಸಾಹಸದ ಕಾರ್ಯ ಕೈಗೊಂಡಿರುವುದು ತಮ್ಮ ಮಣಿಹಗಳಲ್ಲಿ ಇನ್ನೊಂದು ಮೈಲಿಗಲ್ಲು. ಈಗಾಗಲೇ ಹಲವು ಕಡೆ ರಾಷ್ಟ್ರೀಯ ಬಸವದಳಗಳು ಸುಗಮವಾಗಿ ಸಾಗಿವೆ. ಇದೀಗ ಧಾರವಾಡ ಮಹಾನಗರದಲ್ಲಿ ಬಸವ ದಳದ ಸ್ಥಾಪನೆ ಮಾಡಿ ನಮ್ಮನ್ನು ಕಾರ್ಯ ಪ್ರವೃತ್ತರನ್ನಾಗಿ ಮಾಡಿದ್ದೀರಿ. ಅದಕ್ಕಾಗಿ ತಮಗೆ ನೂರು ನೂರು ನಮನಗಳು. ಈ ಶುಭ ಸಂದರ್ಭದಲ್ಲಿ ತಮ್ಮನ್ನು ಸತ್ಕರಿಸುವ ಮಹಾಭಾಗ್ಯ ನಮ್ಮದಾಗಿದ್ದು, ನಿಮ್ಮ ಮುಡಿಗೆ ಹೂವ ತರುತ್ತೇವೆಂಬ ಪ್ರತಿಜ್ಞೆ ನಮ್ಮದಾಗಿದೆ. ತಮ್ಮ ಆಶೀರ್ವಾದದ ರಕ್ಷಾ ಕವಚ ನಮಗಿರಲೆಂದು ಸದಾ ಬಯಸುವ,

ತಮ್ಮ

ಧಾರವಾಡ
2-4-1990

ರಾಷ್ಟ್ರೀಯ ಬಸವ ದಳದ ಸದಸ್ಯರು
ಧಾರವಾಡ ಘಟಕ

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ 4 [ವಿಧಿ 8]

1.	ಪ್ರಕಟಣೆಯ ಸ್ಥಳ	–	ಬೆಂಗಳೂರು.
2.	ಪ್ರಕಟಣೆಯ ನಿಯತಕಾಲಿಕತೆ	–	ಮಾಸಿಕ.
3.	ಮುದ್ರಕರ ಹೆಸರು	–	ಸೋದರಿ ಕಸ್ತೂರಿ.
	ಭಾರತದ ಪ್ರಜೆಯೆ ?	–	ಹೌದು.
	ವಿಳಾಸ	–	ಪ್ರಭುದೇವ ಮುದ್ರಣಾಲಯ ಬಸವ ಗಂಗೋತ್ರಿ, ಕುಂಬಳಗೋಡು
4.	ಪ್ರಕಾಶಕರ ಹೆಸರು.	–	ಬಿ. ಶಂಭುಲಿಂಗಯ್ಯ
	ಭಾರತದ ಪ್ರಜೆಯೇ	–	ಹೌದು
	ವಿಳಾಸ	–	ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ ರಾಜಾಜಿನಗರ, ಬೆಂಗಳೂರು-560010
5.	ಸಂಪಾದಕರ ಹೆಸರು	–	ಬಿ. ಶಂಭುಲಿಂಗಯ್ಯ,
	ಭಾರತದ ಪ್ರಜೆಯೇ ?	–	ಹೌದು
	ವಿಳಾಸ	–	ಬಸವ ಮಂಟಪ, ರಾಜಾಜಿನಗರ ಬೆಂಗಳೂರು-560010
6.	ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಭಂಡವಾಳ ಶೇ 1ಕ್ಕಿಂತ ಹೆಚ್ಚು ಭಾಗಕ್ಕೆ ಪಾಲು ದಾರರ ಹೆಸರು ಮತ್ತು ವಿಳಾಸ	–	ವಿಶ್ವಕಲ್ಯಾಣ ಮಿಷನ್ (ರಿಜಿಸ್ಟರ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್) ಬಸವ ಮಂಟಪ, ರಾಜಾಜಿನಗರ ಬೆಂಗಳೂರು-560010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು, ನಾನು ಬಿ. ಶಂಭುಲಿಂಗಯ್ಯ ಘೋಷಿಸುತ್ತೇನೆ.

ದಿನಾಂಕ 1-3-1990

ಪ್ರಕಾಶಕ

ಬಿ. ಶಂಭುಲಿಂಗಯ್ಯ

ಕಲ್ಯಾಣ ಕಿರಣ, ಬೆಂಗಳೂರು–10

ಒಂದು ಪತ್ರಕ್ಕೆ ಉತ್ತರ

—ಮಾತಾಜಿ

(ದಾವಣಗೆರೆಯ 'ಜನತಾ ವಾಣಿ' ಪತ್ರಿಕಾ ಕಾರ್ಯಾಲಯದಿಂದ ರವಾನಿಸಲ್ಪಟ್ಟ ಒಂದು ಪತ್ರದ ಜೆರಾಕ್ಸ್ ಪ್ರತಿ ನಮ್ಮಲ್ಲಿಗೆ ಬಂದಿತು. ಈ ಆಕ್ಷೇಪಗಳಿಗೆ ನಮ್ಮ ಉತ್ತರವೇನು, ಎಂದು ಕಾರ್ಯಾಲಯದವರು ಕೇಳಿದ್ದರು. ಅವರಿಗೆ ಉತ್ತರ ಬರೆದು, ಅದನ್ನು ಕಲ್ಯಾಣ ಕಿರಣದಲ್ಲೂ ಮುದ್ರಿಸಬಾರದೇಕೆ ? ಎಂದುಕೊಂಡು, ಮುದ್ರಿಸಲಾಗಿದೆ.)

ದಿನಾಂಕ 16-4-1990. ಬೆಂಗಳೂರು,

ಮಾನ್ಯರಾದ ಕಾರ್ಯಾಲಯ ವ್ಯವಸ್ಥಾಪಕರು.
ಜನತಾವಾಣಿ,
ಅಶೋಕ ರಸ್ತೆ, ದಾವಣಗೆರೆ,

ಇವರಿಗೆ ಹೃತ್ಪೂರ್ವಕ ಶುಭಹಾರೈಕೆಗಳು. ದಿ. 30-3-1990 ರ ಪತ್ರಕ್ಕೆ ತಡವಾಗಿ ಉತ್ತರ ಬರೆಯುತ್ತಲಿರುವೆ. ನಿಮ್ಮ ಪತ್ರ ತಲ್ಪುವುದರಲ್ಲಿ ಆ ವಿಳಾಸದಲ್ಲಿ ನಾನಿರಲಿಲ್ಲ. ಮುಂದೆ ಧಾರವಾಡದಿಂದ ಕೂಡಲ ಸಂಗಮ, ಅದವಾನಿ, ಬಳ್ಳಾರಿ ಮುಂತಾಗಿ ಪ್ರವಾಸಕ್ಕೆ ಹೋದ್ದರಿಂದ ಪತ್ರ ಕೈ ಸೇರುವುದು, ಉತ್ತರಿಸುವುದು ತಡವಾಯಿತು.

ಕೆ. ಆರ್. ಚನ್ನಬಸಪ್ಪ ಎಂಬ ಮಹನೀಯರೇ ನೇರವಾಗಿ ಕಳಿಸಿದ್ದರೆ, ಆ ಪ್ರಕಟಣೆ ಉತ್ತರಿಸಲು ಅಯೋಗ್ಯ ಎಂದು ದಿವ್ಯ ನಿರ್ಲಕ್ಷ್ಯವಹಿಸುತ್ತಿದ್ದೆವು. ನಿಮ್ಮ ಕಾರ್ಯಾಲಯದಿಂದ ಬಂದುದರಿಂದಾಗಿ 'ಜನತಾವಾಣಿ' ಒಂದು ಪ್ರೌಢ ಮತ್ತು ಘನತೆವೆತ್ತ ಪತ್ರಿಕೆಯೆಂದು ಭಾವಿಸಿ, ಉತ್ತರಿಸುವ ಸೌಜನ್ಯ ತೋರಬೇಕಾಗಿದೆ. ಅದು, 'ಜನತಾವಾಣಿ' ಸತ್ಯಕ್ಕೆ ಮಾನ್ಯತೆ ಕೊಡುತ್ತದೆ ಎಂಬ ನಂಬಿಗೆಯಿಂದ.

ವಿಶೇಷ ಸೂಚನೆ : ವಾದ–ವಿವಾದಗಳು ಪ್ರಕಟಗೊಂಡುದೇ ಆದರೆ, ಜನತಾವಾಣಿಯ ಒಂದು ಪ್ರತಿಯನ್ನು ಮರೆಯದೆ ಬೆಂಗಳೂರಿಗೆ ಕಳಿಸಿರಿ.

ಚಿತ್ರದುರ್ಗ ಜಿಲ್ಲಾ ವೀರಶೈವ ಮಹಾಸಂಘ(ರಿ) ಇದರ ತಲೆಬರಹದ ಅಡಿಯಲ್ಲಿ ಕೆ. ಆರ್. ಚನ್ನಬಸಪ್ಪನವರು ಕೆಲವು ಸಂದೇಹ, ಆಕ್ಷೇಪ ಎತ್ತಿದ್ದಾರೆ.

1. ವೀರಶೈವ ಧರ್ಮವು ಬಸವ ತತ್ತ್ವವನ್ನು ಒಳಗೊಂಡಿದೆಯೆ? ಇಲ್ಲವಾದಲ್ಲಿ ಬಸವ ತತ್ತ್ವವು ಯಾವಾಗ ಆರಂಭವಾಯಿತು.

ಉತ್ತರ: ವೀರಶೈವ ಒಂದು ಸ್ವತಂತ್ರ ಧರ್ಮವಲ್ಲ. ಅದು ಬಸವ ಪೂರ್ವದಲ್ಲಿ ಸಪ್ತ ಶೈವಗಳಲ್ಲಿ ಒಂದಾದ ಮತವಾಗಿತ್ತು. ಆ ವೀರಶೈವವು ಚತುರ್ವರ್ಣಾಶ್ರಮ ವ್ಯವಸ್ಥೆಯನ್ನು ಒಪ್ಪುವುದು. ಆದ್ದರಿಂದ ಅದು ಬಸವ ತತ್ತ್ವವು ಪ್ರತಿಪಾದಿಸುವ ಸಮತಾವಾದಿ ಸಿದ್ಧಾಂತವನ್ನು ಒಳಗೊಂಡಿಲ್ಲ.

ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಅವತರಿಸಿ, ಒಂದು
ಸ್ವತಂತ್ರವಾದ ಮತ್ತು ಸ್ವಾವಲಂಬಿಯಾದ ಸಮತಾ ತತ್ತ್ವವನ್ನು ಪ್ರತಿಪಾದಿಸಿದ
ಧರ್ಮವನ್ನು ಕೊಟ್ಟರು. ಅದು ಲಿಂಗಧಾರಿಗಳ ಧರ್ಮ–ಲಿಂಗವಂತ ಧರ್ಮ.
2. ಬಸವ ತತ್ತ್ವವು ಶ್ರೀ ಜಾತವೇದಮುನಿ ಶಿವಾಚಾರ್ಯರಿಂದ ಬೋಧಿ
ಸಲ್ಪಟ್ಟಿತೆ ಅಥವಾ ಬಸವೇಶ್ವರರೇ ಸ್ವಯಂಭುವಾಗಿ ಕಲಿತು ಬೋಧಿಸಿದರೆ ?
ಉತ್ತರ : ಜಾತವೇದ ಮುನಿಗಳು ವಿದ್ಯಾಲಯದ ಕುಲಪತಿಗಳಾಗಿ ಬಸವಣ್ಣ
ನವರಿಗೆ ಶಿಕ್ಷಣ ನೀಡಿದ ಗುರುಗಳೇ ವಿನಾ ದೀಕ್ಷಾಗುರುವಲ್ಲ. ಜಾತವೇದ ಮುನಿಗಳು
ದೀಕ್ಷೆ ನೀಡಿದರು ಎಂಬ ಬಗ್ಗೆ ಹರಿಹರ, ಪಾಲ್ಕುರಿಕೆ ಸೋಮನಾಥ, ಭೀಮಕವಿ
ಮುಂತಾದ ಕೃತಿಗಳಲ್ಲಾಗಲೀ, ಬಸವಣ್ಣನವರ ಆತ್ಮಕಥೆಯಂತಿರುವ ವಚನಗಳಲ್ಲಿ
ಉಲ್ಲೇಖವೇ ಇಲ್ಲ.
ಮೇಲಾಗಿ ಜಾತವೇದ ಮುನಿಗಳು ಬೋಧಿಸುತ್ತಿದ್ದುದು ವೇದ, ಆಗಮ
ಪುರಾಣೋಕ್ತ ಶೈವ, ವೈದಿಕ ಧರ್ಮಗಳನ್ನು ವೇದಕ್ಕೆ ಒರೆಯ ಕಟ್ಟಿ, ಶಾಸ್ತ್ರಕ್ಕೆ ನಿಗಳ
ನಿಕ್ಕಿ, ತರ್ಕದ ಬೆನ್ನಬಾರನೆತ್ತಿ, ಆಗಮದ ಮೂಗ ಕೊಯ್ದು ಅನುಭವ ಪ್ರಮಾಣದ
ಆಧಾರದ ಮೇಲೆ ನಿಂತ ಸ್ವತಂತ್ರ ಧರ್ಮ ಬಸವಣ್ಣನವರ ಹೃನ್ಮಂದಿರದಲ್ಲಿ ರೂಪು
ಗೊಂಡುದು. ಚನ್ನಬಸವಣ್ಣನವರು ಹೇಳುವಂತೆ, "ಬಿತ್ತದ ಬೀಜದ ಫಲವು ವಿಪರೀತ
ಚಾರಿತ್ರ, ನೋಡಾ! ತನ್ನಲ್ಲಿ ತಾನೆಯಾಗಿ ಆಗಮವನೇರಿದಾತನೆ ಸ್ವಯಂಕೃತ, ಸಹಜ,
ಕೂಡಲ ಚನ್ನಸಂಗಯ್ಯನಲ್ಲಿ ಬಸವಣ್ಣನು.
3. ಬಸವೇಶ್ವರರು ಕೂಡಲ ಸಂಗಮೇಶ್ವರನನ್ನು ಪೂಜಿಸುತ್ತಿದ್ದರೆ ಇಲ್ಲವೇ?
ಉತ್ತರ: ತಾಯಿ ತಂದೆಗಳ ವ್ಯಾಮೋಹದ ಬಂಧನವನ್ನು ಹರಿದುಕೊಂಡು ಬಂದ
ನಂತರ ಸಂಗಮೇಶ್ವರ ದೇವಾಲಯದಲ್ಲಿ ಬಸವರಸನು ಅರ್ಚಕನಾಗಿ ವೃತ್ತಿಯನ್ನು
ಸ್ವೀಕರಿಸಿದ. ಅರ್ಚಕ ವೃತ್ತಿ ಮಾಡುತ್ತ ವಿದ್ಯಾರ್ಜನೆಯನ್ನು ಮಾಡುತ್ತ ತಾರುಣ್ಯಕ್ಕೆ
ತಲುಪಿದ. ಗುಡಿಗುಂಡಾರಗಳು ಪುರೋಹಿತಶಾಹಿಯ ಹಿಡಿತದಲ್ಲಿದ್ದು, ಹೇಗೆ
ಜನ ಸಾಮಾನ್ಯರನ್ನು ವರ್ಣ. ವರ್ಗ ಜಾತಿಯ ಆಧಾರದ ಮೇಲೆ ದೂರವಿಡುತ್ತಿವೆ.
ಎಂಬುದನ್ನು ಅರಿತು, ನಿರಾಕಾರನಾದ ದೇವರನ್ನು ಸೂಕ್ತವಾಗಿ ಸಂಕೇತಿಸುವಂತಹ
ಇಷ್ಟಲಿಂಗವನ್ನು ಸ್ವತಃ ಬಸವಣ್ಣನವರು ರೂಪಿಸಿ ಕೊಟ್ಟರು. ಜೊತೆಗೆ ಕರ್ತನಾದ
ದೇವರು ಒಬ್ಬನನ್ನೇ ಆರಾಧಿಸಬೇಕೆಂದು ಕಡ್ಡಾಯವಾದ ಏಕದೇವೋಪಾಸನೆಯನ್ನು
ಬೋಧಿಸಿದರು; ಈ ತತ್ತ್ವಕ್ಕೆ ಅನುಗುಣವಾಗಿ ನಂತರ ಅವರು ಇಷ್ಟಲಿಂಗವನ್ನು
ಬಿಟ್ಟು ಬೇರೇನನ್ನು ಪೂಜಿಸಲಿಲ್ಲ.
ಪ್ರಶ್ನೆಗಳು: 4–5–6–7
ಕೆ. ಆರ್. ಚನ್ನಬಸಪ್ಪನವರು ಜನರಿಗೆ ಏನು ಹೇಳಬೇಕೆಂದು ಈ ಪ್ರಕಟಣೆ
ಹೊರಡಿಸಿದ್ದಾರೋ ತಿಳಿಯದು ; ಏಕೆಂದರೆ ಒಂದಕ್ಕೊಂದು ಸಂಬಂಧವಿಲ್ಲದ ಪ್ರಶ್ನೆ
ಗಳನ್ನು ಹಾಕಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಬಸವ ಸಾಗರ

(ನಾರಾಯಣ ಪುರ)ಅಣೆಕಟ್ಟು ಕಟ್ಟಿದಾಗ ದೇವಾಲಯವು ಗರಿಷ್ಟ ಮಟ್ಟದ[M.W.L.]
ನೀರಿನ ನಿಲುಗಡೆಯಿಂದ ಮುಳುಗುತ್ತದೆ ಎಂಬ ತಂತ್ರಜ್ಞರ ಅಭಿಪ್ರಾಯಕ್ಕೆ ಅನುಗುಣ
ವಾಗಿ ಜನತೆಗೆ ಉಪಯೋಗವಾಗುವ ಅಣೆಕಟ್ಟಿನ ನಿರ್ಮಾಣ ನಿಲ್ಲುವುದು ಬೇಡ ಎಂದು
ಚಿಂತನಶೀಲರಾದ ಬಸವತತ್ತ್ವದವರು ಆಲೋಚಿಸಿದರು. ಪುರಾತನ ಚಾರಿತ್ರಿಕ
ಸಂಗಮೇಶ್ವರ ದೇವಾಲಯ ನೀರಿನಲ್ಲಿ ಮುಳುಗಿ ಹೋಗುವುದು ಬೇಡ ಎಂದು, ಅದು
ಹೊಸ ಸ್ಥಳದಲ್ಲಿ ನಿರ್ಮಿಸಲ್ಪಡಬೇಕೆಂದು ಅಭಿಪ್ರಾಯ ಮಂಡಿಸಿದರು. ಇವರ
ಉದ್ದೇಶ ದೇವಾಲಯವನ್ನು ಕೆಡವಿಸುವುದಾಗಿರದೆ, ಸುರಕ್ಷಿತ ಸ್ಥಳದಲ್ಲಿ ನಿರ್ಮಿಸಲು
ಒತ್ತಾಯ ತರುವುದೇ ಆಗಿತ್ತು.

1987 ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾಧ್ಯಕ್ಷ ಶ್ರೀ ಐ. ಎಂ. ಮಗ
ದುಮ್ ಅವರು ಸಮಾಜದ ಹಿರಿಯರು ಮತ್ತು ಮಠಾಧಿಪತಿಗಳನ್ನು ಕೂಡಿಸಿ. ಜಲಾ
ಶಯ ಪೂರ್ತಿ ತುಂಬಿದಾಗಲೂ ದೇವಾಲಯ ಮುಳುಗಡೆಯಾಗದು. ಗರಿಷ್ಠ ಮಟ್ಟದ್ದು
ಕೇವಲ ಕಾಲ್ಪನಿಕ ಲೆಕ್ಕಾಚಾರ ಎಂದು ಮನವರಿಕೆ ಮಾಡಿಕೊಟ್ಟಾಗ, ಮಹಾಸಭೆಯ
ವರು ಮತ್ತು ಬಸವ ತತ್ತ್ವವಾದಿಗಳು ಕೈ ಸೇರಿಸಿ ಹೋರಾಟಕ್ಕೆ ಅಣಿಯಾದರು.
ಕೂಡಲ ಸಂಗಮೇಶ್ವರ ದೇವಾಲಯವನ್ನು ಇದ್ದಲ್ಲಿಯೇ ರಕ್ಷಿಸಿ, ಪುನರ್ನಿರ್ಮಿಸಿ ಎಂಬ
ಬೇಡಿಕೆ ಬಲವಾಯಿತು. ಬಸವ ತತ್ತ್ವಾನುಯಾಯಿಗಳು ನಿಷ್ಠಾವಂತರು ಪ್ರಾಮಾಣಿ
ಕರೂ, ಇರುವುದರಿಂದ ಅವರು ಮನಸ್ಸಿನಲ್ಲಿ ಒಂದಿಟ್ಟುಕೊಂಡು ಹೊರಗೊಂದು
ಬಗೆಯ ಬೂಟಾಟಿಕೆಯ ಮಾತುಗಳನ್ನು ಆಡರು, ಎಂದೇ ಸರ್ಕಾರ ಆ ವರೆಗೆ ಏನೆಲ್ಲ
ಗದ್ದಲವನ್ನು ಅನೇಕರು ಹಾಕುತ್ತಿದ್ದರೂ ಅವರ ಮಾತಿಗೆ ಬೆಲೆ ಕೊಡದಿದ್ದುದು. ನಂತರ
ಶ್ರೀ ವಿಶ್ವನಾಥರೆಡ್ಡಿ ಮುದನಾಳ ಸಮಿತಿಯನ್ನು ಮಾಡಿತು. ಬಸವ ತತ್ತ್ವನಿಷ್ಠರು
ಏಕದೇವೋಪಾಸಕರಾದ್ದರಿಂದ ಸ್ಥಾವರಲಿಂಗೋಪಾಸನೆ ಮಾಡದೆ ಇದ್ದರೂ, ತಮ್ಮ
ಗುರು ಬಸವಣ್ಣನವರು ಪೂಜಿಸಿದ, ಕುಳಿತ, ನಡೆದಾಡಿದ ಪವಿತ್ರ ತಾಣವನ್ನು ಸ್ಮಾರ
ಕವಾಗಿ ಉಳಿಸಿಕೊಳ್ಳಲು ಹೋರಾಡಿದರು, ಯಶಸ್ವಿಯಾದರು. ಹೀಗಾಗಿ ಸಂಗಮೇಶ್ವರ
ದೇವಾಲಯವನ್ನು ಉಳಿಸಿದರೆಂಬ ಕೀರ್ತಿಗೆ ಭಾಜನರಾಗಿದ್ದಾರೆ. ಈ ಸತ್ಯವನ್ನು
ಅರಗಿಸಿಕೊಳ್ಳಲಾರದೆ ಚನ್ನಬಸಪ್ಪನವರು ಅಸೂಯೆಪಟ್ಟರೆ ಯಾರೇನು ಮಾಡ
ಲಾದೀತು?

ಕೂಡಲ ಸಂಗಮವು ಶ್ರೀ ಸಂಗಮೇಶ್ವರ ದೇವಾಲಯ, ಕೃಷ್ಣ-ಮಲಾಪಹಾರಿ.
ನದಿಗಳ ಸಂಗಮ, ಶ್ರೀ ಬಸವೇಶ್ವರ ಐಕ್ಯ ಮಂಟಪ ಹೊಂದಿ ಸಮಸ್ತ ಹಿಂದುಗಳು
ಮತ್ತು ಬಸವತತ್ತ್ವಾನುಯಾಯಿಗಳ ಶ್ರದ್ಧಾಕೇಂದ್ರವಾಗಿದೆ. ಆದರೆ ಯಾವುದೇ ರೀತಿ
ಕ್ಷೇತ್ರವು ಬೆಳೆಯದೆ ಬಂದ ಯಾತ್ರಿಕರಿಗೆ ವಸತಿ, ಊಟಗಳ ಅನುಕೂಲತೆ ಇಲ್ಲ. ಹೆಚ್ಚಿಗೆ
ಹೇಳುವುದೇನು, ಬೇಸಿಗೆ ಕಾಲದಲ್ಲಿ ಕುಡಿಯುವ ನೀರು ಸಿಗುವುದು ಸಹ ಕಷ್ಟಸಾಧ್ಯ,
ಇದನ್ನರಿತು ಬಸವ ಧರ್ಮಪೀಠ ಎಂಬ ಟ್ರಸ್ಟನ್ನು ರಚಿಸಿ ವ್ಯಾಪಕವಾದ ಯೋಜನೆ
ಕೈಗೊಳ್ಳಲಾಗಿದೆ.

ಸಂಗಮೇಶ್ವರ ದೇವಾಲಯದ ಟ್ರಸ್ಟ್ ವಂಶಪಾರಂಪರಿಕ ಟ್ರಸ್ಟ್. ಆದ್ದರಿಂದ ಆ ಸಂಸ್ಥೆ ಮೂಲಕ ನಾವು ಯೋಜಿಸಿರುವುದನ್ನು ಕಾರ್ಯಾಚರಣೆಗೆ ತರಲು ಸಾಧ್ಯವಿಲ್ಲ. ಆದ್ದರಿಂದ ನಮಗೆ ಸ್ವತಂತ್ರವಾದ ಟ್ರಸ್ಟ್ ರಚಿಸುವುದು ಅನಿವಾರ್ಯವೇ ಆಗಿದೆ. ಕೆ. ಆರ್. ಚನ್ನಬಸಪ್ಪನವರು ಆರೋಪಿಸಿದಂತೆ ಸಂಗಮೇಶ್ವರ ದೇವಾಲಯವನ್ನು ಕಟ್ಟುತ್ತೇವೆಂದು ಜನರಿಂದ ಒಂದು ಬಿಡಿಕಾಸನ್ನೂ ನಾವು ಎತ್ತಿಲ್ಲ. ದೇವಾಲಯ ಕಟ್ಟುವ ಹೊಣೆಗಾರಿಕೆ ಬಿಚ್ಚಿಹಾಕಿರುವ ಸರ್ಕಾರದ ಮೇಲೆ ಇವೆ. ಆದ್ದರಿಂದ ಅದರಲ್ಲಿ ತಲೆ ಹಾಕಲು ಬರದೆಂಬ ಕಾಯಿದೆ ಜ್ಞಾನ ನಮಗೂ ಇದೆ. ಬಹಳವೆಂದರೆ ಜನಜಾಗೃತಿ ಮಾಡಿ, ಚಳುವಳಿ ಮಾಡಿ ಬೇಗನೆ ದೇವಾಲಯ ನಿರ್ಮಾಣ ಆರಂಭಿಸಿರಿ ಎಂದು ನಾವು ಒತ್ತಾಯ ತರಬಹುದು ಅಷ್ಟೆ. ಅದನ್ನು ನಾವು ಮಾಡುತ್ತಲಿದ್ದೇವೆ.

ಬಸವ ಧರ್ಮಪೀಠ ಟ್ರಸ್ಟಿನಿಂದ, ಪ್ರಸಾದ ನಿಲಯ ಕಟ್ಟಿ ನಿತ್ಯ ದಾಸೋಹ ಯೋಜನೆ ಇದೇ ಬಸವ ಜಯಂತಿಯಿಂದ (28-4-90) ಆರಂಭಿಸುತ್ತಿದ್ದೇವೆ. ವಿಶ್ವ ಗುರು ಬಸವಣ್ಣನವರು ಐಕ್ಯರಾದ ಸುಕ್ಷೇತ್ರ ಕೂಡಲ ಸಂಗಮದಲ್ಲಿ ವರ್ಷಕ್ಕೊಮ್ಮೆ ಯಾವರೂ ಬಸವ ತತ್ತ್ವಾನುಯಾಯಿಗಳು ಎಲ್ಲ ರಾಜ್ಯಗಳಿಂದ ಬಂದು ಸೇರಬೇಕು ಎಂಬ ಉದ್ದೇಶದಿಂದಲೇ ಶರಣ ಮೇಳ ಮಾಡುತ್ತಿರುವುದು. ಜಾತಿವಾದಿಗಳು, ವರ್ಗ-ವರ್ಣ ವಾದಿಗಳು, ಭಕ್ತ-ಮಹೇಶ್ವರ ಎಂಬ ಭೇದವನ್ನು ಪೋಷಿಸುತ್ತಿರುವ ಪಂಚಾಚಾರ್ಯವಾದಿಗಳಿಂದ ಪ್ರಗತಿಪರ ಮೌಲ್ಯಗಳ ಬಸವ ಧರ್ಮ ವಿಕೃತಗೊಳ್ಳುವುದು ಬೇಡ ಎಂದೇ ಈಗ ಬಸವ ತತ್ತ್ವಾನುಯಾಯಿಗಳು ನಿರ್ದಿಷ್ಟ ವಿಚಾರಗಳನ್ನು ಗುರುತಿಸಿಕೊಳ್ಳುತ್ತಿರುವುದು.

ಕೆ. ಆರ್ ಚನ್ನಬಸಪ್ಪನವರು ವೈಯಕ್ತಿಕ ನಿಂದೆಯನ್ನು ಕೀಳುಮಟ್ಟದಲ್ಲಿ ಮಾಡಿದ್ದಾರೆ. ಇಂಥ ನಿಂದೆಯನ್ನು ಯಾರು ಬೇಕಾದರೂ ಮಾಡಬಹುದು. ಈ ಕೆ.ಆರ್. ಚನ್ನಬಸಪ್ಪ ನೈತಿಕ ಮಾರ್ಗದಲ್ಲಿ, ತಂದೆಯಿಂದ ಹುಟ್ಟಿದವರಲ್ಲ ಎಂದು ನಾನು ಆರೋಪಿಸುತ್ತೇನೆ ಎಂದುಕೊಳ್ಳಿರಿ. ಇದು ನಿಲ್ಲುವಂತಹ ಮಾತೆ ? ಲಂಗುಲಗಾಮಿಲ್ಲದೆ ಯಾರು ಯಾರನ್ನು ಬೇಕಾದರೂ ದೂಷಿಸಬಹುದು; ಅದರಿಂದ ಆಗುವ ಪ್ರಯೋಜನವೇನು ? ವೈಯಕ್ತಿಕ ನಿಂದೆಗಿಳಿಯುವಿಕೆ ಮನುಷ್ಯನ ಹತಾಶೆಯ ಪ್ರತೀಕ; ಸೋಲಿನ ಸಂಕೇತ. ಯಾವಾಗ ಬೌದ್ಧಿಕವಾಗಿ ಚಿಂತಿಸಲಾರರೋ, ತಾರ್ಕಿಕ-ತಾತ್ತ್ವಿಕವಾಗಿ ವಾದಿಸಲಾರರೋ ಆಗ ಎದುರಾಳಿಗಳ ನಿಂದನೆಗೆ ತೊಡಗುವುದು ಸ್ವಾಭಾವಿಕ. ಬಸವ ತತ್ತ್ವದ ಪ್ರಭೆ ವಿಸ್ತರಿಸುತ್ತಿರುವುದನ್ನು ಕಂಡು ಸಂಕಟಪಡುತ್ತಿರುವ ವಿದ್ವಾಂಸರಾದ ಜಚನಿಯಂಥವರೇ ಬಸವಾದಿ ಪ್ರಮಥರನ್ನು ನಿಂದಿಸುವ ಕೀಳುಮಟ್ಟಕ್ಕೆ ಇಳಿದಿರುವಾಗ, ಅವರ ಹಿಂಬಾಲಕರಲ್ಲಿ ಒಬ್ಬರಾದ ಚನ್ನಬಸಪ್ಪ ನಮ್ಮ ನಿಂದೆ ಮಾಡುವುದು ತೀರಾ ಆಶ್ಚರ್ಯಕರವಲ್ಲ, ಬಲು ಸ್ವಾಭಾವಿಕ.

ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಹೆಸರನ್ನು ಹೊತ್ತ ಜ. ಚ. ನಿ ಮತ್ತು ಕೆ. ಆರ್. ಚನ್ನಬಸಪ್ಪನವರು ಅವರ ಹೆಸರನ್ನು ಘಂಟಾಕರ್ಣ, ಗಜಕರ್ಣ, ಮುಂತಾಗಿ

ಬದಲಾಯಿಸಿಕೊಂಡರೆ ಒಳ್ಳಿತೇನೋ. ಏಕೆಂದರೆ ಈಗ ಬಸವ ತತ್ತ್ವದ ಎದುರಾಳಿಗಳಾದ ಇವರ ಜೊತೆಗೆ ವಾದ ಮಾಡುವಾಗ ಪೂಜನೀಯರಾದ ಶರಣ ಚನ್ನಬಸವಣ್ಣನ ಹೆಸರನ್ನು ಕಟುವಾಗಿ ಬಳಸಲು ಅಪಾರ ವೇದನೆಯಾಗುತ್ತದೆ.

ದಾವಣಗೆರೆ ಬಸವ ಬಳಗದವರು ಸಹಸ್ರಾರು ಪ್ರತಿ ಅಪಚಾರದ ಪತ್ರಿಕೆ ಮುದ್ರಿಸಿ. ಸಹಸ್ರಾರು ಪ್ರತಿಗಳನ್ನು ವಿತರಿಸಲು ಅಂಚೆ ವೆಚ್ಚ ಹಾಳುಮಾಡಿದರು. ಅದರಲ್ಲಿ ಕಾಣಿಸಿದ ದಿನಾಂಕದಂದು ನಾನಿನ್ನು ಮನೆಯನ್ನು ಬಿಡದ, ಪಿ. ಯು. ಸಿ. ವಿದ್ಯಾರ್ಥಿನಿಯಾಗಿದ್ದೆ. ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮೀಜಿಯವರ ದರ್ಶನ, ಭಾಷಣದ ಅವಕಾಶ ದೊರೆತುದು 1965 ರಲ್ಲಿ, ಚಿತ್ರದುರ್ಗದಲ್ಲಿ ನಡೆದ ತರಳ ಬಾಳು ಹುಣ್ಣಿಮೆಯಲ್ಲಿ. ಹೀಗಾಗಿ ದಾವಣಗೆರೆ ಬಸವ ಬಳಗದವರು ಬಿಡಲು ಹೋದ ಸುಳ್ಳಿನ ಬಾಣ, ಪುನಃ ಅವರಿಗೆ ಬಡಿಯಿತು ಎಂಬುದು ಗಮನಾರ್ಹ!

ಇಂದು ಜನರು ವಿವೇಕಿಗಳು, ವಿದ್ಯಾವಂತರು, ವಿಮರ್ಶಾತ್ಮಕ ಜ್ಞಾನ ಬೆಳೆಸಿಕೊಂಡವರೂ ಆಗಿದ್ದಾರೆ. ಅವರು, ಕೇಳಿದ್ದನೆಲ್ಲ ನಂಬರು. ಯಾರು ವಿಧಾಯಕವಾಗಿ ಕಾರ್ಯಮಾಡುತ್ತಾರೋ ಅವರನ್ನು ನಂಬುತ್ತಾರೆ, ಧನ ಸಹಾಯ ಮಾಡುತ್ತಾರೆ. ಇದನ್ನು ಕಂಡು ಮತ್ಸರದಿಂದ ಯಾರಾದರೂ ಕುದಿದರೆ ಅವರು ತಾವೇ ಸಂಕಟದ ಬೇಗುದಿಯಲ್ಲಿ ಬೇಯಬೇಕು ಅಷ್ಟೆ.

ಜ.ಚ.ನಿ ಯವರು, ಕೆ. ಆರ್. ಚನ್ನಬಸಪ್ಪ ಮುಂತಾದ ಯಾರೇ ಪಂಚಾಚಾರ್ಯವಾದಿಗಳಿರಲಿ ಅವರು ಒಂದು ವಿಷಯ ತಿಳಿದುಕೊಳ್ಳಲಿ. ತಮ್ಮದೊಂದು ವೇದ, ಆಗಮಗಳ ಮೇಲೆ ನಿಂತ ಯಾವುದಾದರೂ ಮತವಿದ್ದರೆ ಅದನ್ನು ಹೇಳಿಕೊಳ್ಳಲಿ. ಬಸವಣ್ಣನವರೇ ಆದಿ ಪ್ರಮಥರಾಗಿ ಆ ಪರಂಪರೆಯ ಶರಣರು ಕೊಟ್ಟ ವಚನಗಳನ್ನು ತಮ್ಮ ತತ್ತ್ವದ ಮಂಡನೆಗೆ ಆಧಾರವಾಗಿ ಬಳಸಿಕೊಳ್ಳದಿರಲಿ. ಜಾತಿವಾದವನ್ನು ಪೋಷಿಸುತ್ತಾ, ಶ್ರೇಣೀಕೃತ ವ್ಯವಸ್ಥೆಯನ್ನು ಪ್ರತಿಪಾದಿಸುವ ಈ ಜನ ಬಸವಾದಿ ಪ್ರಮಥರ ನಿಂದನೆಗೆ ತೊಡಗದೆ ಇರಲಿ. ತಾತ್ತ್ವಿಕ ನಿರ್ದಿಷ್ಟತೆ ಬೆಳೆಸಿಕೊಂಡು ಬಸವ ತತ್ತ್ವಾನುಯಾಯಿಗಳಾದ ಲಿಂಗವಂತರು ಸಮಾಜವನ್ನಿಂದು ಕಟ್ಟಬೇಕಾಗಿದೆ.

ಬಸವಣ್ಣನವರು ಹುಟ್ಟಿದ ಬಾಗೇವಾಡಿ ಕಾರ್ಯಮಾಡಿದ ಕಲ್ಯಾಣ, ಐಕ್ಯರಾದ ಕೂಡಲಸಂಗಮ, ಚನ್ನಬಸವಣ್ಣನವರ ಉಳವಿ, ಸಿದ್ಧರಾಮೇಶ್ವರರ ಸೊಲ್ಲಾಪುರ ಎಲ್ಲವೂ ನಮ್ಮ ಧರ್ಮದ ಕ್ಷೇತ್ರಗಳೇ! ಆದರೆ ಶ್ರೀ ಗುರುವು ಐಕ್ಯವಾದ ಸ್ಥಾನ ಆಧ್ಯಾತ್ಮಿಕ ದೃಷ್ಟಿಯಿಂದ ಮಹತ್ವ ಪೂರ್ಣ ಧರ್ಮಕ್ಷೇತ್ರ. ಇದನ್ನು ಮನಗಂಡ ಬೀದರ ಜಿಲ್ಲೆಯ ಜನರೇ ಈಗ ಸಂಗಮ ಕ್ಷೇತ್ರವನ್ನು ಕಟ್ಟುವ ಬಗ್ಗೆ ಉತ್ಸುಕರಾಗಿದ್ದಾರೆ, ಎಂಬುದನ್ನು ಗುರುತಿಸಬೇಕು.

ನಾವು ಹೇಗೆ ಟ್ರಸ್ಟ್ ಮಾಡಿದ್ದೇವೋ ಹಾಗೆ ಚನ್ನಬಸಪ್ಪನವರೂ ಮಾಡಿ ನಿರ್ದಿಷ್ಟ ಯೋಜನೆ ಹಾಕಿಕೊಂಡು ಕೂಡಲ ಸಂಗಮವನ್ನು ಬೆಳೆಸಲಿ. ಬರೀ ಟೀಕೆ

ಟಿಪ್ಪಣಿ ಮಾಡಿ, ಶರಣ ಮೇಳದ ಸಮಯದಲ್ಲಿ ಕೋಡಂಗಿಯಾಟ ಆಡುವುದನ್ನು ಬಿಟ್ಟು ವಿಧಾಯಕ ಕಾರ್ಯಕ್ರಮ ರೂಪಿಸಲಿ. ಮನುಷ್ಯನ ಬದುಕು ನಶ್ವರ; ಜೀವನ ಪರ್ಯಂತರ ಜೇಡರ ಹುಳು ಬಲೆ ನೇಯ್ದು ಕಸವನ್ನು ಕೊಟ್ಟುಹೋಗುವಂತೆ ಬದುಕನ್ನು ಕಳೆಯದೆ ಇವರು ಸಾರ್ಥಕದ ಕೆಲಸ ಮಾಡುವಂತಾಗಲಿ. ಬಸವ ತತ್ತ್ವಾನುಯಾಯಿಗಳು ನಿರ್ದಿಷ್ಟ ಗುರಿ ಎಡೆಗೆ ಮುನ್ನಡೆಯಲು ಈ ಸೂತ್ರಗಳನ್ನು ನಂಬುವಂತಾಗಲಿ.

1. ಧರ್ಮ ಗುರು – ವಿಶ್ವಗುರು ಬಸವಣ್ಣನವರು
2. ಧರ್ಮ ಸಂಹಿತೆ – ಎಲ್ಲರ ಸಮಾನತೆ ಸಾರುವ ವಚನ ಸಾಹಿತ್ಯ
3. ಧರ್ಮ ಲಾಂಛನ – ಜಾತ್ಯತೀತತೆ ಸಾರುವ ಇಷ್ಟಲಿಂಗ
4. ಧರ್ಮ ಕ್ಷೇತ್ರ – ಬಸವಣ್ಣನವರ ಐಕ್ಯಕ್ಷೇತ್ರ ಕೂಡಲ ಸಂಗಮ
5. ಧರ್ಮ ಧ್ವಜ – ಬಸವ ಮಂತ್ರ ಸಹಿತ ಷಟಸ್ಥಲ ಧ್ವಜ
6. ಧರ್ಮದ ಧ್ಯೇಯ – ಜಾತಿ ವರ್ಣ ವರ್ಗರಹಿತ ಕಲ್ಯಾಣ ರಾಜ್ಯ ನಿರ್ಮಾಣ.

ಬಸವ ಜಯಂತಿ, 28-4-1990 ಆರಂಭವಾದ ನಿತ್ಯ ದಾಸೋಹ ಯೋಜನೆಯ ವಿವರ

ಶರಣ ಬಂಧುಗಳೇ.

ಕೂಡಲ ಸಂಗಮವು ಅತ್ಯಂತ ಮಹತ್ವದ ಕ್ಷೇತ್ರ. ಚಾರಿತ್ರಿಕ ಸಂಗಮೇಶ್ವರ ದೇವಾಲಯವನ್ನು ಹೊಂದಿ, ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋ ಸ್ಥಾನ, ಐಕ್ಯಕ್ಷೇತ್ರವಾಗಿ, ಕೃಷ್ಣ–ಮಲಪ್ರಭಾ ನದಿಗಳ ದಿವ್ಯ ಸಂಗಮವಾಗಿ ಕಂಗೊಳಿ ಸುತ್ತಿರುವ ದಿವ್ಯ ಕ್ಷೇತ್ರ. ನಾಡಿನಾದ್ಯಂತದಿಂದ ಸದ್ಭಕ್ತರನ್ನು ಆಕರ್ಷಿಸುತ್ತಿದೆ.

ಬಂದ ಯಾತ್ರಿಕರು, ಪ್ರವಾಸಿಗರಿಗೆ ವಸತಿ–ಊಟಗಳ ಸೌಲಭ್ಯವಿಲ್ಲದ್ದನ್ನು ಕಂಡು ಬಸವ ಧರ್ಮಪೀಠ ಟ್ರಸ್ಟ್ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ. ದಾನಿಗಳಿಂದ 1111 ರೂ ಗಳನ್ನು ದೇಣಿಗೆಯಾಗಿ ಸಂಗ್ರಹಿಸಿ ಅದನ್ನು ಪುದುವಟ್ಟನ್ನಾಗಿ ಇಟ್ಟು, ಅದರ ಬಡ್ಡಿಯ ಹಣದಲ್ಲಿ ದಾಸೋಹವನ್ನು ಏರ್ಪಡಿಸುವುದೇ ಈ ಯೋಜ ನೆಯ ಗುರಿ. ದಾನಿಗಳು ಏನಾದರೂ ವಿಶೇಷ ಹಿನ್ನೆಲೆ ಇರುವ ಒಂದು ದಿನಾಂಕವನ್ನು ಸೂಚಿಸಬಹುದು; ಅಥವಾ ನಮ್ಮ ಆಯ್ಕೆಗೇ ಬಿಟ್ಟರೆ ಅನುಕೂಲವಾದ ದಿನಾಂಕವನ್ನು ನಾವೇ ಆಯ್ಕೆ ಮಾಡಿಕೊಳ್ಳುವೆವು. ಆ ದಿನಾಂಕಕ್ಕೆ ಮೊದಲು ಸೂಚನಾ ಪತ್ರ ಕಳಿಸ ಲಾಗುವುದು. ದಾನಿಗಳು ಬಂದು ಭಾಗವಹಿಸಿದರೆ ಬಹಳ ಸಂತೋಷ. ಅಕಸ್ಮಾತ್ ದಾನಿಗಳಿಗೆ ಬರಲು ಆಗದೆ ಇದ್ದರೆ, ಪ್ರಸಾದವನ್ನು ಅಂಚೆಯ ಮೂಲಕ ಕಳಿಸಿಕೊಡಲಾ ಗುವುದು. ಅವರ ಹೆಸರಿನಲ್ಲಿ ಪ್ರವಾಸಿಕರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗುವುದು.

ನಿತ್ಯ ದಾಸೋಹ ಯೋಜನೆಯ ಅನ್ವಯ ದೇಣಿಗೆಯನ್ನು ಸಂಗ್ರಹಿಸಿ. ಒಂದು ವರ್ಷ ವಾಗುವವರೆಗೂ ಯೋಜನೆ ಆರಂಭಿಸಲು ಕಾಯಲಾಯಿತು. ಪ್ರಸಾದವನ್ನು ಸಿದ್ಧಪಡಿಸಲು ಪಾತ್ರೆಗಳು ಪಡುಗಗಳನ್ನು ಹೊಂದಿಸಿಕೊಳ್ಳಲೂ ಸಮಯಾವಕಾಶ ಬೇಕಾಯಿತು. ಇನ್ನೂ ಅಡಿಗೆ ಮಾಡಲು, ಪ್ರಸಾದ ನಿಲಯಕ್ಕಾಗಿಯೂ ಶಾಶ್ವತ ಕಟ್ಟಡಗಳು ಆಗಿಲ್ಲವಾದರೂ ತೆಂಗಿನಗರಿಯ ಶೆಡ್ಡನ್ನು ನಿರ್ಮಿಸಿ ಅದರಲ್ಲಿಯೇ ಯೋಜ ನೆಯನ್ನು ಆರಂಭಿಸಲಾಗುತ್ತಿದೆ. ಹಣ ಸಂಗ್ರಹವಾದಂತೆಲ್ಲ ಪಾಕ ಗೃಹ–ಪ್ರಸಾದ ನಿಲಯಗಳನ್ನು ನಿರ್ಮಿಸಲಾಗುವುದು.

ದಾಸೋಹದ ವಿವರ

ಬೆಳಿಗ್ಗೆ 9 ರಿಂದ 11 ರವರೆಗೆ ಉಪಾಹಾರ

11 ರಿಂದ 3 ರವರೆಗೆ ಊಟ.

ರಾತ್ರಿ 7 ರಿಂದ 9-30 ರವರೆಗೆ ಊಟ.

ನಿಗದಿತ ವೇಳೆಯೇ ಅಲ್ಲದೆ ಬೇರೆ ಸಮಯದಲ್ಲಿ ಬಂದರೂ ಸಮಯಾವಕಾಶ ನೀಡಿದರೆ ಸಿದ್ಧಪಡಿಸಿಕೊಡಲಾಗುವುದು. ಸದ್ಭಕ್ತರು ಬರುತ್ತಿದ್ದಂತೆಯೇ ಎಷ್ಟು ಜನರಿಗೆ ಪ್ರಸಾದದ ಅಗತ್ಯವಿದೆ ಎಂದು ಲಿಸ್ಟ್ ಬರೆಸಿ ಬಿಟ್ಟರೆ, ಸಮಯಕ್ಕೆ ಸರಿಯಾಗಿ ಪ್ರಸಾದವನ್ನು ಸಿದ್ಧಪಡಿಸಲಾಗುವುದು.

ದಾನಿಗಳ ನೆರವಿನಿಂದ ಅತಿಥಿಗೃಹವೂ ತಯಾರಾಗುತ್ತಿದ್ದು ಆದಷ್ಟು ಬೇಗನೆ ವಸತಿ ವ್ಯವಸ್ಥೆಯನ್ನು ಮಾಡಿಕೊಡಲು ಶ್ರಮಿಸುತ್ತಿದ್ದೇವೆ. ಹೆಚ್ಚಿನ ವಿವರಗಳಿಗೆ ಬರೆಯಿರಿ.

ಬಸವ ಧರ್ಮ ಪೀಠ (ರಿ,) **ದೂರವಾಣಿ : 38**
ಮಹಾಮನೆ ಆವರಣ, ಕೂಡಲಸಂಗಮ–587115
ತಾ–ಹುನಗುಂದ, ಜಿ–ಬಿಜಾಪುರ.

ಬಸವ ಧರ್ಮ ಸಂಸತ್

ಸದಸ್ಯರ ಸಂಖ್ಯೆ ಹೆಚ್ಚಿಸುವ ಕುರಿತು.

ಬಸವಾದಿ ಪ್ರಮಥರ ತತ್ತ್ವದ ಚಿಂತನ-ಮಂಥನ ಮಾಡಲು, ಮತ್ತು ಸಾಮಾಜಿಕ–ಧಾರ್ಮಿಕ–ಸಾಂಸ್ಕೃತಿಕ–ರಾಷ್ಟ್ರೀಯ ಸಮಸ್ಯೆ ಕುರಿತು ಚಿಂತನೆ ಮಾಡಲು 52 ಜನ ಶರಣ ಸದಸ್ಯರಿಂದ ಕೂಡಿದ ಬಸವ ಧರ್ಮ ಸಂಸತ್ ಅನ್ನು ರಚಿಸಲಾಗಿದೆಯಷ್ಟೆ. ಬಸವ ಧರ್ಮ ಸಂಸತ್ ಸದಸ್ಯರ ಪ್ರಥಮ ಸಭೆಯು ಮಾರ್ಚ್ 11 ಮತ್ತು 12 ರಂದು ಯಶಸ್ವಿಯಾಗಿ ನಡೆಯಿತು. ಚರ್ಚೆಯ ವಿವರಗಳನ್ನು ಮುಂದಿನ ಅಂದರೆ ಮೇ ತಿಂಗಳ ಕಲ್ಯಾಣ ಕಿರಣದಲ್ಲಿ ಕೊಡಲಾಗುವುದು.

ಸದಸ್ಯರ ಸಂಖ್ಯೆಯನ್ನು 52 ರಿನದ 101ಕ್ಕೆ ಏರಿಸಲಿದ್ದೇವೆ. ನಾಲ್ಕನೆಯ ಶರಣ ಮೇಳಕ್ಕೆ 101 ಸದಸ್ಯರು ಪ್ರತಿಜ್ಞೆ ಕೈಗೊಳ್ಳುವರು. ಹಾಲಿ ಸದಸ್ಯರು ಬಸವ ತತ್ತ್ವ ನಿಷ್ಠರ ಹೆಸರನ್ನು ಪತ್ರ ಮುಖೇನ ಸೂಚಿಸಬಹುದು. ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆಮಾಡಿ ಅಕ್ಟೋಬರ ತಿಂಗಳಲ್ಲಿ ನಡೆಯುವ ಭಕ್ತಿಪಕ್ಷ ಸಮ್ಮೇಳನಕ್ಕೆ ನೂತನ ಸದಸ್ಯರನ್ನು ಆಹ್ವಾನಿಸುತ್ತೇವೆ. ಈಗಿನ ಸದಸ್ಯರೇ ಅಲ್ಲದೇ ರಾಷ್ಟ್ರೀಯ ಬಸವ ದಳದವರೂ ಹೆಸರುಗಳನ್ನು ಸೂಚಿಸಬಹುದು.

ಬಸವ ತತ್ತ್ವಪರಿಷತ್ತಿನ ಆಶ್ರಯದಲ್ಲಿ ಬಸವ ತತ್ತ್ವದ ಪರೀಕ್ಷೆಗಳು

ಬಸವ ತತ್ತ್ವ ಪರಿಷತ್ತು ನಡೆಸುವ 1989-1990ನೆಯ ಇಸವಿಯ ಕೆಳಕಂಡ ಪರೀಕ್ಷೆಗಳನ್ನು ಆಗಸ್ಟ್ ತಿಂಗಳಿನಲ್ಲಿ ನಡೆಸಲಿದ್ದು, ಕೆಲವು ವಿವರಗಳು ಹೀಗಿವೆ.

ಶಾಲೆ ಕಾಲೇಜುಗಳ ವಿದ್ಯಾರ್ಥಿಗಳಿಗೂ ಅನುಕೂಲವಾಗುವಂತೆ ಆಗಸ್ಟ್ ತಿಂಗಳಿನಲ್ಲಿ ಪರೀಕ್ಷೆಗಳನ್ನು ನಡೆಸಬೇಕೆಂದು ಬಹಳ ಜನರ ಅಪೇಕ್ಷೆಯಾದ ಕಾರಣ ಆಗಸ್ಟ್ 11 ಮತ್ತು 12ನೆಯ ದಿನಾಂಕಗಳಂದು ಪರೀಕ್ಷೆಗಳನ್ನು ನಡೆಸಲಾಗುವುದು.

1. ಬಸವ ತತ್ತ್ವ ಪ್ರವೇಶ – ಮೊದಲನೆಯ ಪರೀಕ್ಷೆ
   ಒಟ್ಟು ಅಂಕಗಳು 200, ಪ್ರಶ್ನೆಪತ್ರಿಕೆಗಳು 2
2. ಬಸವ ತತ್ತ್ವ ಪರಿಚಯ – ಎರಡನೆಯ ಪರೀಕ್ಷೆ
   ಒಟ್ಟು ಅಂಕಗಳು 300, ಪ್ರಶ್ನೆಪತ್ರಿಕೆಗಳು 3
3. ಬಸವ ತತ್ತ್ವ ಪ್ರವೀಣ – ಮೂರನೆಯ ಪರೀಕ್ಷೆ
   ಒಟ್ಟು ಅಂಕಗಳು 450, ಪ್ರಶ್ನೆಪತ್ರಿಕೆಗಳು 4
4. ಬಸವ ತತ್ತ್ವ ಪ್ರಕಾಶ – ನಾಲ್ಕನೆಯ ಪರೀಕ್ಷೆ
   ಒಟ್ಟು ಅಂಕಗಳು 550, ಪ್ರಶ್ನೆಪತ್ರಿಕೆಗಳು 5
5. ಬಸವ ತತ್ತ್ವ ಭಾಸ್ಕರ – ಐದನೆಯ ಪರೀಕ್ಷೆ
   ಒಟ್ಟು ಅಂಕಗಳು 600, ಪ್ರಶ್ನೆಪತ್ರಿಕೆಗಳು 6

ಈ ಪರೀಕ್ಷೆಗಳಿಗೆ ಕುಳಿತುಕೊಳ್ಳಲು ಅರ್ಜಿ ಸಲ್ಲಿಸಲು ಕೊನೆಯ ದಿ. 20-7-1990

ಪರೀಕ್ಷೆಗಳನ್ನು ನಡೆಸಲು, ತರಬೇತಿ ನೀಡಲು ಇಚ್ಛಿಸುವವರೂ ಅರ್ಜಿಯನ್ನು ಸಲ್ಲಿಸಬೇಕು. ವಿವರವಾದ ನಿಯಮಾವಳಿಗೆ ಕೆಳಗಿನ ವಿಳಾಸಕ್ಕೆ ಪತ್ರ ವ್ಯವಹಾರ ಮಾಡಬೇಕು.

ಶರಣೆ· ಶೋಭಾದೇವಿ ಕಲ್ಯಾಣಪ್ಪ ಪರಮಾದಿ
ಬಸವ ಚೈತನ್ಯ, ಬಸವನಗರ, ಹೆಗ್ಗೇರಿ ಕಾಲನಿ ಬಳಿ,
ಶ್ರೀ ಮುರ್ಡೇಶ್ವರ ಸಿರಾಮಿಕ್ಸ್ ಫ್ಯಾಕ್ಟರಿ ಬಳಿ
ಪೋ. ಹುಬ್ಬಳ್ಳಿ ಜಿಲ್ಲಾ–ಧಾರವಾಡ

ವಿಶೇಷ ಸೂಚನೆ :– ರಾಷ್ಟ್ರೀಯ ಬಸವ ದಳಗಳ ಕಾರ್ಯಕರ್ತರು ಹೆಚ್ಚು ಜನ ಪರೀಕ್ಷಾರ್ಥಿಗಳನ್ನು ಪರೀಕ್ಷೆಯಲ್ಲಿ ಭಾಗಿಗಳಾಗುವಂತೆ ಮಾಡಬೇಕು; ಸಾಧ್ಯವಾದರೆ ತರಬೇತಿ ನೀಡುವ ತರಗತಿಗಳನ್ನು ನಡೆಸಬೇಕು.

—ಮಾತಾಜಿ

ಕಲ್ಯಾಣ ಕಿರಣ ಮಾಸಪತ್ರಿಕೆಗೆ 200 ರೂ ಗಳನ್ನು ಸಲ್ಲಿಸಿ ಆಜೀವ ಸದಸ್ಯರಾದವರ ಯಾದಿ

(ಜನವರಿ 90ರ ಸಂಚಿಕೆಯಿಂದ ಮುಂದುವರಿದುದು)

ಕ್ರಂ. ಸಂ.	ಹೆಸರು	ಊರು
	ಶರಣರುಗಳಾದ :	
3464	ಎಸ್. ವಿ. ಅವಜಿ	ಸಿಂಧಗಿ
3465	ಉಮಾದೇವಿ ಶಂಕರ ಪೆದರಾವ್	ಅಲ್ಲಾಪುರ (ಆ. ಪ್ರ.)
3466	ಡಿ. ವೀರಪ್ಪ	ಕಂಪ್ಲಿ
3467	ಎಂ. ಎಸ್. ಶರಭಣ್ಣ	ಸದಾಶಿವನಗರ
3468	ಎಸ್. ಎನ್. ಪರಮೇಶಯ್ಯ	ಬಸವನಗುಡಿ
3469	ರಾಜಮ್ಮ w/o ಜಯಪ್ಪ	ಚಿಕ್ಕಬಾಗಿಲು
3470	ಡಿ. ಎಸ್. ಮರಳಪ್ಪನವರು	ಧಾರವಾಡ
3471	ಎಸ್. ಸಿ. ಗುಮ್ಮಗೋಳ	ಶುಕ್ರವಾರಪೇಟೆ
3472	ಶೇಖರಪ್ಪ ಗೂಳೆಪ್ಪ ಹುಬ್ಬಳ್ಳಿ	ರಾಯಪುರ
3473	ಡಾ॥ ಸಿ. ಡಿ. ಲಕ್ಕಣ್ಣನವರು	ಧಾರವಾಡ
3474	ಅಣ್ಣಪ್ಪ ಕಾಶಪ್ಪ ಕಾಮೋಜಿ	ನಾರಾಯಣಪುರ
3475	ಎಸ್. ವೈ. ಮೇಲಿನಮನಿ	ರಜತಗಿರಿ
3476	ಸಿದ್ದಪ್ಪ ಶಿವಪ್ಪ ಲಕ್ಕಣ್ಣನವರ	ರಾಯಪುರ
3477	ಅಶೋಕ ಎಂ. ಕತ್ತಿಶೆಟ್ಟಿ	ಧಾರವಾಡ
3478	ಪ್ರೇಮ ಎಂ. ಹೊರಟ್ಟಿ	,,
3479	ರಮೇಶ್ ಯಲ್ಲಪ್ಪ	ಅಲಗವಾಡಿ
3480	ಎಂ. ಸಿ. ಗುರುಸ್ಥಳಮಠ	ಮಂಗಳವಾರ ಪೇಟೆ
3481	ಡಿ. ಬಿ. ಮೇಟಿ	ಮದಿಹಾಳ
3482	ಬಿ. ಆರ್. ಪಾಟೀಲ	ಧಾರವಾಡ
3483	ಗುರುಪಾದ ಮರಿಯಪ್ಪ ಬೆಟಗೇರಿ	,,
3484	ಮಹಾರುದ್ರಪ್ಪ ಚನ್ನಪ್ಪ ಕಿನ್ನಾಳ	ನಾರಾಯಣಪುರ
3485	ಸಿ. ಕೆ. ಪಾಟೀಲ	ಹೊಸಯಲ್ಲಾಪುರ
3486	ಎಸ್. ಸಿ. ಮಘಗಿ	ಸಪ್ತಾಪುರ
3487	ಎಸ್. ಬಿ. ಪಾಟೀಲ	ಹೊಸಯಲ್ಲಾಪುರ
3488	ದ್ಯಾಮನಗೌಡ ಯಲ್ಲಪ್ಪಗೌಡ ಮರಿಗೌಡರ	ಧಾರವಾಡ

ಕ್ರ. ಸಂ.	ಹೆಸರು	ಊರು
	ಶರಣರುಗಳಾದ :	ಧಾರವಾಡ
3489	ಬಿ. ಎಚ್. ಬೆಳಲದವರ	,,
3490	ವೀರಣ್ಣ ಗುರುಪಾದಪ್ಪ ಜಮನಾಳ	,,
3491	ಪಿ. ಎಂ. ಪಾಟೀಲ	,,
3492	ಶಶಿಧರ. ಕೆ. ತೋರಗಲ್ಲಮಠ	ವಿದ್ಯಾಗಿರಿ
3493	ಎಸ್. ಜಿ. ದೊಡ್ಡವಾಡ	ಗಾಂಧಿನಗರ
3494	ವಿಜಯಲಕ್ಷ್ಮಿ ಕಡ್ಡಿ	ವಿದ್ಯಾಗಿರಿ
3495	ವೀ. ಮ. ವಿಜಾಪುರ	ಧಾರವಾಡ
3496	ಎಂ. ಎ. ಮಠಪತಿ	,,
3497	ಡಾ॥ ನಾಗಪ್ಪ ಚನ್ನಬಸಪ್ಪ ಹುಲಮನಿ	,,
3498	ಡಾ॥ ಮೂಡಲಗಿರಿ	,,
3499	ಆರ್. ನಿರ್ಮಲಾ, ಎ. ಪಿ. ರುದ್ರಪ್ಪ	,,
3500	ಮಡಿವಾಳಪ್ಪ ಚಂದ್ರಶೇಖರಪ್ಪ ಕಲಬುರ್ಗಿ	ಸೈದಾಪುರ
3501	ಸುರೇಶ ಸಿದ್ಧಲಿಂಗಪ್ಪ ಮೇಸ್ತ್ರಿ	ಹುಬ್ಬಳ್ಳಿ
3502	ಬಿ. ಬಸಣ್ಣ	ಧಾರವಾಡ
3503	ಎಂ. ಜಿ. ಯಮಕನಮರಡಿ	ನಾರಾಯಣಪುರ
3504	ಎಸ್. ಜಿ. ಜವಳಿ	ಎಸ್. ಎಸ್. ಪುರಂ, ತುಮಕೂರು
3505	ಟಿ. ಎಸ್. ಸಿದ್ಧಪ್ಪ	ಚಾಮರಾಜನಗರ
3506	ಎಸ್. ಜಿ. ಧಾರವಾಡ	ಮಂಜುನಾಥಪುರ
3507	ಎಸ್. ಪಿ. ಹಿರೇಮಠ	ಹುಬ್ಬಳ್ಳಿ
3508	ಜಂಬಣ್ಣ ಗಂಗಾಧರಪ್ಪ	ಹುಂಡಸಿ
3509	ಈಶ್ವರಪ್ಪ ಕೋಂ ಪಾರ್ವತಮ್ಮ ಕೌದಿ ಶಟ್ಟರು	ಜಯನಗರ
3510	ವಿ.ಎಂ. ಗಂಗಣ್ಣನವರು	ಧಾರವಾಡ
3511	ಫಕೀರಪ್ಪ ತಿರಕಪ್ಪ ಭಾವಿಕಟ್ಟಿ	,,
3512	ಜಿ. ವಿ. ಕೋಳಿವಾಡ	ಧಾರವಾಡ
3513	ರೇಣುಕಾ. ಎ. ಅರ್ಜುನಾಗಣೂರ	ಚಂದನಮಟ್ಟಿ
3514	ಟಿ. ಸಿ. ಮೊರಬದ	ರಜತಗಿರಿ
3515	ಎಸ್. ಎಚ್. ಪಾಟೀಲ	,,
3516	ಗುರುಮೂರ್ತಿ ಬಸಯ್ಯ	ಬಿಜಾಪುರ
3517	ಎಸ್. ಎಸ್. ಹಿರಂಡಗಿ	ಧಾರವಾಡ
3518	ಗಿರಿಜಮ್ಮ ವೀರಸಂಗಪ್ಪ ಹೂಸಮನಿ	

ಕ್ರ. ಸಂ.	ಹೆಸರು	ಊರು
	ಶರಣರುಗಳಾದ :	
3519	ಬಸವರಾಜ ಹೆಬ್ಬಳ್ಳಿ	,,
3520	ರುದ್ರಪ್ಪ ಅನಂತಪ್ಪ ದಾಸ್ತಿಕೊಪ್ಪ	ಧಾರವಾಡ
3521	ನಾಗನಗೌಡ ಎಲ್ಲಪ್ಪಗೌಡ ಚಿಕ್ಕನಗೌಡ್ರ	ತಿಮ್ಮಾಪುರ
3522	ಸಾವಿತ್ರಮ್ಮ ಶಿವಪ್ಪ ಮಲ್ಲಾಪುರ	ಧಾರವಾಡ
3523	ಶ್ರೀಮತಿ ನೀಲಾಂಬಿಕಾದೇವಿ ಕೋಂ- ಶಿವರಾಯಪ್ಪ ಶೀಲವಂತ	ಕಲಘಟಗಿ
3524	ಬಿ. ಬಿ. ತೆಗೂರು	ಅಳಣಾವರ
3525	ಅಣ್ಣಪ್ಪ ಬಸಪ್ಪ ಕುಂಬಾರ	ಧಾರವಾಡ
3526	ಆರ್. ಎಂ. ತೋಟದ	ಧಾರವಾಡ
3527	ದೊಡ್ಡಬಸಪ್ಪ ಚನ್ನಬಸಪ್ಪ ಅಕ್ಕಿಸಂತಿ	ಕುಂದಗೋಳ
3528	ಸುಭಾಷ್‌ಚಂದ್ರ ಜಿ. ಖಿಪಾಟೆ	ಬಳ್ಳಾರಿ
3529	ದಾಕ್ಷಾಯಣಿ C/o ಅಮರೇಶ್ವರ ರಾಣಿ	,,
3530	ಸಂಗನಗೌಡ ಗೌಡಪ್ಪಗೌಡ ಖಾನಗೌಡ್ರು	ಧಾರವಾಡ
3531	ಬಸವಣ್ಣೆಪ್ಪ ಬ. ಹಂಜಿ	,,
3532	ವೀರಪ್ಪ ಚನ್ನಬಸಪ್ಪ ಹಳಿಯೋಳ	ನಿಗದಿ
3533	ಶ್ರೀ ನಂದೀಶ ಶಂಕರಗೌಡ ಪಾಟೀಲ	ಖಾನಾಪುರ (ಬೆಳಗಾಂ)
3534	ಶ್ರೀಮತಿ ಗಿರಿಜಾಸುಬ್ಬಣ್ಣ ಮೈಸೂರು	ಧಾರವಾಡ
3535	ಶ್ರೀಮತಿ ಲೀಲಾ ಚ. ಪಾಟೀಲ	,,
3536	ಶ್ರೀಮತಿ ನೀಲಮ್ಮ ಬಸವರಾಜ ಬೆಲ್ಲದ	ಸವದತ್ತಿ

ಆಯಿತ್ತು ಬಸವಾ ನಿನ್ನಿಂದ ಗುರುಸ್ವಾಯತವೆನಗೆ
ಆಯಿತ್ತು ಬಸವಾ ನಿನ್ನಿಂದ ಲಿಂಗಸ್ವಾಯತವೆನಗೆ
ಆಯಿತ್ತು ಬಸವಾ ನಿನ್ನಿಂದ ಜಂಗಮ ಸ್ವಾಯತವೆನಗೆ
ಆಯಿತ್ತು ಬಸವಾ ನಿನ್ನಿಂದ ಪ್ರಸಾದ ಸ್ವಾಯತವೆನಗೆ
ಇಂತೀ ಚತುರ್ವಿಧ ಸ್ವಾಯತವ ನೀನೇ
ಮಾಡಿದೆಯಾಗಿ ಗುಹೇಶ್ವರ ಲಿಂಗಕ್ಕೆ
ವಿಳಾಸವಾದೆಯಲ್ಲೇ ಸಂಗನ ಬಸವಣ್ಣ.

ಬಸವ ಧರ್ಮ ಪೀಠದಲ್ಲಿ ನಿರ್ಮಾಣವಾಗುತ್ತಿರುವ ಅಕ್ಕನಾಗಲಾಂಬಿಕಾ ಅತಿಥಿಗೃಹದ ದಾನಿಗಳಲ್ಲಿ ಮನವಿ

ಶರಣ ಬಂಧುಗಳೇ,

ಬಸವ ಧರ್ಮ ಪೀಠ ಟ್ರಸ್ಟ್ ಕೂಡಲ ಸಂಗಮದ ಮಹಾಮನೆ ಆವರಣದಲ್ಲಿ ಬಂದ ಯಾತ್ರಾರ್ಥಿಗಳ ಸೌಲಭ್ಯಕ್ಕಾಗಿ ಅತಿಥಿಗೃಹವನ್ನು ಸಿದ್ಧಪಡಿಸುತ್ತಿದ್ದು, ಇದಕ್ಕೆಂದು ಅನೇಕ ದಾನಿಗಳು ನೆರವು ನೀಡಿರುವುದು ಸರಿಯಷ್ಟೆ.

ಸಿಂಗಲ್ ಕೋಣೆ 10×10½ ಅಡಿಪಾಯದಾಗಿದ್ದು, ಇದಕ್ಕೆ ಹೊಂದಿಕೊಂಡಂತೆ ಲ್ಯಾವೆಟ್ರಿ-ಬಾತ್‌ರೂಂ ಪ್ರತ್ಯೇಕವಾಗಿ ಎಲ್ಲ ಕೋಣೆಗೂ ಇಡಲಾಗಿದೆ. ಸಿಂಗಲ್ ಕೋಣೆ ಗೆಂದು ದಾನಿಗಳಿಂದ 15000/- (ಹದಿನೈದು ಸಾವಿರ) ರೂಗಳಂತೆ ನೆರವು ಪಡೆಯ ಲಾಗಿದೆ. ಸಿಂಗಲ್ ಕೋಣೆ, ಹೊಂದಿಕೊಂಡ ಬಾತ್‌ರೂಂ-ಲ್ಯಾವೆಟ್ರಿಗಳೇ ಅಲ್ಲದೆ ಮುಂಭಾಗದಲ್ಲಿ 17×8 ಅಡಿಯ ವರಾಂಡವನ್ನು ಹೊಂದಿದೆ. ಹೀಗಾಗಿ ಒಂದು ಸಿಂಗಲ್ ಕೋಣೆ 4 ಚದರ ವೆಚ್ಚವನ್ನು ನಿರೀಕ್ಷಿಸುತ್ತದೆ. ಕನಿಷ್ಟ ಪಕ್ಷ 1 ಚದರಕ್ಕೆ 20 ಸಾವಿರ ರೂಪಾಯಿ ಈಗಿನ ಕಾಲದಲ್ಲಿ ವೆಚ್ಚ ಆಗುವ ಸಾಧ್ಯತೆ ಇರುವುದು ಎಲ್ಲ ಕಟ್ಟಡ ನಿರ್ಮಾಪಕರಿಗೂ ತಿಳಿದ ವಿಷಯವೇ. ಹೀಗಾಗಿ ದಾನಿಗಳಿಂದ ಪಡೆದಿರುವ 15000/- ರೂ. ಸಿಂಗಲ್ ಕೋಣೆ ಕಟ್ಟಡ ನಿರ್ಮಾಣಕ್ಕೆ ಎಷ್ಟೂ ಸಾಕಾಗುತ್ತಲಿಲ್ಲ. ಒಬ್ಬ ದಾನಿಯು 15000/– ಕೊಟ್ಟರೆ ಅದರೊಡನೆ ಬಸವ ಧರ್ಮ ಪೀಠ ಟ್ರಸ್ಟ್ 45000/- ರೂಗಳನ್ನು ಒದಗಿಸಬೇಕಾಗುತ್ತದೆ.

ಇನ್ನಿತರ ಯೋಜನೆಗಳಿಗೆ ಅಂದರೆ ದಾಸೋಹ ನಿಧಿ ಮತ್ತು ಧರ್ಮಗ್ರಂಥ ನಿಧಿಗೆ ದೇಣಿಗೆ ನೀಡಿರುವವರ ಹಣವನ್ನು ಆಯಾನಿಧಿಗೇ ವಿನಿಯೋಗಿಸಬೇಕಾಗಿದೆ. ಹೀಗಾಗಿ ಅತಿಥಿ ಗೃಹ ನಿರ್ಮಾಣಕ್ಕೆ ಹಣದ ಕೊರತೆಯಾಗಿದೆ. ಸ್ಲ್ಯಾಬ್ ಮಟ್ಟಕ್ಕೆ ಬಂದು ಕೆಲಸವು ಸ್ಥಗಿತಗೊಂಡಿದೆ. ಈ ಸಮಸ್ಯೆಗೆ ಪರಿಹಾರ ಹುಡುಕಲು ದಿ. 26-4-90 ರಂದು ಇಂಜಿನಿಯರರ ಸಭೆಯನ್ನು ಕರೆಯಲಾಗಿದ್ದಿತ್ತು.

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರ ದಿವ್ಯ ಸನ್ನಿಧಿಯಲ್ಲಿ ಸಭೆಯು ನಡೆಯಿತು. ಬೆಂಗಳೂರಿನ ನಿವೃತ್ತ ಸೂಪರಿಂಟೆಂಡೆಂಟ್ ಇಂಜಿನಿಯರ್ ಶ್ರೀ ಪುಟ್ಟರುದ್ರರವರು, ಆಂಧ್ರದ ಆದವಾನಿಯ ಶ್ರೀ ಮಲ್ಲಿಕಾರ್ಜುನಗೌಡರು, ಮಹಾರಾಷ್ಟ್ರದ ಧೂದಗಂಗಾನಗರದ ಶ್ರೀ ರಾಜಣ್ಣನವರುಗಳಿಂದ ಕೂಡಿದ ಎಂಜಿನಿಯರರ ಸಮಿತಿಯೊಂದನ್ನು ಮಾಡಲಾಯಿತು. ಇವರು ಕೆಳಕಂಡಂತೆ ವಿಷಯಗಳನ್ನು ಚರ್ಚಿಸಿ ನಿರ್ಧರಿಸಿದರು.

ಕಟ್ಟಡ ಕೆಲಸವು ಉತ್ಕೃಷ್ಟ ಮಟ್ಟದ ವಸ್ತುಗಳ ಬಳಕೆಯಿಂದಾಗಿ, ಕನಿಷ್ಟ ಪಕ್ಷ ಒಂದು ಚದರಕ್ಕೆ 5000 ರೂಗಳಿಂದ 20000 ರೂಗಳವರೆಗೆ ವೆಚ್ಚವನ್ನು ನಿರೀಕ್ಷಿಸುತ್ತದೆ. ಹೀಗಾಗಿ ಒಂದು ಸಿಂಗಲ್ ಕೋಣೆ, ವೆರಾಂಡ, ಸ್ನಾನಗೃಹ ಶೌಚಾಲಯಗಳ ಸಹಿತವಾಗಿ ನಿರ್ಮಾಣವಾಗಲು 60000 ರೂ. ಬೇಕು. ಅದಕ್ಕಾಗಿ ದಾನಿಗಳು 15000 ರೂಗಳ ಜೊತೆಗೆ ಇನ್ನೂ 15000 ರೂಗಳಷ್ಟನ್ನಾದರೂ ಹಾಕಿದರೆ, ಆಗಲೂ ಅಗತ್ಯ ಬೀಳುವ 30000 ರೂಗಳನ್ನು ಸಂಸ್ಥೆಯು ಸಣ್ಣಪುಟ್ಟ ಕಾಣಿಕೆಗಳ ನೆರವಿನಿಂದ ಭರ್ತಿಮಾಡಬಹುದು.

ಒಂದು ವೇಳೆ ಯಾವುದೇ ಕಾರಣದಿಂದ ದಾನಿಗಳಿಗೆ ಇನ್ನು 15000/- ರೂ ಕೊಡಲು ಸಾಧ್ಯವಿಲ್ಲದಿದ್ದರೆ, ಅಥವಾ ಮನಸ್ಸು ಇಲ್ಲದಿದ್ದರೆ ಅವರು ಇನ್ನೊಬ್ಬ ದಾನಿಗಳ ನೆರವನ್ನು ನಾವು ಪಡೆದುಕೊಳ್ಳಲು ಒಪ್ಪಿಗೆ ನೀಡಬೇಕು. ಆಗ ಒಂದೊಂದು ಕೋಣೆಗೆ ಇಬ್ಬರು ದಾನಿಗಳ ಹೆಸರಿನ ಫಲಕ ಹಾಕಲಾಗುವುದು.

ಇನ್ನು ಮುಂದೆ ಮಾತ್ರ ಸಿಂಗಲ್ ಕೋಣೆ ನಿರ್ಮಾಣಕ್ಕೆ ದೇಣಿಗೆಯಾಗಿ 30000 (ಮೂವತ್ತು ಸಾವಿರ) ರೂಗಳನ್ನು ಮಾತ್ರ ಸ್ವೀಕರಿಸಲಾಗುವುದು. ಆದ್ದರಿಂದ ಈ ಪ್ರಕಟಣೆಯನ್ನು ಓದಿದ ದಾನಿಗಳು ತಮ್ಮ ಅಭಿಪ್ರಾಯವನ್ನು ತೀವ್ರವಾಗಿ ಪತ್ರ ಮುಖೇನವಾಗಿ ತಿಳಿಸಬೇಕು.

ಡಬ್ಬಲ್ ಕೋಣೆ ಕುರಿತು

ಡಬ್ಬಲ್ ಕೋಣೆಯು 11 ಅಡಿ - 16 ಅಡಿಗಳ ವಿಸ್ತಾರದೊಡನೆ ಜೊತೆಗೆ ಸ್ನಾನಗೃಹ-ಶೌಚಾಲಯ-ವೆರಾಂಡಗಳೊಡನೆ ಇನ್ನೊಂದು ಡ್ರೆಸ್ಸಿಂಗ್ ರೂಂ ಹೊಂದಿದೆ. ಹೀಗಾಗಿ ಒಟ್ಟು 6 . ಚದರ ಸ್ಥಳಾವಕಾಶ ಹೊಂದಿರುತ್ತದೆ. ಇದಕ್ಕೆ 15000/– ಚದರದಂತೆ ಹಿಡಿದರೂ 75000 ರೂಗಳು ಆಗುತ್ತದೆ. ಡಬ್ಬಲ್ ಕೋಣೆಗೆ ದಾನಿಗಳಿಂದ 30000/- (ಮೂವತ್ತು ಸಾವಿರ) ಪಡೆಯಲಾಗಿದೆ. ಆದ್ದರಿಂದ ಅವರು ಇನ್ನು 30000 (ಮೂವತ್ತು ಸಾವಿರ) ರೂಗಳಷ್ಟಾದರೂ ನೀಡಿದರೆ ನಾವು ಕಾರ್ಯವನ್ನು ಪೂರೈಸುಲು ಸಾಧ್ಯ. ಇಲ್ಲವೇ ಅವರು ಸಹ ಇನ್ನಿತರ ದಾನಿಗಳ ನೆರವು ಪಡೆಯಲು ಒಪ್ಪಿಗೆ ನೀಡಬೇಕು.

ದಾನಿಗಳು ಸ್ವತಃ ಯಾರೇ ಕಾಂಟ್ರಾಕ್ಟ್‌ದಾರರನ್ನಾದರೂ ಈ ಬಗ್ಗೆ ಕೇಳಬಹುದು. ಉತ್ತಮ ಗುಣಮಟ್ಟದ ಕಟ್ಟಡ ನಿರ್ಮಾಣ ಒಂದು ಚದರಕ್ಕೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ಅವರಿಂದ ತಿಳಿದುಕೊಳ್ಳಬಹುದು. ಆದ್ದರಿಂದ ಡಬ್ಬಲ್ ಕೋಣೆಗೆ ದಾನಿಗಳಿಂದ ಇನ್ನು ಮುಂದೆ 50000 ರೂಗಳನ್ನು ಸ್ವೀಕರಿಸಲಾಗುವುದು.

ಕಟ್ಟಡ ಆರಂಭಿಸಿ, ಸಿಂಗಲ್ ಕೋಣೆಗೆ 15000 ರೂ. ಡಬ್ಬಲ್ ಕೋಣೆಗೆ 30000- ರೂ. ತೆಗೆದುಕೊಳ್ಳುವಾಗಲೂ ನಮಗೆ ಅರಿವು ಇದ್ದಿತು. ಆದರೆ, ಇನ್ನಿತರ ಕಾಣಿಕೆಯಿಂದ ಭರ್ತಿ ಮಾಡಿಕೊಳ್ಳೋಣ ಎಂದು ಭಾವಿಸಿ, ದಾನಿಗಳಿಂದ 15000 ರೂಗಳನ್ನು ಪಡೆದೆವು. ಆದರೆ ಈ ಮೊತ್ತದೊಡನೆ ಭರಿಸಬೇಕಾದ ಮೊತ್ತ ಬಹಳ ವಿರುವುದರಿಂದ ಈ ಮನವಿಯನ್ನು ಮಾಡಬೇಕಾಗಿ ಬಂದಿದೆ. ಪ್ರಕಟಣೆಯನ್ನು ನೋಡಿದ ದಾನಿಗಳು ಬೇಗನೆ ತಮ್ಮ ಅಭಿಪ್ರಾಯ ತಿಳಿಸಬೇಕೆಂದು ಹೃತ್ಪೂರ್ವಕವಾಗಿ ಸೂಚಿಸುತ್ತೇವೆ.

—ಮಾತಾಜಿ, ಕಾರ್ಯಾಧ್ಯಕ್ಷೆ.
ಬಸವ ಧರ್ಮ ಪೀಠ, ಕೂಡಲ ಸಂಗಮ



ಕಲ್ಯಾಣ ಕಿರಣ ಓದುಗರೇ ಗಮನಿಸಿರಿ

ಕಲ್ಯಾಣ ಕಿರಣ ಪತ್ರಿಕೆಯು ಅಂಚೆಯಲ್ಲಿ ಬರುತ್ತಿದ್ದಂತೆಯೇ ನಿಮ್ಮ ಚಂದಾ ಸಂಖ್ಯೆ, ಆಜೀವ ಸದಸ್ಯತ್ವ ಸಂಖ್ಯೆ ಗುರುತು ಮಾಡಿ ಒಂದು ಕಡೆ ಬರೆದು ಇಟ್ಟು ಕೊಳ್ಳಿರಿ. ಸಕಾಲದಲ್ಲಿ ಪತ್ರಿಕೆ ಕೈ ಸೇರದೆ ಇದ್ದಾಗ, ವಿಳಾಸ ತಿದ್ದುಪಡಿ, ಬದಲಾವಣೆ ಮಾಡುವಾಗ ನಿಮ್ಮ ಚಂದಾ ಸಂಖ್ಯೆಯನ್ನು ಬರೆಯಿರಿ. ದಿನ ದಿನಕ್ಕೆ ವೃದ್ಧಿಯಾಗುತ್ತಿರುವ ಚಂದಾದಾರ ಪಟ್ಟಿಯಲ್ಲಿ ಕ್ರಮಸಂಖ್ಯೆಯಿಲ್ಲದೆ ಹುಡುಕುವುದು ಕಷ್ಟಸಾಧ್ಯವಾಗುತ್ತದೆ ಮತ್ತು ಕಾರ್ಯಕರ್ತರ ಸಮಯ ವ್ಯರ್ಥವಾಗುತ್ತದೆ ಎಂಬುದನ್ನು ಮನಗಾಣಿರಿ. ಪತ್ರವ್ಯವಹಾರ ಮಾಡುವಾಗ ಚಂದಾ ಸಂಖ್ಯೆಯೊಡನೆ ಪೂರ್ಣ ವಿಳಾಸವನ್ನೂ ಬರೆಯುವ ಅಭ್ಯಾಸ ಇಟ್ಟುಕೊಳ್ಳಿರಿ.

ಬೀದರ ನಗರದಲ್ಲಿ ವಿಶ್ವಧರ್ಮ ಪ್ರವಚನ

ಪ್ರವಚನ ಪಿತಾಮಹ, ಅಪೂರ್ವ ವಾಗ್ಮಿ, ಕ್ರಾಂತಿಕಾರಿ ಧರ್ಮ ಪ್ರಚಾರಕ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ಪ್ರವಚನವು ಬೀದರ ನಗರದ ಗಣೇಶ ಮೈದಾನದಲ್ಲಿ 9-4-1990 ರಂದು ಅಮೋಘವಾಗಿ ಪ್ರಾರಂಭವಾಗಿದ್ದು; ದಿನದಿನಕ್ಕೂ ಅಧಿಕಧಿಕ ಸಂಖ್ಯೆಯಲ್ಲಿ ಶ್ರೋತೃಗಳನ್ನು ಆಕರ್ಷಿಸುತ್ತಲಿದೆ.

ಆದವಾನಿ ನಗರದಲ್ಲಿ ಪ್ರವಚನ

ಆಂಧ್ರ ಪ್ರದೇಶದ ಪ್ರಮುಖ ಪಟ್ಟಣವಾದ ಆದವಾನಿ ನಗರದಲ್ಲಿ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರ ಪ್ರವಚನವು 9-3-90 ರಂದು ಪ್ರಾರಂಭವಾಗಿ ದಿನಾಂಕ 15-4-1990 ರಂದು ಮಂಗಲಗೊಂಡಿತು. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು 12-4-90 ರಂದುಥ ಆದವಾನಿ ನಗರಕ್ಕೆ ಆಗಮಿಸಿ ಪ್ರವಚನದಲ್ಲಿ ಭಾಗಿಗಳಾಗಿ ದರ್ಶನ, ಆಶೀರ್ವಚನ, ಪ್ರವಚನ ನೀಡಿದರು.

[ಆದವಾನಿ ನಗರದಲ್ಲಿ ಧನ ಸಹಾಯ ಮಾಡಿರುವ ಶರಣ ಬಂಧುಗಳ ಹೆಸರನ್ನು ಮೇ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟಿಸಿರುವ ದಾನಿಗಳ ಯಾದಿ ಬಹಳ ದೊಡ್ಡದಾಗಿರುವ ಕಾರಣ, ಆದವಾನಿ ಮತ್ತು ಇನ್ನಿತರ ಊರುಗಳ ದಾನಿಗಳ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅನ್ಯಥಾ ಭಾವಿಸಬಾರದು.]

ಮುಳವಾಡದಲ್ಲಿ ಪ್ರವಚನ ಕಾರ್ಯಕ್ರಮ

ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೋಕಿನ ಮುಳವಾಡ ಗ್ರಾಮದಲ್ಲಿ ಜನರ ಒತ್ತಾಯಪೂರ್ವಕ ಬೇಡಿಕೆಯ ಮೇರೆಗೆ ಪೂಜ್ಯ ಗಂಗಾಮಾತಾಜಿಯವರ ಪ್ರವಚನ ಕಾರ್ಯಕ್ರಮವು 19-4-1990 ರಂದು ಪ್ರಾರಂಭವಾಗಿದ್ದು, ಅಪೂರ್ವವಾಗಿ ಮುಂದುವರಿಯುತ್ತಿದ್ದು ಅಗಾಧ ಸಂಖ್ಯೆಯಲ್ಲಿ ಶ್ರೋತೃಗಳನ್ನು ಆಕರ್ಷಿಸುತ್ತಿದೆ.

ಯರಗಟ್ಟಿ ಗ್ರಾಮದಲ್ಲಿ ಪ್ರವಚನ ಕಾರ್ಯಕ್ರಮ

ಬಸವ ಧರ್ಮ ಪೀಠದ ವತಿಯಿಂದ ಪೂಜ್ಯ ಶ್ರೀ ಡಾ॥ ಶ್ರದ್ಧಾನಂದಸ್ವಾಮಿಗಳ ಪ್ರವಚನ ಕಾರ್ಯಕ್ರಮವು ಬೆಳಗಾಂ ಜಿಲ್ಲೆಯ ಲೋಕಾಪುರ ಮತ್ತು ಯರಗಟ್ಟಿ ಗ್ರಾಮಗಳಲ್ಲಿ ಅಭೂತಪೂರ್ವವಾಗಿ ನಡೆದು, 30-4-90 ರಂದು ಮಂಗಲಗೊಂಡಿತು.

Kalyana Kirana - Monthly magazine Printed and Published by B. Shabhulingaiah, at Prabhudeva Printing Press, Basava Gangotri, Kumbalgod-560074

ಮುಡಿಪು

ಶರಣ ಮೇಳಕ್ಕಾಗಿ :

ಪ್ರತಿವರ್ಷವೂ ಬಸವ ಕ್ರಾಂತಿ ದಿನದಂದು (ಮಕರ ಸಂಕ್ರಾಂತಿ) ನಡೆಯುವ ಶರಣ ಮೇಳದಲ್ಲಿ ಭಾಗಿಗಳಾಗುವುದು ಎಲ್ಲರ ಆದ್ಯ ಕರ್ತವ್ಯ ಎಂದು ಭಾವಿಸಬೇಕು. ಮುಸ್ಲೀಮರಿಗೆ ಮೆಕ್ಕ, ಕ್ರೈಸ್ತರಿಗೆ ಜೆರೊಸಲೆಮ್, ಬೌದ್ಧರಿಗೆ ಗಯೆ, ಸಿಖ್ಖರಿಗೆ ಅಮೃತಸರ ಪವಿತ್ರ ಧರ್ಮಕ್ಷೇತ್ರವಾದಂತೆ ಬಸವ ತತ್ತ್ವಾನುಯಾಯಿಗಳಿಗೆ ಕೂಡಲ ಸಂಗಮವೇ ಧರ್ಮಕ್ಷೇತ್ರ. ಗುರು ಬಸವಣ್ಣನವರ ವಿದ್ಯಾಭೂಮಿ, ತಪೋಭೂಮಿ, ಐಕ್ಯಸ್ಥಾನ ಕೂಡಲ ಸಂಗಮದಲ್ಲಿ ವರ್ಷಕ್ಕೊಮ್ಮೆ ಬಸವ ತತ್ತ್ವಾನುಯಾಯಿಗಳು ಸೇರಲೆಂದೇ ರೂಪುಗೊಂಡಿದೆ ಚಾರಿತ್ರಿಕ ಶರಣ ಮೇಳ. ಪ್ರತಿಯೊಬ್ಬರೂ ಬರಲು ಆರ್ಥಿಕ ಅನುಕೂಲವಾಗಲೆಂದು ಈಗಿನಿಂದಲೇ "ಶರಣ ಮೇಳ" ಕ್ಕಾಗಿ ಮುಡಿಪು ತೆಗೆದಿಡಿ. ನೀವು ಬಂದು ಭಾಗಿಗಳಾಗಲು ಈ ನಿಧಿ ಸಹಕಾರಿಯಾಗುತ್ತದೆ. ಅಕಸ್ಮಾತ್ ನಿಮಗೆ ಬರಲು ಆಗದಿದ್ದರೂ ನಿಮ್ಮ ಕೊಡುಗೆಯನ್ನು ಕಳಿಸಿಕೊಟ್ಟು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಲು ಸಾಧ್ಯವಾಗುತ್ತದೆ.

ಬಸವ ಧರ್ಮ ಪೀಠಕ್ಕಾಗಿ :

ಬಸವ ಧರ್ಮ ಪೀಠ ಎಂಬ ಹೆಸರಿನ ಟ್ರಸ್ಟ್ ಕೂಡಲ ರಂಗಮದಲ್ಲಿ ಸ್ಥಾಪನೆಯಾಪಿದ್ದು, ಅದರ ವತಿಯಿಂದ ಸುಮಾರು ಒಂಬಿತ್ತೂವರೆ ಎಕರೆ ಜಮೀನನ್ನು ಖರೀದಿಸಲಾಗಿದೆ. ಈಗಾಗಲೇ ಅಲ್ಲಿ ಕಾರ್ಯಾಲಯಕ್ಕಾಗಿ ಒಂದು ಕಟ್ಟಡ ಹೊಂದಲಾಗಿದ್ದು, ಜಲಶೇಖರಣಾ ತೊಟ್ಟಿ ರಚನೆಯಾಗಿದೆ. ತಾತ್ಕಾಲಿಕವಾಗಿ ತೆಂಗಿನಗರಿಯ ಶೆಡ್ಡು ನಿರ್ಮಾಣಮಾಡಲಾಗಿದೆಯಾದರೂ ಶಾಶ್ವತ ಕಟ್ಟಡಗಳನ್ನು ಕಟ್ಟುವ ಯೋಜನೆ ಆರಂಭವಾಗಿದೆ. ದಾಸೋಹ ನಿಲಯ ವಸತಿ ಗೃಹ ಬಸವೇಶ್ವರ ಪೂಜಾ ಮಂಟಪ ಮುಂತಾದವು ಈಗ ಕೈಗೆ ಎತ್ತಿಕೊಂಡ ಯೋಜನೆಗಳು. ಇವುಗಳ ಪೂರೈಕೆಗಾಗಿ ಸಹೃದಯರು ತನು ಮನ ಧನಗಳಿಂದ ನೆರವು ನೀಡಬೇಕೆಂದು ಕೋರುತ್ತೇವೆ. ವ್ಯವಹರಿಸುವವರು ಎರಡರಲ್ಲಿ ಒಂದು ವಿಳಾಸಕ್ಕೆ ಬರೆಯಿರಿ.

ಕೇಂದ್ರ ಕಾರ್ಯಾಲಯ :	**ಶಾಖೆಯ ಕಾರ್ಯಾಲಯ :**
ಬಸವ ಧರ್ಮ ಪೀಠ	ಬಸವ ಧರ್ಮ ಪೀಠ
ಮಹಾಮನೆ ಆವರಣ	**ಬಸವ ಮಂಟಪ**, 2035, 2ನೇ ಬ್ಲಾಕ್
ಕೂಡಲ ಸಂಗಮ-587115	ಕಾರ್ಡ್ ರಸ್ತೆ, ರಾಜಾಜಿನಗರ
ತಾ- ಹುನಗುಂದ, ಜಿ- ಬಿಜಾಪುರ	ಬೆಂಗಳೂರು-560010

ಕಲ್ಯಾಣ ಕಿರಣ KRNB 312/BGW 92 APRIL 1990

